# ಎಸ್.ಡಿ. ಇಂಚಲ





ಬಾಳೇಶ ಲಕ್ಷೆಟ್ಟಿ

# ಎಸ್. ಡಿ. ಇಂಚಲ



( ಕವಿ ಕಾವ್ಯ ಜೀವನ )



ಬಾಳೇಶ ಲಕ್ಷೆಟ್ಟಿ



ಚೇತನ ಪ್ರಕಾಶನ, ಬೆಳಗಾವಿ

**S. D. Inchal :** ( A short biography ) By Balesh Laxetti
published by Chetan Prakashan, Belgaum

ಪ್ರಥಮ ಮುದ್ರಣ, ಎಪ್ರೀಲ, ೧೯೭೫


ಬೆಲೆ : ನಾಲ್ಕು ರೂಪಾಯಿಗಳು

ಶ್ರೀ. ಬಾಳೇಶ ಲಕ್ಷೆಟ್ಟಿ (ಜ. ೧೯೩೬)

ಮುಖಚಿತ್ರ : ಶ್ರೀ. ಕೆ. ಬಿ. ಕುಲಕರ್ಣಿ



ಅಧಿಕೃತ ಮಾರಾಟಗಾರರು :
ಎಸ್. ಡಿ. ಧರಮಟ್ಟಿ
ಶರತ್ ಪ್ರಕಾಶನ ಮಂದಿರ
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
೧೧೦೭, ಟಿಳಕ ಚೌಕ, ಬೆಳಗಾವಿ.



ಪ್ರಕಾಶನ :
ಶ್ರೀಮತಿ ಕಮಲಾದೇವಿ ಇಂಚಲ
ಚೇತನ ಪ್ರಕಾಶನ
ಜಾಲಗಾರ ಬೀದಿ, ಬೆಳಗಾವಿ

ಮುದ್ರಣ :
ಶ್ರೀ. ಟಿ. ವಿ. ಕುಲಕರ್ಣಿ,
ನೂತನ ಪ್ರಿಂಟಿಂಗ ಪ್ರೆಸ್
ಬೆಳಗಾವಿ

# ಅರ್ಪಣೆ

ಕನ್ನಡ ಸಾಹಿತ್ಯ ತಪಸ್ವಿ

ಡಾ. ಜ. ಚ. ನಿ. ಅವರಿಗೆ

ಭಕ್ತಿಪೂರ್ವಕ

# ಪರಿವಿಡಿ



ಶ್ರೀ ಇಂಚಲರು ತಮ್ಮ ಪತ್ನಿಯೊಂದಿಗೆ

[illegible],

[illegible]

[illegible]


(೧) [illegible] (೨) [illegible]

(೩) [illegible]

(೪) [illegible]

(೫) [illegible]

[illegible] (೬) [illegible]



ಶ್ರೀ. ಇಂಚಲರ ಹಸ್ತಾಕ್ಷರ

# ಪುಸ್ತಕದ ಮೊದಲು

" ಮುನ್ನುಡಿ " ಇರುವದೊಂದು ಸಂಪ್ರದಾಯ. ಆದರೆ ಶ್ರೀ. ಬಾಳೇಶ ಲಕ್ಷೆಟ್ಟಿಯವರು ರಚಿಸಿದ ನನ್ನ ದಿವಂಗತ ಮಿತ್ರರಾದ ಶ್ರೀ. ಎಸ್. ಡಿ. ಇಂಚಲ ಅವರ ವ್ಯಕ್ತಿ ಪರಿಚಯ, ಕೃತಿಪರಿಚಯವಿರುವ ಈ ಪುಸ್ತಕಕ್ಕೆ ಅದರ ಅವಶ್ಯಕತೆ ಇರಲಿಲ್ಲ.

ಶುಷ್ಕ ಶ್ರದ್ಧಾಂಜಲಿಗಿಂತ ದಿವಂಗತರು ಬಾಳಿದ ಬದುಕಿನ ಪರಿಚಯ ಮಾಡಿಕೊಳ್ಳುವದು, ಮಾಡಿಕೊಡುವದು ಮೇಲು ಎಂದು ತಿಳಿದ ನಾನು ನನ್ನ ಸ್ನೇಹಿತ ಶ್ರೀ. ಇಂಚಲ ಅವರ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತಿದ್ದೇನೆ. ಇದು ಮುನ್ನುಡಿಯಲ್ಲ; ಸ್ನೇಹ ಸೌರಭದ ಸುಗಂಧದ ಹುಡಿ.

ಶ್ರೀಯುತರು ಆಧುನಿಕ ಸಾಹಿತ್ಯದ ವಿಕಾಸಕ್ರಮದಲ್ಲಿ ಬೆಳೆದವರು. " ಪರದೇಶದ ಧರ್ಮ ಪ್ರಚಾರಕರ ಹಾಗೂ ವಿದೇಶಿ ಆಡಳಿತಗಾರರ ಸತತ ಪ್ರಯತ್ನಗಳ ಫಲವಾಗಿ ಪಾಶ್ಚಾತ್ಯ ಸಂಸ್ಕೃತಿ, ನಾಗರಿಕತೆಗಳೊಡನೆ ಉಂಟಾದ ಸಂಪರ್ಕದ ಪ್ರತಿಕ್ರಿಯೆ ಎಂಬಂತೆ ಮೂಡಿದ ಪುನರ್ಜಾಗರಣಯುಗ ಉದಯಿಸಿದಾಗ, ರಾಷ್ಟ್ರೀಯ ಆಂದೋಳನಗಳ ಪ್ರೇರಣೆಯಿಂದ ಸಾಹಿತ್ಯದಲ್ಲಿಯೂ ರಾಷ್ಟ್ರೀಯ ಸಾಂಸ್ಕೃತಿಕ ಚೈತನ್ಯ ಮಿಡಿಯುವಂತಾದಾಗ, ಸಾಮ್ಯವಾದಿ ವಿಚಾರ ಧಾರೆಯ ಪ್ರಚಾರದಿಂದಾಗಿ ದ್ವಂದ್ವಾತ್ಮಕ ಭೌತವಾದದ ಪ್ರಭಾವ ನೆಲೆಗೊಂಡಾಗ, ಎಲಿಯಟ್ ಮುಂತಾದವರ ಪ್ರಭಾವದಿಂದ ಆಧುನಿಕ ಜೀವನದ ಬೌದ್ಧಿಕ ಜಿಜ್ಞಾಸೆ ಮತ್ತು ಸ್ವಪ್ನಗಳಿಗೆ ಶಬ್ದ, ರೂಪಗಳನ್ನು ನೀಡುವತ್ತ ನಡೆಸಿದ ಹೊಸ ಪ್ರಯೋಗ ತಲೆದೋರಿದಾಗ, ಸ್ವಾತಂತ್ರ್ಯಾನಂತರ ವಿಶ್ವ ಕಲ್ಯಾಣದ ಭಾವನೆಯಿಂದ ಪ್ರೇರಿತವಾದ ರಾಷ್ಟ್ರೀಯ ಸಾಂಸ್ಕೃತಿಕ ಚೈತನ್ಯಕ್ಕೆ ದೊರೆತ ವ್ಯಾಪ್ತಿ, " ಇಂಥ ಆಧುನಿಕ ವಾಙ್ಮಯದ ವಿಕಾಸದೊಡನೆ ಬೆಳೆದವರು ಶ್ರೀ. ಇಂಚಲರು. ಅವರ ಸಾಹಿತ್ಯ ಪ್ರಪಂಚದಲ್ಲಿಯೂ ಈ ಅಭಿವ್ಯಕ್ತಿ ಕಂಡು ಬಂದಿ

ರುವುದನ್ನೆ ಅವರ ವ್ಯಕ್ತಿಚಿತ್ರವು ತೋರಿಸುತ್ತದೆ. ಅವರ ದಿನಚರಿಯಲ್ಲಿ ಇಂಚಲರ ಒಳಗಣ್ಣು ತೆರೆದಿದೆ; ಪತ್ರಗಳಲ್ಲಿ ಅನೇಕ ಉಲ್ಲೇಖನೀಯ ವಿಚಾರ ಗಳಿವೆ. ಒಳಗಣ್ಣು ಹೊರಗಣ್ಣನಿಂದ ನೋಡಿ ಅಂತರಂಗದ ಬಾಗಿಲವನ್ನು ತೆರೆದಿದೆ. ಸಾಹಿತಿಯ ಆತ್ಮಾಭಿವ್ಯಕ್ತಿ ಕಂಡಾಗ ಅಚ್ಚರಿ ಪಡಬೇಕಾದುದೇನಿಲ್ಲ. ಈ ಪತ್ರಗಳನ್ನು ಸಂಗ್ರಹಿಸಿ ಆಯ್ದುಕೊಂಡು ದಿನಚರಿಯನ್ನು ಅಭ್ಯಾಸ ಮಾಡಿ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಶ್ರಮವಹಿಸಿ ಶ್ರೀ. ಬಾಳೇಶ ಲಕ್ಷೆಟ್ಟಿ ಯವರು ವ್ಯಕ್ತಿಚಿತ್ರ ಕೊಟ್ಟಿದ್ದಾರೆ. ಇದು ಶ್ಲಾಘನೀಯ. ಗುರುಭಕ್ತಿ ಸ್ನೇಹ ವಿಭೂತಿ ಪೂಜೆ, ಉಪಕಾರಸ್ಮರಣೆ ಮೊದಲಾದ ಮಾನವೀಯ ಗುಣಗಳು ಈ ವೃತ್ತಕಥನಕ್ಕೆ ಸ್ಫೂರ್ತಿಯ ಸೆಲೆಯಾಗಿವೆಯೆಂದು ಧಾರಾಳವಾಗಿ ಹೇಳ ಬಹುದು. ಇದರ ಜೊತೆಗೆ ಗತಿಸಿದ ದೊಡ್ಡ ಚೇತನದ ನೆನಪನ್ನು ಊರ್ಜಿತ ಗೊಳಿಸಬೇಕೆಂಬ ಬಯಕೆಯೂ ಈ ಬಾಳ್ಗತೆಯನ್ನು ಜನರು ತಿಳಿಯಬೇಕೆಂಬ ಸದ್ಭಾವನೆ ಹಂಬಲವೂ ಮೂಡಿ, ಈ ಕೃತಿ ನಿರ್ಮಾಣವಾಗಿದೆಯೆಂದು ಅಭಿ ಮಾನದಿಂದ ಹೇಳಬಹುದು. ಇಂಥ ಬಾಳ್ಗತೆಗಳು ಮೂಡುವ ಬಗೆಯನ್ನೂ ಸ್ವರೂಪವನ್ನೂ ಕುರಿತು ಕುವೆಂಪು ಅವರು ಹೇಳುತ್ತಾರೆ "ಅನ್ಯರಲ್ಲಿದ್ದು ಸತ್ಯಕ್ಕೆ ತನಗಿಲ್ಲದ, ಆದರೂ ಪಡೆಯಲಾಶಿಸುವ ಮನೋಧರ್ಮ ಪ್ರಶಂಸೆಯ ರೂಪದಲ್ಲಿ ಮೊದಲು ಮೈದೋರುತ್ತದೆ. ಇಂದು ತಾನಾಗಿಲ್ಲದಿದ್ದರೂ ಮುಂದೆ ತಾನಾಗಲೇಬೇಕೆಂಬ ಎದೆ ಹಂಬಲ ತೀವ್ರವಾದಂತೆಲ್ಲ ಆ ಪ್ರಶಂಸೆ ಪೂಜಾರೂಪಕ್ಕೆ ತಿರುಗುತ್ತದೆ. ಪೂಜಾವಸ್ತು ಆದರ್ಶವಾಗಿ ಪರಿಣಮಿಸುತ್ತದೆ. ತನ್ನ ಆಕಾಂಕ್ಷೆಯ ಆತ್ಮಶ್ರೀಯನ್ನು ಪಡೆದಿರುವ ಆ ವ್ಯಕ್ತಿ ಪೂಜ್ಯನಾಗುತ್ತಾನೆ."

ಶ್ರೀ. ಬಾಳೇಶ ಲಕ್ಷೆಟ್ಟಿಯವರು ಶ್ರೀ. ಇಂಚಲರ ಬಗ್ಗೆ ಇಟ್ಟುಕೊಂಡ ಭಾವನೆ ಈ ಕೃತಿರಚನೆಗೆ ಸ್ಫೂರ್ತಿ.

ಜೀವನ ಚರಿತ್ರೆಗೆ, ವ್ಯಕ್ತಿಚಿತ್ರಕ್ಕೆ ಸಾಹಿತ್ಯದಲ್ಲಿ ಒಂದು ಸಾಧನವಿದೆ, ವ್ಯಕ್ತಿಯ ಕಥೆಯೇ ಜೀವನ ಚರಿತ್ರೆಯಾಗುತ್ತದೆಂಬ ಮಾತು ಸುಳ್ಳಲ್ಲ. ಕಥೆ, ಕಾದಂಬರಿ, ಸೃಷ್ಟಿಗೂ ಇದು ತಾಯಿಬೇರು.

ಸಾಮಾನ್ಯನಲ್ಲಿರುವ ನಿಷ್ಠೆ, ಪ್ರಾಮಾಣಿಕತೆ, ಪ್ರೀತಿ ಮೊದಲಾದ ಕಟ್ಟು ನಿಟ್ಟಾದ ಸಾಮಾನ್ಯ ಸ್ವಭಾವಗಳ ಅನುಷ್ಠಾನ ನಿಯಮವೇ ಅಸಾಮಾನ್ಯವಾಗಿ

ತೋರಬಹುದು. ಈ ಅಸಾಮಾನ್ಯತೆಯೆಂದು ತೋರುವ ಸಾಮಾನ್ಯ ಮಾನವೀಯ ಮೌಲ್ಯಗಳ ಆಚರಣೆಯಲ್ಲಿ ವ್ಯಕ್ತಿ ಯಾವ ಹಂತದಲ್ಲಿದ್ದರೂ, ಯಾವ ಸ್ತರದಲ್ಲಿದ್ದರೂ ಅವನು ಪೂಜನೀಯ. ಜೀವನಚರಿತ್ರೆಯ ವ್ಯಕ್ತಿ ಅಲೌಕಿಕವಾಗಿರಬಹುದು; ಮಹಾಶ್ರೇಷ್ಠ ಮುತ್ಸದ್ದಿಯಾಗಿರಬಹುದು ಈ ಮಹತಿಯೆ ಒರೆಗಲ್ಲು ಎನ್ನಲುಬಾರದು. ಆ ವ್ಯಕ್ತಿ ತನ್ನ ಬಾಳಿನ ಪರಿಸರದಲ್ಲಿ ಆದೆಷ್ಟು ಸಂವೇದನಾಶೀಲವಾಗಿ, ಸತತ ನಿಷ್ಠೆಯಿಂದ ಬಾಳಿದನೆಂಬುದೇ ಮುಖ್ಯ. ಜೀವನ ಚಿತ್ರಕ್ಕೆ ಅಸಾಮಾನ್ಯತೆ ಇರಬೇಕೆಂಬುದೇನಿಲ್ಲ; ಹಾಗೆ ಕೇಳಿದರೆ ಸಾಮಾನ್ಯ ಜೀವನದ ಬಾಳಹೋರಾಟವೇ ಬಾಳ್ತೆಗೆ ಕಥಾ ವಸ್ತು. ಬಾಳುವೆ ಅಮೋಘ; ಬಾಳಿದವನು ಅಮೋಘತರ, ಬದುಕು ದೊಡ್ಡದು; ಬದುಕನ್ನು ತಿಳಿದು ಬಾಳಿದವನು ಬದುಕಿಗಿಂತಲೂ ದೊಡ್ಡವನು. ಬದುಕಿನ ದೊಡ್ಡಿಸ್ತನಕ್ಕೆ ಬಾಳಿದ ವ್ಯಕ್ತಿಯ ಚರಿತ್ರೆಯೆ ಹಿರಿಮೆ.

ಶ್ರೀ. ಇಂಚಲರು ಶಿಕ್ಷಕರು, ಕವಿಗಳು, ಸಾಹಿತಿಗಳು. ಜೀವನದಲ್ಲಿ ಪ್ರೀತಿ ಪ್ರಾಮಾಣಿಕತೆ, ನಿಷ್ಠೆ, ಔದಾರ್ಯಗಳ ಬೆಲೆಯನ್ನು ಕಂಡು ಆಚರಿಸಿದವರು. ಒಲವಿನಲ್ಲಿ ಅವರಿಗೆ ಅಪಾರ ಭಕ್ತಿ. ಪ್ರೀತಿಸುವದೇ ಅವರ ಸ್ವಭಾವವಾಗಿತ್ತು ಕೊಂಕುಕೊಸರಿಲ್ಲದ ವಿಶುದ್ಧ ಪ್ರೀತಿ; ಒಲವು,

"ಪೂರ್ಣತ್ವ" ದ ಐದನೆಯ ಎಸಳಿನಲ್ಲಿ

"ಗುರುಸಿದ್ಧದೇವ" ರು

"ಮೇರುವನು ಎಡಕಿಟ್ಟು
ಪೂರ್ವಕ್ಕೆ ಇಡುಕತ್ತು
ಒಂದೆ ಸುತ್ತಿಗೆ ಉಂಟು
ದಿಶೆ ನಿನಗೆ ಬಲ, ಗೊತ್ತು;
ಗೊತ್ತು ಗುರಿ ಎಲ್ಲಕೂ
ಒಲುಮೆಯೇ ನಿಜಸೊತ್ತು
ಒಲಿಸು; ಪೂರ್ಣ ವಲಿಸದೆ
ಬಿಡಬೇಡ ಬೇಸತ್ತು,

ಎಂದು ಹೇಳಿದ ಮಾತನ್ನು ಶ್ರೀ. ಇಂಚಲರು ಜೀವದುದ್ದಕ್ಕೂ ಪಾಲಿಸಿದ್ದಾರೆ. ಪ್ರೀತಿಸುವದನ್ನು ಅವರು ಬೇಸತ್ತು ಎಂದೂ ಬಿಡಲಿಲ್ಲ. " ಸ್ನೇಹ ಸೌರಭ " ದ ಸುಗಂಧ ಗಾಳಿ ಸ್ನೇಹಿತರಿಗೆಲ್ಲ ಸುಳಿಗಾಳಿಯಾಗಿತ್ತು.

ದೇವಲೀಲೆಯೊ ಕಾಣೆ ಕರ್ಮಜಾಲವೊ ಕಾಣೆ
ಅದು ನಮ್ಮ ಬುದ್ಧಿಯಾಚೆಗಿನ ಮಾತು
ಯಾವುದೇನೇ ಇರಲಿ ಪ್ರೀತಿಯಂಥಾ ವಸ್ತು
ಭವದಲ್ಲಿ ಕಾಣೆ ಮನಗಂಡ ಮಾತು.

" ಮಧುರ ಚೆನ್ನ " ರಂತೆ ಶ್ರೀ. ಇಂಚಲರೂ ಇದನ್ನು ಮನಗಂಡಿದ್ದರು. ಅವರ ಕಾವ್ಯಜೀವನದಲ್ಲಿ ಪ್ರೀತಿಯ ಹೊನಲು ಧಮನಿ ಧಮನಿಗಳಲ್ಲಿಯೂ ಹರಿಯುತ್ತಿತ್ತೆಂಬುದಕ್ಕೆ ಅವರ ಪತ್ರಗಳು ಸಾಕ್ಷಿ ನುಡಿಯುತ್ತಿವೆ. ಜೀವನ ರಂಗದಲ್ಲಿ ಪ್ರೀತಿಯ ತರಂಗಗಳನ್ನೆಬ್ಬಿಸಿದ ಈ ಕವಿ ಭೃಂಗವು ಸದಾಕಾಲ ಈ ಒಲವಿನ ಗುಂಜಾರವವನ್ನು ಮಾಡುತ್ತ ವಿಶ್ವಉದ್ಯಾನಗಳಲ್ಲಿ ಸಮೀಚೀನವಾಗಿ ಅರಳಿದ ಸ್ನೇಹದ ಹೂಮಕರಂದವನ್ನು ಸೇವಿಸಿತು.

" ಸ್ನೇಹ ಸೌರಭ " ವೊಂದು ಸ್ನೇಹದ ಹಿರಿಮೆಗೆ ಬರೆದ ವ್ಯಾಖ್ಯಾನವೇ ಆಗಿದೆ.

ಶ್ರೀ. ಇಂಚಲರ ರಾಷ್ಟ್ರಭಕ್ತಿ ಅಸದಳ, ಕನ್ನಡನಾಡು ಇವರಿಗೆ ಸ್ಫೂರ್ತಿಯ ಸೆಲೆ, ಬೆಳಗಾವಿ ಕನ್ನಡದ ಉಸಿರೆಂಬುದು ಇವರ ಜೀವ ಸಿದ್ಧಾಂತ. ಬೆಳಗಾವಿ ಕನ್ನಡದ್ದೆಂಬ ಸತ್ಯವನ್ನೇ ಸತ್ಯವೆಂದು ಪ್ರತಿಪಾದಿಸುವದೇ ಈ ಪ್ರಜಾಪ್ರಭುತ್ವದಲ್ಲಿ ಅವರು ಮಾಡಿದ ಕೆಲಸ. ಬೆಳಗಾವಿಯ ಒಂದು ಅಂಗುಲವನ್ನೂ ಮಹಾರಾಷ್ಟ್ರಕ್ಕೆ ಕೊಡಕೂಡದೆಂಬುದು ಇವರ ಪ್ರತಿಜ್ಞೆ. ಇದನ್ನು ಸಾಧಿಸಲು ಇವರು ಎಲ್ಲರೊಡನೆ ಹೋರಾಡಿದರು. ಉಜ್ವಲವಾದ ಭಾಷಣ ಮಾಡಿದರು. ಕನ್ನಡದ ' ಡಿಂಡಿಮ ' ವನ್ನು ಬಾರಿಸಿದರು. ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ ಕನ್ನಡ ಚೇತನವನ್ನು ತುಂಬಿದರು. ಕನ್ನಡ ಮಂತ್ರವನ್ನು ಶ್ರೀ. ಇಂಚಲರು ತಮ್ಮ ಜೀವದುಸುರಿಗೆ ಜೋಡಿಸಿದರು. ದೀಕ್ಷಾಬದ್ಧರಾದರು.

ಬೆಳಗಾವಿಯ ಕನ್ನಡ ಚಟುವಟಿಕೆಗಳಲ್ಲಿ ಇವರ ಪಾತ್ರ ಹಿರಿದು. ಕನ್ನಡ ಕವಿಸಮ್ಮೇಲನ, ಜಿಲ್ಲಾ ಸಾಹಿತ್ಯ ಪರಿಷತ್ತು ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಬೆಳಗಾವಿಯ ಜೀವನಾಡಿಯನ್ನು ಹಿಡಿದರು.

ಇವರ ಕನ್ನಡನಾಡಿನ ಭಕ್ತಿ, ಬೆಳಗಾವಿಯ ಪ್ರೀತಿ ಸಂಕುಚಿತವಾದುದಾಗಿರಲಿಲ್ಲ. ರಾಷ್ಟ್ರಭಕ್ತಿಯ ಸ್ವರೂಪವೇ ಇವೆಲ್ಲ. ಭಾರತವೇ ಸ್ಫೂರ್ತಿಯ ಆಗರ. ಕನ್ನಡ ತಾಯಿ 'ಭಾರತ ಮಾತೆಯ ನಿಜ ತನುಜಾತೆ'.

ಶ್ರೀ. ಇಂಚಲರು ವೀರಕವಿ, ಅವರ ಮಾತುಗಳಲ್ಲಿ ಗಡಸುತನ, ಕೆಚ್ಚು ಓತಪ್ರೋತವಾಗಿ ಹರಿಯುತ್ತವೆ. ಕನ್ನಡ ಕಾವ್ಯ ಮೇಳದಲ್ಲಿ ಶ್ರೀ. ಎಸ್. ಡಿ. ಇಂಚಲ ಅವರ ಕಾವ್ಯಧ್ವನಿ ಎಂದೋ ಬೆರೆತು ಮಧುಮಧುರ ತರಂಗಗಳನ್ನೆಬ್ಬಿಸಿದೆ. ನಾಡಿನ ಸುಪ್ತಚೇತನಕ್ಕೆ ವೀರ ಗಾಳಿ ಬೀಸಿ ವೀರಗೀತಗಳನ್ನು ಹಾಡಿದ್ದು ನಾಡಗೀತಗಳನ್ನು ಹಾಡಿ ನಾಡನಂದಾದೀಪವನ್ನು ಬೆಳಗಿದೆ. ಇದು ದಿವ್ಯ ಪರಂಜ್ಯೋತಿಗೆ ಶರಣಾದ ಕನ್ನಡದ ಹಣತೆಯಾಗಿದೆ. 'ತರಂಗಿಣಿ' ಯಾಗಿ 'ಸ್ನೇಹಸೌರಭ' ತುಂಬಿದ ಈ ಪ್ರಣತಿಯು ಚಾಚಿದ ಬತ್ತಿ 'ಡಿಂಡಿಮ' ದಲ್ಲಿ ಜಗ್ಗಜಗ್ಗನೆ ಬೆಳಗಿ ಸದಾ ಉರಿಯುತ್ತಲೇ ಇದೆ. ಶಾಂತ, ಪ್ರಶಾಂತ ಧೀರ, ಗಂಭೀರ, ಭಾವರಸದೈಕ್ಯದಲ್ಲಿ ಜೇನು ಹನಿ.

ಜನಜೀವನದ ಜೀವಸಾಮಗ್ರಿಯೇ ಕವಿಗೆ ಸ್ಫೂರ್ತಿ. ಅವನು ಬಾಳ ಭೇರೀರವವಾಗಿ ನಿಲ್ಲುವ ಸಮಯ ಬಂದಾಗ 'ಡಿಂಡಿಮ'ವನ್ನು ಮೊಳಗುತ್ತಾನೆ.

ಬಡವರು ಬಲ್ಲಿದರೆಲ್ಲರು ಏಳಿ
ರಣಡಿಂಡಿಮ ತಾ ಮೊಳಗುತಿದೆ.

ಎಂದು ಚೈತನ್ಯವನ್ನು ಎಚ್ಚರಿಸುತ್ತಾನೆ

ನೇಗಿಲ ಮೊನೆಯಲಿ ಅನ್ನದ ಸೆಲೆಯಿದೆ
ದುಡಿಯಲಿ ರೈತನ ತೋಳುಗಳು
ತ್ಯಾಗದ ಕೊನೆಯಲಿ ಸಿದ್ಧಿಯ ಫಲವಿದೆ
ಬೆವರಿನ ಹನಿಗಳೆ ಮುತ್ತುಗಳು.

ಎಂದು 'ಬೆವರಿನ ಬೆಲೆ' ಯನ್ನು ಹೇಳಿ ತಮ್ಮ ರಾಷ್ಟ್ರಪೋಷಕ ದೃಷ್ಟಿಯನ್ನು ವಿಜೃಂಭಿಸಿದ್ದಾರೆ.

ನಾಡು ಬದುಕಿದರೆ ನಾವು ಬದುಕುವುದು
ಸ್ವಾತಂತ್ರ್ಯವೆ ನಾಡಿನ ಪ್ರಾಣ !
ಪೌರುಷ ಚೇತನ ಭಾರತ ಕೇತನ
ಹಾರಾಡಲಿ ಅದು ಚಿರಂತನ
ಅಭಿಮಾನ ಧನ;

ಈ ರಾಷ್ಟ್ರಾಭಿಮಾನದ ಸಂದೇಶವು ಸತ್ಯಚಿರಂತನ; ನಿತ್ಯ ಚಿರನೂತನ. ಇಂಥ ಸಮರ ಭೇರಿಯ ಹದವನ್ನು ರಸೋದ್ದೀಪನದಲ್ಲಿ ಪಕ್ವವಾದ ಕವಿಯೇ ಮೊಳಗಿಸಬಲ್ಲನು.

ಇಂಥ ಕವಿ ನಮ್ಮ ಇಂಚಲರು.

"ಡಿಂಡಿಮ" ದಲ್ಲಿ ಸಮರೋತ್ಸಾಹದ ವೀರ ದನಿ ಮೊಳಗುವಂತೆ ನಾಡನ್ನು ಕಟ್ಟುವ ಹಂಬಲದ ರಾಷ್ಟ್ರಪೋಷಕ ಕ್ರಿಯಾಶೀಲ ಚಟುವಟಿಕೆಗಳ ಸೂಚನಾ ತರಂಗಗಳೂ ಹೊಮ್ಮಿವೆ.

ಈ ಕವನಸಂಕಲನದ ವೈಶಿಷ್ಟ್ಯವಿದು.

ಈ ಕವಿ ಚೇತನವು ನಾಡಶಿಲ್ಪಿಯನ್ನು ಸ್ಮರಿಸುವ ವೈಖರಿಯನ್ನು ನೋಡಿ.

ಶಾಂತಿದೂತ ನೆಹರು, 'ಅಮರ ಬಾಪೂಜಿಗೆ ಅವನೆ ಔರಸ ಪುತ್ರ, ಧಾರುಣಿಗೆ ಸದ್ಧರ್ಮ ಸಾಧನೆಯ ನೇತ್ರ.'

ನೇಹರು ತೇಜಕ್ಕೆ "ಹೋರಾಟವೆ ಹರುಷ ಪಂಚಶೀಲವೆ ಪರುಷ" ಎಂದು ಹೇಳಿದ ಮಾತು ಅದೆಷ್ಟು ಸವಿಯಾಗಿದೆ.

" ಧರೆಯ ಮಕ್ಕಳ ಮಮತೆ ಮೈವೆತ್ತ ನಾಡೋಜ ....
ಓ ! ..... ನಮ್ಮ ಚಾಚಾಜಿ ! .... ನೀನು
ಹಣ್ಣಾದೆ, ಸಣ್ಣಾದೆ, ಜಗದ ಕಣ್ಣಾದೆ ಚಿನ್ನ !
ನಿಮ್ಮ ಆಶೀರ್ವಾದ ನಮಗೆ ಗಂಗೋತ್ರಿ;
ನಿಮ್ಮಭಯ ಸಂದೇಶ ಜಗಕೆ ಗಾಯತ್ರಿ.

ಎಂಬ ಇಂಚಲರ ಮಾತುಗಳು ವಿಶ್ವಭಾವನೆಯ ನಿರ್ಮಲ ಚಿತ್ತದಿಂದ ಮೂಡಿ ಬಂದ ವಿಶ್ವವಾಣಿಗಳೇ ಆಗಿವೆ.

ಹೀಗೆ ಶ್ರೀ. ಇಂಚಲರ ಕಾವ್ಯದನಿ ಆಳ ವಿಸ್ತಾರಗಳನ್ನು ಪಡೆದು ಕೊಂಡು ಧೀರಗಂಭೀರ ಗಮನದಿಂದ ವಿಶಿಷ್ಟವಾಗಿ ಮೂಡಿದೆ, ಉತ್ತರ ಕರ್ನಾಟಕದ ಗಂಡುಶೈಲಿ ಕಾವ್ಯ ಚೇತನದಲ್ಲಿ ದನಿ ಎಬ್ಬಿಸಿ ಟಂಕಾರ ಮಾಡಿದೆ.

ಶ್ರೀ. ಇಂಚಲರು ಧನ್ಯ ಕವಿಯಾಗಿದ್ದಾರೆ.

ಶ್ರೀ. ಇಂಚಲರು ಸ್ನೇಹಜೀವಿ. 'ಸಂಸಾರ ಸಾರೋದಯ' ದಲ್ಲಿ ಪ್ರೀತಿ, ಅಂತಃಕರಣಗಳ ಹೊನಲು ಹರಿಸಿದ ತಂದೆ. ಮಡದಿ ಮಕ್ಕಳೊಡನೆ ಹಾಲು ಜೇನಾಗಿ ಬೆರೆತ ಜೀವಿ, ಸಾಹಿತ್ಯ ಕೆಲಸದಲ್ಲಿ, ಜೀವನ ನಿರ್ವಹಣ ದಲ್ಲಿ ಹೆಂಡತಿ ಇವರ ಭಾಗ್ಯವಂತೆ. ಈ ಭಾಗ್ಯವನ್ನು ಪಡೆದ ಕವಿಗೆ ಜೀವನ ರಸೋಲ್ಲಾಸವಾಗಿದ್ದರೆ ಅಚ್ಚರಿಯೇನು ?

ಶ್ರೀ. ಇಂಚಲರು ಇಷ್ಟು ಬೇಗನೆ ನಮ್ಮನ್ನೆಲ್ಲ ಅಗಲಿ ಹೋಗುತ್ತಾ ರೆಂಬುದು ಯಾರಿಗೆ ತಿಳಿದಿತ್ತು ?

ವಿಧಿಯ ಕೈವಾಡದ ಮುಂದೆ ಮಾನವರು ಹತಾಶರಷ್ಟೆ.

ಅವರ ಪ್ರಕಟಿತ ಕವನಗಳ ಇಮ್ಮಡಿ ಮುಮ್ಮಡಿ ಅಪ್ರಕಟಿತ ಕವನಗಳಿವೆ. ಸಾಧ್ಯವಾದಷ್ಟು ಬೇಗ ಅವನ್ನು ಪ್ರಕಟಿಸುವದು ಅವರ ಅಭಿಮಾನಿಗಳ ಕರ್ತವ್ಯ ವೆಂದು ಬಗೆಯುತ್ತೇನೆ.

ಶ್ರೀ. ಇಂಚಲರ ಸಾವು ತೀರಾ ಅನಿರೀಕ್ಷಿತ. ಕನ್ನಡಕ್ಕಾಗಿ, ಕನ್ನಡಜನತೆಗಾಗಿ ಅವರು ಮಾಡಿದ ಕೆಲಸ ಅಪಾರ. ಅರವತ್ತು ತುಂಬಿದ ಅವರನ್ನು ಸತ್ಕರಿಸುವ ಸಿದ್ಧತೆ ನಡೆದಾಗಲೆ ಅವರು ನಡೆದು ಬಿಟ್ಟರು.

“ ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು ।
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ॥
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ ।
ಹೊರಡು ಕರೆ ಬರಲ್ ಅಳದೆ–ಮಂಕುತಿಮ್ಮ ॥

(ಮಂಕುತಿಮ್ಮನ ಕಗ್ಗ–೬೦೧)

ಶ್ರೀ. ಇಂಚಲರು ಡಿ. ವಿ. ಜಿ. ಹೇಳಿದ ಹಾಗೇ ಜೀವದುದ್ದಕ್ಕೂ ನಡೆದುಕೊಂಡರು. ಕರೆಬಂದ ಕೂಡಲೆ ಹೊರಟು ಬಿಟ್ಟರು.

ಆ ದಿನ (೮–೪–೧೯೭೪–) ‘ ಸಂಯುಕ್ತ ಕರ್ನಾಟಕ ’ ದಲ್ಲಿ ಎರಡು ಸುದ್ದಿಗಳು ಪ್ರಕಟವಾಗಿದ್ದವು. ಗುರುವರ್ಯ ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ಸಿಕ್ಕದ್ದು ಒಂದು ಸುದ್ದಿ. ಓದಿಹರುಷವಾಯಿತು. ಮಗಳು ಚಿ. ವಿದ್ಯಾನಿಗೆ ಈ ಸುದ್ದಿಯನ್ನು ಹೇಳಿ ಸಂತೋಷದಿಂದ ನಲಿದೆ. ಅವಳು ನನ್ನಿಂದ ‘ ಸಂಯುಕ್ತ ಕರ್ನಾಟಕ ’ವನ್ನು ಆತುರ ಆತುರದಿಂದ ತಗೆದುಕೊಂಡು ಓದಿ

‘ ಚಿಕ್ಕಪ್ಪ ’ ನೀನು ಓದಲಿಲ್ಲವೇನೋ ! ನಿನ್ನ ಸ್ನೇಹಿತರು ಹೋಗಿ ಬಿಟ್ಟರು. ಎಸ್. ಡಿ. ಇಂಚಲ ನಿಧನರಾದರು.

ಈ ಎರಡನೆಯ ಸುದ್ದಿಯನ್ನು ಓದಿ ದಿಙ್ಮೂಢನಾದೆ.

ಸಿಹಿ ತಿಂದ ನಾಲಗೆಯ ಮೇಲೆ ಕಹಿಕುಳಿತಂತಾಯಿತು.

ಜೀವನ ಅದೆಷ್ಟು ಕ್ಷಣಭಂಗುರ !

ಇಡೀದಿನ ಶೋಕದಿನವೇ ಆಯಿತು. ಈ ‘ ಸ್ನೇಹ ಜೀವಿ ’ ಗೆ ಕಣ್ಣೀರ ಕಾಣಿಕೆ !

ಸಾಯುವ ಮುನ್ನಾದಿನ ಮನೆಯಲ್ಲಿ ಸರಸದ ಹರಟೆ ನಡೆದಾಗ ಶ್ರೀ. ಇಂಚಲರು ಹೇಳಿದರಂತೆ. " ಈ ಬಸ್ಸು ಕೆಟ್ಟರ ರಿಪೇರಿ ಮಾಡಬೇಕು. ರಿಪೇರಿನೂ ಸರಿಯಾಗದಿದ್ದರ ಚಲ್ಲಿ ಕೊಡಬೇಕು."

ಈ ಮಾತು ಅನಿರೀಕ್ಷಿತವಾದರೂ ಸಾಂಕೇತಿಕವಾಗಿ ಪರಿಣಮಿಸಿತು.

ಅನೇಕ ಪ್ರಯಾಣಿಕರಿಗೆ ಸುಖ ಪ್ರಯಾಣ ಸೌಕರ್ಯವನ್ನು ಒದಗಿಸಿದ ಈ ಬಸ್ಸು ನಿಂತು ಬಿಟ್ಟಿತು.

ಜೀವನದ ಕೊನೆ, ಸಾವೇ ಎಂದೇಕೆ ತಿಳಿದುಕೊಳ್ಳಬೇಕು, ದಾರ್ಶನಿಕ ಕವಿ ಡಿ. ವಿ. ಜಿ. ಹೇಳಿದಂತೆ,

ಸತ್ತೆನೆಂದೆನಬೇಡ; ಸೋತೆನೆಂದೆನಬೇಡ ।
ಬತ್ತಿತೆನ್ನೊಳು ಸತ್ವದೂಟೆಯುನಬೇಡ ॥
ಮೃತ್ಯುವೆನ್ನುವದೊಂದು ತೆರೆಯಿಳಿತ; ತೆರೆ ಏರು ।
ಮತ್ತೆ ತೋರ್ಪುದು ನಾಳೆ – ಮಂಕುತಿಮ್ಮ ॥

(ಮಂಕುತಿಮ್ಮನ ಕಗ್ಗ – ೫೯೩)

ಪುಸ್ತಕದ ಮೊದಲು ಹೇಳಬೇಕೆಂಬ ಮಾತುಗಳು ಇಷ್ಟು ಸಾಕೆಂದು ತೋರುತ್ತದೆ.

" ಆಶೀರ್ವಾದ "
ಸಾಹಿತ್ಯ ಸೇವಾ ಮಂದಿರ,
ಗೋಕಾಕ
೧೯೭೫

ಕೃಷ್ಣಮೂರ್ತಿ ಪುರಾಣಿಕ

# ಅರಿಕೆ

ಶ್ರೀ. ಎಸ್. ಡಿ. ಇಂಚಲರು ಕಾವ್ಯ ಹಾಗು ಶಿಕ್ಷಣದ ಮೂಲಕ ಜನ ಜೀವನಕ್ಕೆ ಉದಾತ್ತ ಸಂಸ್ಕಾರ ನೀಡಿದ ಹಿರಿಯ ವ್ಯಕ್ತಿಗಳು. ಇಂಚಲರ ಜೀವನ, ಸಾಹಿತ್ಯ, ಅವರು ಮಾಡಿದ ಕಾರ್ಯಗಳ ಬಗ್ಗೆ ಗ್ರಂಥವೊಂದನ್ನು ಬರೆಯಬೇಕೆಂದು ಬಹುದಿನಗಳಿಂದಲೂ ಯೋಚಿಸುತ್ತಿದ್ದೆ. ಅದು ಇಂದು ಕಾರ್ಯರೂಪಕ್ಕೆ ಬಂದುದು ಸಂತೋಷದ ಸಂಗತಿ. ಇಲ್ಲಿ ಶ್ರೀ. ಇಂಚಲರ ಕಾವ್ಯದ ಹಾಗು ಅವರು ಮಾಡಿದ ಕಾರ್ಯಗಳ ಸಮಗ್ರ ವಿವೇಚನೆಯಿದೆ ಯೆಂದು ನಾನು ಹೇಳಲಾರೆ. ಇಂಚಲರ ವ್ಯಕ್ತಿತ್ವ ಹಾಗೂ ಕೃತಿಗಳಲ್ಲಿಯ ಸ್ಥೂಲ ಪರಿಚಯವು ಈ ಗ್ರಂಥದ ಮೂಲಕ ಜನತೆಗೆ ವೇದ್ಯವಾದರೆ ಈ ಶ್ರಮ ಸಾರ್ಥಕವೆಂದು ಭಾವಿಸಿದ್ದೇನೆ.

ಇಂಚಲರ ಜೀವನ ಪರಿಚಯ ಗ್ರಂಥ ಬರೆಯುವಾಗ ಅನೇಕ ಮಹನೀಯರು ನೆರವಾಗಿದ್ದಾರೆ. ಈ ಪ್ರಸಂಗದಲ್ಲಿ ಹಿರಿಯ ಕವಿ ಡಾ. ಡಿ. ಎಸ್. ಕರ್ಕಿಯವರನ್ನು ನಾನು ವಿಶೇಷವಾಗಿ ಸ್ಮರಿಸಬೇಕು. ನಾನು ಕೇಳಿದ್ದಕ್ಕೆಲ್ಲ ಉತ್ತರಿಸಿ ವಿಷಯ ಸಾಮಗ್ರಿ ಒದಗಿಸಿದ್ದಾರೆ. ಇಂಚಲರ ಪ್ರಾಥಮಿಕ ಶಾಲೆಯ ಗುರುಗಳಾದ ಶ್ರೀ. ಹೊಳೆಪ್ಪ (ಮಾಸ್ತರರು) ಬಾಗೇವಾಡಿಯವರು. ವಿದ್ಯಾರ್ಥಿ ಜೀವನದ ಮಾಹಿತಿ ನೀಡಿ ಹರಸಿದ್ದಾರೆ. ವಿಷಯಸಂಗ್ರಹಣೆಗಾಗಿ ನಾನು ಇಂಚಲರ ಜನ್ಮಸ್ಥಳ ಹಿರೇಬಾಗೇವಾಡಿಗೆ ಹೋದಾಗ ಸರ್ವಶ್ರೀ ಶಿವನಗೌಡ ಪಡಿಗೌಡ ಪಾಟೀಲ, ರಾಮನಗೌಡಾ ಬಿ. ಪಾಟೀಲ, ಬಿ. ಎ. ದೇಸಾಯಿ, ನಾಗೇಂದ್ರ ಬಿ. ಪಾಟೀಲ ಪ್ರಭೃತಿಗಳು ತುಂಬು ಅಂತ:ಕರಣದಿಂದ ಬರಮಾಡಿ ಕೊಂಡು ಉಪಯುಕ್ತ ಮಾಹಿತಿ ಒದಗಿಸಿದ್ದಾರೆ. ಮಿತ್ರರಾದ ಸರ್ವಶ್ರೀ ಆರ್. ಎಲ್. ಸೂಜಿ, ಈಶ್ವರ ಕಾಪಸೆ, ಶಿವಕುಮಾರ ಮೂಗಿ ಅವರುಗಳು 'ಪತ್ರಗಳ ಮುಖಾಂತರ' ನೆರವಾಗಿದ್ದಾರೆ. ಶ್ರೀ. ಇಂಚಲರ ಕುಟುಂಬ ವರ್ಗಕ್ಕೆ ಸೇರಿದ ಎಲ್ಲರೂ ಈ ಕಾರ್ಯದಲ್ಲಿ ಅಮೌಲ್ಯ ನೆರವು ನೀಡಿದ್ದಾರೆ. ಸರ್ವರಿಗೂ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಗ್ರಂಥದಲ್ಲಿ ಉಪ ಯೋಗಿಸಿಕೊಳ್ಳಲು ಇಂಚಲರು ಬರೆದ ಪತ್ರಗಳನ್ನು ಒದಗಿಸಿದ ಸರ್ವಮಿತ್ರರ ಉಪಕಾರವನ್ನು ಸ್ಮರಿಸುತ್ತೇನೆ.

‘ಮೊದಲ ಮಾತು’ ರೂಪದಲ್ಲಿ ಗ್ರಂಥಕ್ಕೆ ವಿಮರ್ಶಾತ್ಮಕವಾದ ಸುದೀರ್ಘ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ ಇಂಚಲರ ಪರಮ ಮಿತ್ರರೂ, ನನ್ನ ಪ್ರೀತಿಯ ಗುರುಗಳೂ ಆದ ‘ಕಾದಂಬರಿ ಶ್ರೀ’ ಶ್ರೀ. ಕೃಷ್ಣಮೂರ್ತಿ ಪುರಾಣಿಕರಿಗೆ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಗ್ರಂಥವು ಶ್ರೀ. ಇಂಚಲರು ಸ್ಥಾಪಿಸಿದ ಚೇತನ ಪ್ರಕಾಶನದಲ್ಲಿ ಪ್ರಕಟವಾಗುತ್ತಿರುವದು ಉಚಿತವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಾನ್ಯ ಶ್ರೀ. ಜಿ. ನಾರಾಯಣ ಬೆಂಗಳೂರು ಅವರು ಗ್ರಂಥ ಬಿಡುಗಡೆ ಮಾಡಲು ಒಪ್ಪಿಕೊಂಡದ್ದು ತುಂಬಾ ಸಂತಸದ ಸಂಗತಿಯಾಗಿದೆ.

ಕನ್ನಡ ಸಾಹಿತ್ಯ ತಪಸ್ವಿಗಳಾದ ಪರಮ ಪೂಜ್ಯ ಡಾ. ಜ. ಚ. ನಿ. ಅವರ ಪಾದಾರವಿಂದಗಳಲ್ಲಿ ಭಕ್ತಿಭಾವದಿಂದ ಗ್ರಂಥವನ್ನು ಸಮರ್ಪಿಸಿದ್ದೇನೆ. ಅವರ ಮಂಗಲ ಆಶೀರ್ವಾದ ಸದಾವಕಾಲ ನನ್ನ ಮೇಲಿರಲೆಂದು ಪ್ರಾರ್ಥಿಸುತ್ತೇನೆ.

ಬೆಳಗಾವಿ ಚೇತನ ಪ್ರಕಾಶನದ ಹೆಮ್ಮೆಯ ಪ್ರಕಟನೆಯಾಗಿ ಈ ಗ್ರಂಥವು ಹೊರಬಂದಿದೆ. ತಮ್ಮ ಪ್ರಕಾಶನದಲ್ಲಿ ಪ್ರಕಟಿಸಿದ ಚೇತನ ಪ್ರಕಾಶನದ ಒಡೆಯರಿಗೆ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದವಾಗಿ ಮುದ್ರಿಸಿಕೊಟ್ಟ ಆತ್ಮೀಯ ಮಿತ್ರರೂ, ನೂತನ ಮುದ್ರಣಾಲಯದ ಒಡೆಯರೂ ಆದ ಶ್ರೀ. ಟಿ. ಎ. ಕುಲಕರ್ಣಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುದ್ರಣ ಕಾರ್ಯದಲ್ಲಿ ನೆರವಾದ ಪ್ರೊ. ಬಿ. ಎಂ. ಮಗದುಮ್, ಶ್ರೀ. ವ್ಹಿ. ಜಿ. ಪಾಟೀಲ ಹಾಗೂ ಬಂಧು ಮಿತ್ರರಿಗೆ ನನ್ನ ನೆನಕೆಗಳು ಸಲ್ಲಬೇಕು. ರಕ್ಷಾಕವಚಕ್ಕೆ ಸುಂದರ ಚಿತ್ರವನ್ನು ಬರೆದುಕೊಟ್ಟ ಮಿತ್ರ ಶ್ರೀ. ಕೆ. ಬಿ. ಕುಲಕರ್ಣಿಯವರಿಗೆ ವಂದನೆಗಳು ಸಲ್ಲಬೇಕು.

ನಮ್ಮ ಯುವ ಜನಾಂಗಕ್ಕೆ ಶ್ರೀ. ಇಂಚಲರ ಜೀವನ, ಸಾಧನೆ, ಆದರ್ಶಗಳು ಸ್ಫೂರ್ತಿಯನ್ನು ನೀಡಲೆಂದು ಆಶಿಸುತ್ತೇನೆ.

“ಗಂಗಾನಿಲಯ”
ಗೋಕಾಕ
೧೫–೪–೧೯೭೫

–ಬಾಳೇಶ ಲಕ್ಷೆಟ್ಟಿ

# ಒಪ್ಪೋಲೆ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೯ | ೪ | ಟಿ. ಸಿ. ಇಟಗಿ | ಜಿ. ಸಿ. ಇಟಗಿ |
| ೧೦ | ೧೫ | ಮುಂದುವಶಿಸಲು | ಮುಂದುವರಿಸಲು |
| ೧೩ | ೧೨ | ಮಾಡಿರಿಲಿಕ್ಕಿಲ್ಲ | ಮಾಡಿರಲಿಕ್ಕಿಲ್ಲ |
| ೨೫ | ೫ | ಭರಸವಸೆ | ಭರವಸೆ |
| ೨೬ | ೨೨ | ೨-೧೭-೧೯೬೧ | ೨-೧೧-೧೯೬೯ |
| ೩೪ | ೧ | ೩೨-೫-೧೯೬೪ | ೩೧-೫-೧೯೬೪ |
| ೪೦ | ೧೯ | ಪ್ರಾಸಾದವೆಂದು | ಪ್ರಸಾದವೆಂದು |
| ೪೭ | ೨೦ | ಮಾಧ್ಯಮಿಕ ಸಂಘದ | ಮಾಧ್ಯಮಿಕ ಶಿಕ್ಷಕ ಸಂಘದ |
| ೪೮ | ೨ | ಆವ್ಹಾನಿಸಿದರು | ಆಹ್ವಾನಿಸಿದರು |
| ೫೦ | ೫ | (wishfull Thanking) | (wishful Thinking) |
| | | ಆಕ್ಷೇಪಾರ್ಹ ಕೃತಿಯಾಗಿದೆ | ಅಪೇಕ್ಷಾಕೃತ ಅನುಮಾನ |
| ೫೧ | ೬ | ದೇಶಗಳಿಗೆ | ವಿದೇಶಗಳಿಗೆ |
| ೫೩ | ೨೬ | ತಸ್ಪಿಲ್ಲಯು | ತಪ್ಪೆಲ್ಲ |
| ೫೪ | ೧೩ | ಝುಬಳ | ಝುಳ |
| ೫೬ | ೧೮ | ಎಸೆದ | ಎಸೆವ |
| ೫೬ | ೧೮ | ನೋಡುತ್ತ | ನೋಡಿದತ್ತ |
| ೫೭ | ೧೫ | ಮದುವೆಯಾಗುತ್ತಾಳೆ | ಮುದುಕಿಯಾಗುತ್ತಾಳೆ |
| ೫೭ | ೨೦ | ಪ್ರೆಮಭಾವವೇ | ಪ್ರೇಮಭಾವವೇ |
| ೬೧ | ೧ | ನಮ್ಮ | ತಮ್ಮ |
| ೬೬ | ೯ | ೧೯೫೦ ರಕ್ಕಿಂತಲೂ | ೧೯೫೦ ರಕ್ಕಿಂತಲೂ |
| ೬೯ | ೧೨ | ಏನುದೇನಿದು ! | ಏನಿದೇನಿದು ! |
| ೬೯ | ೧೪ | ಅಶ್ವಮೇಧ | ವಿಶ್ವಮೇಧ |
| ೭೦ | ೧೪ | ಭಾರತೀಯು | ಭಾರತಿಯು |
| ೭೧ | ೧೭ | ಲಕ್ಷಣವನ್ನು ಕುರಿತು | ಲಕ್ಷಣವನ್ನು |
| ೭೪ | ೮ | ತೋರಿಸುತ್ತದೆ | ತೋರಿಸುತ್ತವೆ |
| ೭೬ | ೨ | ಮಸ್ತರದುರಿಯು | ಮತ್ಸರದುರಿಯು |
| ೭೮ | ೪ | ಶುಭವೇನ್ನಿ | ಶುಭವನ್ನಿ |
| ೭೯ | ೨೪ | ಸುತ್ತವಿಹುದು | ಸುಪ್ತವಿಹುದು |
| ೮೦ | ೧೧ | ಇಂಚಲರೂ | ಇಂಚಲರು |
| ೯೨ | ೨೧ | ಚೆನ್ನಮ್ಮ | ಚೆನ್ನಮ್ನ |

# ಜೀವನ ಚಿತ್ರ

ಶ್ರೀ ಶಿವಪುತ್ರಪ್ಪ ದೇಮಪ್ಪ ಇಂಚಲ (ಸಾರ್ವಜನಿಕರಿಗೆಲ್ಲ ಎಸ್. ಡಿ. ಇಂಚಲ ಎಂದೇ ಗೊತ್ತಾದ) ಅವರ ಮುಖತಃ ಪರಿಚಯುವಾದುದು ನಾನು ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಕಲಾ ವಿಭಾಗದ ವಿದ್ಯಾರ್ಥಿಯಾಗಿದ್ದಾಗ. ಅದೇ ತಾನೇ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಉಚ್ಚ ವ್ಯಾಸಂಗಕ್ಕೆಂದು ೧೯೫೫ ರಲ್ಲಿ ಬೆಳಗಾವಿಯನ್ನು ಪ್ರವೇಶಿಸಿದ್ದೆ. ನಾನಿನ್ನೂ ಆಗ ಸಾಹಿತ್ಯ ಕ್ಷೇತ್ರದಲ್ಲಿ ಚಿಕ್ಕ ಹುಡುಗನೆಂದೇ ಹೇಳಬೇಕು. ಕಾಲೇಜ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗುವ ಯೋಗ ನನಗೆ ಲಭಿಸಿದುದರಿಂದ ಸಾಹಿತಿಗಳ ಸಂಪರ್ಕದಲ್ಲಿ ಬಂದೆ ಇಂತಹ ಒಂದು ಅವಕಾಶವನ್ನು ಒದಗಿಸಿ ಕೊಂಡು ಮೊಟ್ಟ ಮೊದಲ ಸಲ ಶ್ರೀ ಇಂಚಲರನ್ನು ಅವರ ಮನೆಯಲ್ಲಿಯೇ ಕಂಡೆ, ಅವರು ಅಪರಿಚಿತನಾದ ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡು ಸಂತೋಷಪಟ್ಟರು. ಕನ್ನಡ ನಾಡಿನ ಪ್ರಖ್ಯಾತ ಕವಿಗಳು ಈ ರೀತಿ ತುಂಬು ಅಂತಃಕರಣದಿಂದ ಬರಮಾಡಿಕೊಂಡು ಚಿರಪರಿಚಿತರಂತೆ ಸಾಹಿತ್ಯ ವಿಷಯು ವಾಗಿ ಚರ್ಚೆ ಮಾಡಿದ್ದನ್ನು ಕಂಡು ಮನಸ್ಸಿನಲ್ಲಿ ಸಂತಸ ತುಂಬಿ ತುಳುಕಾಡಿತು. ಅದೇ ತಾನೆ ಇಸ್ತ್ರಿ ತೀಡಿದ ಕರಿಯು ಬಣ್ಣದ ಕೋಟು, ಹಳದಿ ಬಣ್ಣದ ಸೂಟು, ನಿರ್ಮಲವಾದ ಬಿಳಿಯು ಬಣ್ಣದ ಅಂಗಿ– ಹೀಗೆ ಓರಣವಾದ ಉಡಿಗೆ ತೊಡಿಗೆಯು, ಎತ್ತರವಾದ ನಿಲುವು, ಹರವಾದ ಎದೆ, ದುಂಡುಮೊಗ, ವಿಶಾಲವಾದ ಹಣೆ, ಕಾಂತಿಸೂಸುವ ಕಣ್ಣುಗಳು, ಗಂಭೀರ ದನಿ, ಸಾದಗಪ್ಪಿನ ಬಣ್ಣ– ಇವುಗಳ ಆಕರ್ಷಣೆಯು ಕನ್ನಡದ ನೆಚ್ಚಿನ ಮೂರ್ತಿಯನ್ನು ಕಂಡಾಗ ಭಕ್ತಿ ಗೌರವಗಳು ತನ್ನ ತಾನೇ ಮೂಡಿ ಬಂದವು. ವಿದ್ವಾಂಸರಾದರೂ ಅಹಂಭಾವ ಸುಳಿಯದ ವಿನಯು ಸೌಜನ್ಯವನ್ನು ಅವರಲ್ಲಿ ಕಂಡೆ. ಭಾರತೀಯು ಸಂಸ್ಕೃತಿಯೇ ಇಂಚಲರ ರೂಪದಲ್ಲಿ ಮೂರ್ತಿವೆತ್ತು ನಿಂತಂತೆ ನನಗೆ ಮೊದಲ ನೋಟಕ್ಕೆ ಭಾಸವಾಯಿತು. ಎರಡು ದಶಕಗಳ ಮೊದಲು ಕುಡಿವೊಡೆದ ನಮ್ಮ ಪರಿಚಯುದ ಬಳ್ಳಿ 'ದಿನಕೊಂದು ಚೆಂದಾಗಿ ದಿನಕೊಂದು ಬಗೆಯಾಗಿ' ಹಬ್ಬಿ ಹೂಗಳನ್ನು ತಳೆದು ಮುತ್ತಿನ ಗೊನೆಯಾಯಿತು.

ಶ್ರೀ ಇಂಚಲರು ಮೂಲತಃ ಸವದತ್ತಿ ತಾಲೂಕಿಗೆ ಸೇರಿದ ಇಂಚಲ ಗ್ರಾಮದವರು. ಅವರ ಮನೆತನವು ಹಿರಿಯ ಪರಂಪರೆಗೆ ಸೇರಿದ್ದು. ಅವರ ಮೂಲ ವಂಶಜರು ನಾಯಕರ ವಂಶಕ್ಕೆ ಸೇರಿದವರು. ಸುಮಾರು ಮೂರು-ನಾಲ್ಕು ತಲೆಮಾರುಗಳ ಹಿಂದೆಯೇ ಇಂಚಲವನ್ನು ತೊರೆದು ಅವರ ವಂಶ ಜರು ಹಿರೇಬಾಗೇವಾಡಿಗೆ ಬಂದು ಅಲ್ಲಿಯೇ ನೆಲೆಸಿದರು. ಹಿರೇಬಾಗೇ ವಾಡಿಯ ಸ್ವಂತ ಮನೆಯಲ್ಲಿ ೧ ನೆಯ ಎಪ್ರಿಲ ೧೯೧೩ ರಂದು ವೀರಶೈವ ಕುಟುಂಬದ ಶ್ರೀ ದೇಮಪ್ಪ ಚಿನ್ನಪ್ಪ ಇಂಚಲ ಮತ್ತು ಶ್ರೀಮತಿ ಬಸವಂತವ್ವ ನವರ ಉದರದಲ್ಲಿ ಕವಿಗಳಾದ ಇಂಚಲರು ಜನ್ಮತಾಳಿದರು. ಮಗುವಿಗೆ ನಾಮಕರಣ ಮಾಡುವ ವಿಚಾರದಲ್ಲಿ ದೇಮಪ್ಪನವರು ತುಂಬಾ ಆಸಕ್ತಿ ವಹಿಸಿದರು. ಎಣ್ಣೆಯ ಬತ್ತಿಗಳನ್ನು ಹೊತ್ತಿಸಿ ಸುತ್ತಲೂ ಬೆಳಗಿದರು. ಸುಮಂಗಲೆಯರು ಜೋಗುಳ ಹಾಡಿ ತೊಟ್ಟಿಲ ತೂಗಿದರು. ಮಗು ತನ್ನ ಹುಟ್ಟು ಹಬ್ಬದ ಸಡಗರ ಕಂಡು ನಕ್ಕು ನಲಿನಾಡುತ್ತಿತ್ತು. ದೀಪ ಬೆಳ ಗಿದ ಹಾಗೆ ಮಗನ ಕೀರ್ತಿ ನಾಡಿನಲ್ಲಿ ಬೆಳಗಲೆಂದು ದಂಪತಿಗಳು ಆಶಿ ಸಿದ್ದು ಸಹಜವೆ. ತನ್ನ ಮಗನು ಕವಿಯಾಗಿ ಮನೆತನದ ಕೀರ್ತಿಯನ್ನು ಭವಿಷ್ಯದಲ್ಲಿ ಬೆಳಗುವನೆಂದು ಆ ಸಾತ್ವಿಕ ದಂಪತಿಗಳು ಆಗಲೇ ಕನಸು ಕಂಡಿದ್ದರೆಂದು ಕಾಣುತ್ತದೆ. ಕೂಸಿಗೆ ಶಿವಪುತ್ರನೆಂದು ನಾಮಕರಣ ಮಾಡಿ ದರು. ಹೆಸರಿಗೆ ತಕ್ಕ ಹಾಗೆ ಶಿವಪುತ್ರನಾಗಿಯೇ ಬಾಳಿ ಬೆಳಗಿದುದೊಂದು ಅವರ ಜೀವನದ ಹಿರಿಮೆಗೆ ಸಾಕ್ಷಿ !

ಶ್ರೀ ದೇಮಪ್ಪನವರು ಪ್ರಾಥಮಿಕ ಶಾಲೆಯ ಶಿಕ್ಷಕರು. ಒಂದು ಎಕರೆ ಇಪ್ಪತ್ತು ಗುಂಠೆ ಜಮೀನ ಒಡೆಯರು. ಎರಝ್ನೂರವಿಯಲ್ಲಿ ಆರು ರೂಪಾಯಿ ಯಂತೆ ಕೈಕೆಲಸ ಮಾಡಿ ವರುಷದ ಕೊನೆಯಲ್ಲಿ ೧೦೮ ರೂಪಾಯಿ ಉಳಿತಾಯ ಮಾಡಿಕೊಂಡು ತಮ್ಮ ಸ್ವಂತ ಗ್ರಾಮಕ್ಕೆ ಮರಳಿದರಂತೆ; ಅವರು ಹಿರೇಬಾಗೇವಾಡಿ ಮತ್ತು ಮರಕಟ್ಟಿ ಗ್ರಾಮಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯ ವೇಳೆಗೆ ೨೫ ಎಕರೆ ಜಮೀನು ಗಳಿಸಿದರು. ಅವರು ತುಂಬಾ ಪ್ರಯತ್ನಶೀಲರೂ, ನಿಷ್ಠಾವಂತರೂ, ಮಕ್ಕಳ ಏಳಿಗೆಯೇ ತಮ್ಮ ಬಾಳಗುರಿಯೆಂದು ನಂಬಿ ನಡೆದ ಉದಾರಚರಿತರೂ ಆಗಿದ್ದರು. ಪ್ರಾಮಾಣಿಕರಾದ ಶಿಕ್ಷಕರೆಂದು ಅವರು ಬಾಗೇವಾಡಿಯ ಆ ಭಾಗದಲ್ಲಿ ಖ್ಯಾತಿವಂತರಾಗಿದ್ದರು. ತಾಯಿ ಬಸವಂತವ್ವ

ನವರು ಮುಗುಟಖಾನಹುಬ್ಬಳ್ಳಿಯ ಸಾಧುನವರ ಎಂಬ ಹೆಸರಿನ ಪ್ರತಿಷ್ಠಿತ ಮನೆತನಕ್ಕೆ ಸೇರಿದವರು. ಶ್ರೀ ಚನಬಸಪ್ಪನವರ ನೆಚ್ಚಿನ ಮಗಳು, ತುಂಬಾ ಸಾತ್ವಿಕ ಹಾಗೂ ಸರಳ ಜೀವಿಗಳು. ಅವರು ಓದು ಬರೆಹ ಕಲಿಯದಿದ್ದರೂ ಓದುವ ಮಕ್ಕಳೆಲ್ಲರನ್ನು ತನ್ನ ಕರುಳಿನ ಕುಡಿಗಳೆಂದು ಪರಿಗಣಿಸುತ್ತಿದ್ದರು. ಇಂಚಲರ ಇಲ್ಲಿಯ ವರೆಗಿನ ಓದಿಗೆ ಆ ಮಹಾತಾಯಿಯೇ ಧೈರ್ಯದೇವತೆ ಯಾಗಿ, ಧರ್ಮಮೂರ್ತಿಯಾಗಿ, ಚೇತನದಾತೆಯಾಗಿದ್ದರು. 'ನಿಜವಾಗಿ ಹೇಳಬೇಕೆಂದರೆ ಅವಳ ಜೀವನಸೌಂದರ್ಯವೆಂಬ ಕಾಮಧೇನುವಿನ ಹಾಲುಂಡ ನನ್ನ ಶಿಶುತನ ತುಂಬಾ ಸಾರ್ಥಕವಾಗಿದೆ. ನಾನು ಹಾಡಿದ್ದು, ಅವಳ ಹಾಲಿನ ಸವಿಯನ್ನುಂಡಾಗ ಹೊರಹೊಮ್ಮಿದ ಆನಂದದ ಉದ್ಗಾರವೆಂದೇ ಹೇಳಬೇಕು.' ಎಂಬುದಾಗಿ ಶ್ರೀ ಇಂಚಲರೇ ಒಂದು ಸಂದರ್ಭದಲ್ಲಿ ಹೇಳಿಕೊಂಡಿದ್ದಾರೆ.

ಇಂಚಲರ ಬಾಲ್ಯದ ವಿದ್ಯಾಭ್ಯಾಸವೆಲ್ಲ ಅವರ ಜನ್ಮಸ್ಥಳವಾದ ಹಿರೇಬಾಗೇವಾಡಿಯಲ್ಲಿಯೇ ಆಯಿತು. ಶ್ರೀ ಹೊಳೆಪ್ಪ ಮಾಸ್ತರರು ಅವರ ಪ್ರಾಥಮಿಕ ಶಾಲಾ ಗುರುಗಳು. 'ಶೀಪಣ್ಣ' ಇದು ಗುರುಗಳು ಇಟ್ಟ ಪ್ರೀತಿಯ ಹೆಸರು. ಅವರು ಯಾವಾಗಲೂ ಗುರುಗಳ ಕೂಡ ವಿಧೇಯತೆ ಯಿಂದ ನಡೆದುಕೊಳ್ಳುತ್ತಿದ್ದರು. 'ಹಡೆದ ತಾಯಿ ತಂದೆಗಳನು ಬಿಡದೆ ಸೇವೆ ಮಾಡುತ, ಅವರ ನುಡಿಯ ಮೀರಿ ನಡೆಯದಂಥ ಹುಡುಗನು' ಎಂದು ಹೊಳೆಪ್ಪ ಮಾಸ್ತರರು ಇಂಚಲರನ್ನು ಅನ್ವಯಿಸಿ ಈ ಮಾತುಗಳನ್ನು ಆಗಾಗ ಆಡುತ್ತಾರೆ. ಮಕ್ಕಳ ವಿಚಾರಶಕ್ತಿಯ ಕೂಡ ಸ್ಮರಣಶಕ್ತಿಯೂ ಬೆಳೆಯ ಬೇಕೆಂಬುದು ಗುರುಗಳ ಇಚ್ಛೆಯಾಗಿತ್ತು. ಗಂಟೆಗಟ್ಲೆ ಒಂದೇ ಒಂದು ಪದ್ಯ ವನ್ನು ಗುರುಗಳು ಬಿಡಿಸಿ ಬಿಡಿಸಿ ಹೇಳುತ್ತಿದ್ದರು. ಗುರುಗಳ ಮುಖಾಂತರ ಕೇಳುತ್ತಿರುವಾಗಲೇ ಇಂಚಲರಿಗೆ ಪದ್ಯ ಕಂಠಪಾಠವಾಗಿ ಬಿಡುತ್ತಿತ್ತು. ಏಳನೆಯ ವರ್ಗದಲ್ಲಿ ಓದುತ್ತಿದ್ದಾಗಲೇ ಯಾವುದೇ ಒಂದು ವಿಷಯವನ್ನು ಹಳಗನ್ನಡ ದಲ್ಲಿ ಬರೆದು ತೋರಿಸುತ್ತಿದ್ದರು. ಭೂಮಿತಿ, ಜಮಾಖರ್ಚು, ವ್ಯಾಕರಣ ವಿಷಯುಗಳಲ್ಲಿ ಓದದೆಯೇ ಅವರು ಪರಿಣತಮತಿಗಳಾಗಿದ್ದರು. ಶ್ರೀ ಮಮದಾ ಪೂರ ಮಾಸ್ತರರು ಆಗಾಗ ಹೀಗೆ ಹೇಳುತ್ತಿದ್ದರಂತೆ– 'ಹೊಳೆಪ್ಪ ಮಾಸ್ತರರು ತಮ್ಮ ಕ್ಲಾಸಿನ ಹುಡುಗರಿಗೆ ಶಿವಪುತ್ರನ ಮುಖಾಂತರವೇ ಭೂಮಿತಿ, ಗಣಿತ ವಿಷಯುಗಳನ್ನು ಹೇಳಿಸುತ್ತಿದ್ದರು.' ಈ ವಿಷಯಗಳಲ್ಲಿ ಇಂಚಲರು ಎಷ್ಟೊಂದು

ಬುದ್ಧಿಶಾಲಿಗಳಾಗಿದ್ದರೆಂಬುದಕ್ಕೆ ಶ್ರೀ ಮಮದಾಪೂರ ಮಾಸ್ತರರ ಮಾತೇ ಸಾಕ್ಷಿ ನುಡಿಯುತ್ತದೆ. ಇಂಚಲರು ಎಲ್ಲಿಗಾದರೂ ಹೋಗುವಂಥ ಪ್ರಸಂಗ ಬಂದರೆ, ಹಿರಿಯರನ್ನು ಕರೆದುಕೊಂಡು ಬಂದು ಹೇಳಿಸಿ ಶಾಲೆಗೆ ರಜೆ ಪಡೆಯುತ್ತಿದ್ದರು. 'ಮನ್ಯಾಗ ಹುಡುಗ ಓದೋದನ್ಸ ಇಲ್ಲs' ಅಂತ ನಿಮ್ಮ ತಂದೆ ಹೇಳುತ್ತಾರೆ ಶೀಪಣ್ಣಾ, 'ಯಾಕಪಾ ಓದೋದಿಲ್ಲs' ಅಂತ ಹೊಳೆಪ್ಪ ಮಾಸ್ತರರು ಕೇಳಿದಾಗ ಇಂಚಲರು— "ನನಗೆ ಓದೋದು ಬೇಕಾಗಿಲ್ಲ ಗುರುಗಳೇ, ನೀವು ಶಾಲೆಯಲ್ಲಿ ಪಾಠ ಕಲಿಸುವಾಗಲೇ ನನಗೆ ಕಂಠಪಾಠವಾಗಿ ಬಿಡುತ್ತದೆ, ನೀವು ಶಾಲೆಯಲ್ಲಿ ಕಲಿಸಿದ್ದನ್ನು ಎಂದೆಂದಿಗೂ ಮರೆಯುವದೇ ಸಾಧ್ಯವಿಲ್ಲ" ಎಂದು ಹೇಳಿದರಂತೆ. ಅವರ ಜ್ಞಾಪಕ ಶಕ್ತಿ ತುಂಬಾ ಜಾಗೃತವಾಗಿತ್ತೆಂಬುದಕ್ಕೆ ಇದೊಂದೇ ಉದಾಹರಣೆ ಸಾಕು. "ಆಹಾ ನೀವು ಕೊಟ್ಟ ಶಿಕ್ಷಣದಿಂದ ನನ್ನ ಸಾಹಿತ್ಯ ಚಿಗುರೊಡೆದು ಬೆಳೆಯಿತು. ನಿಮ್ಮನ್ನು ಹೇಗೆ ಮರೆಯಲಿ ಗುರುದೇವಾ!" ಎಂದು ನುಡಿದು ಗುರುಭಕ್ತಿ ಅರ್ಪಿಸಿ ಸಂತೋಷಪಡುತ್ತಿದ್ದರು. ಜೀವನದ ವಿವಿಧ ಕ್ಷೇತ್ರಗಳಲ್ಲಿ ಕೀರ್ತಿ ಶಿಖರವನ್ನು ಮುಟ್ಟಿದಾಗಲೂ ತಮಗೆ ಶಿಕ್ಷಣ ಕೊಟ್ಟ ಪ್ರಾಥಮಿಕ ಶಾಲೆಯ ಗುರುಗಳನ್ನು ಇಂಚಲರು ಮರೆಯಲಿಲ್ಲ. "ಹೊಳೆಪ್ಪ ಮಾಸ್ತರರ ಸಾಹಿತ್ಯ ಪ್ರೇಮ, ಆಳವಾದ ಅಭ್ಯಾಸ, ಪ್ರಾಮಾಣಿಕವಾದ ಸತ್ವಪೂರ್ಣವಾದ ಆದರ್ಶ ಜೀವನ ನನ್ನ ತನುಮನಗಳ ಮೇಲೆ ಅಳಿಸಲಾರದಂಥ ಪರಿಣಾಮವನ್ನುಂಟು ಮಾಡಿವೆ. ಅಂದು ಅವರು ನನ್ನ ಎಳೆಯ ಮನಸ್ಸಿನ ಮೇಲೆ ಮುದ್ರಿಸಿದ ಚಿತ್ರಗಳೆಂದರೆ, ಪಂಪನ ಕರ್ಣ, ರನ್ನನ ಕೌರವ, ರಾಘವಾಂಕನ ಹರಿಶ್ಚಂದ್ರ–ಚಂದ್ರಮತಿಯರು, ಭರತೇಶನ ಸಂಯಮಪೂರ್ಣವಾದ ಜೀವನ, ಸರ್ವಜ್ಞನ ಕ್ರಾಂತಿ, ಮುದ್ದಣನ ರಸಿಕತೆ, ಲಕ್ಷ್ಮೀಶನ ಕರುಣಾಪೂರ್ಣವಾದ ಲಾಲಿತ್ಯ ಮೊದಲಾದ ವಿಷಯಗಳು." ಎಂದು ಇಂಚಲರು ಒಂದೆಡೆ ಹೇಳಿದ್ದಾರೆ. ಇಂಚಲರ ಜೀವಕ್ಕೆ ಅಂಟಿಕೊಂಡು ಬಂದ ಕಾವ್ಯದ ಅಭಿರುಚಿ ಆಸಕ್ತಿಗಳು ಗುರುಗಳ ಸಾಹಿತ್ಯದ ರಸಾನುಭವದ ಭೂಮಿಕೆಯಲ್ಲಿ ಮೊಳೆತವು. ಗುರುಗಳ ಬಾಯಿಂದ ವೀರರಸ ಪ್ರಧಾನವಾದ ಕತೆಗಳನ್ನು ಕೇಳಿ ನಾಡುನುಡಿಗಳ ಬಗೆಗೆ ತುಂಬಾ ಅಭಿಮಾನವನ್ನು ಬೆಳೆಸಿಕೊಂಡರು. ಇವರು ಆರನೆಯ ವರ್ಗದಲ್ಲಿ ಓದುತ್ತಿರುವಾಗ, ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ವರ್ಗವಾದ ನಿಮಿತ್ತ ಬಾಗೇವಾಡಿಯಲ್ಲಿ ಅಲ್ಪೋಪಹಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 'ವಿದ್ಯಾರ್ಥಿಗಳ ಕರ್ತವ್ಯ' ಎಂಬ ವಿಷಯ

ವಾದಿ ಮಕ್ಕಳ ಸಂಭಾಷಣೆಯು ಜರುಗಿತು. ಅದರಲ್ಲಿ ಶ್ರೀ ಇಂಚಲರು, ಶ್ರೀ ಜೋಶಿ ಎಂಬವರು ಸುಂದರವಾಗಿ ಮಾತನಾಡಿದರು. ಜಿಲ್ಹಾಧಿಕಾರಿಗಳು ತುಂಬಾ ಮೆಚ್ಚಿಕೊಂಡು ಒಬ್ಬೊಬ್ಬರಿಗೆ ಒಂವೊಂದು ರೂಪಾಯಿ ಹಾಗೂ ಒಂದೊಂದು ಪುಸ್ತಕ ಬಹುಮಾನ ನೀಡಿದರು. ಮಾತನಾಡುವ ಕಲೆ ಅವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಕರಗತವಾಗಿತ್ತೆಂದು ಕಂಡು ಬರುತ್ತದೆ.

ಇಂಚಲರು ಕನ್ನಡ ಆರನೆಯ ವರ್ಗದ ಪರೀಕ್ಷೆಯಲ್ಲಿ ಉತ್ತೀರ್ಣರಾಗ ಲಿಲ್ಲ. ತಮ್ಮ ತಪ್ಪು ಒಪ್ಪಿಕೊಂಡು, ಮುಂದಿನ ವರ್ಗಕ್ಕೆ ಪ್ರವೇಶ ನೀಡಿದರೆ ಮುಲಕಿ ಪರೀಕ್ಷೆಯಲ್ಲಿ ಉತ್ತಮ ಗುಣಪಡೆದು ಉತ್ತೀರ್ಣನಾಗುವೆನೆಂದು ಗುರುಗಳೆದುರು ಪ್ರತಿಜ್ಞೆಗೈದು ಪ್ರಾರ್ಥಿಸಿಕೊಂಡಾಗ ಗುರುಗಳು ಏಳನೆಯ ವರ್ಗಕ್ಕೆ ಪ್ರವೇಶ ನೀಡಿದರು. ೧೯೨೬ ರಲ್ಲಿ ಜರುಗಿದ ಮುಲಕಿ ಪರೀಕ್ಷೆಯಲ್ಲಿ ಪ್ರತಿಶತ ೭೦ ರಷ್ಟು ಗುಣಗಳನ್ನು ಪಡೆದು ಪರೀಕ್ಷೆ ಕಟ್ಟಿದ ಇಪ್ಪತ್ತಾರು ವಿದ್ಯಾರ್ಥಿಗಳಲ್ಲಿ ಇವರೇ ಪ್ರಥಮ ಸ್ಥಾನ ಗಳಿಸಿ ಪ್ರತಿಜ್ಞೆ ಪೂರ್ಣಗೊಳಿಸಿದರು. ಇದೇನೂ ಸಾಮಾನ್ಯ ಮಾತಲ್ಲ. ಈ ಪರೀಕ್ಷೆಯಲ್ಲಿ ಬೆಳಗಾವಿ ಜಿಲ್ಹೆಗೆ.ಕುಳಿತ ೯೫೦ ವಿದ್ಯಾರ್ಥಿಗಳಲ್ಲಿ ಆರನೆಯ ಸ್ಥಾನ ಪಡೆದು ತಮ್ಮ ಗುರುಗಳಿಗೂ, ಹಿರಿಯರಿಗೂ, ವಿದ್ಯಾಮಂದಿರಕ್ಕೂ ಹೆಸರು ತಂದರು. ಆಗ ಅವರು ತೀರ ಚಿಕ್ಕ ವಯಸ್ಸಿನವರು (೧೩) ಇದ್ದುದರಿಂದ ತಂದೆಯವರು ಅವರನ್ನು ಮಾಧ್ಯ ಮಿಕ ಶಾಲೆಗೆ ಕಳಿಸಲಿಲ್ಲ. ಮನೆತನದ ಪರಿಸ್ಥಿತಿ ಅಷ್ಟು ಒಳ್ಳೆಯ ಸ್ಥಿತಿಯಲ್ಲಿ ಇಲ್ಲದಿದ್ದುದೂ ಒಂದು ಪ್ರಮುಖ ಕಾರಣವಾಯಿತು. ಅವರು ಒಂದು ವರ್ಷ ಮನೆಗೆಲಸದಲ್ಲಿಯೇ ಕಾಲಹರಣ ಮಾಡಿದರು. ಇದರಿಂದ ಅವರ ತಾಯಿಗೆ ಸಮಾಧಾನವಾಗಲಿಲ್ಲ. ಮಗ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದು ಕೀರ್ತಿವಂತ ನಾಗಬೇಕೆಂಬುದು ತಾಯಿಯ ಆಶೆ; ಗಂಡನ ಮನವೊಲಿಸಿ ಮಗನನ್ನು ಮುಗುಟಖಾನ ಹುಬ್ಬಳ್ಳಿಯಲ್ಲಿರುವ ಇಂಗ್ಲೀಷ ಶಾಲೆಗೆ ಹೆಸರು ಹಚ್ಚಿಸಿದರು. ಅಲ್ಲಿ ಇಂಚಲರು ಒಂದು ವರ್ಷದಲ್ಲಿ ಮೂರು ವರ್ಗಗಳನ್ನು ಓದಿ ಮುಗಿಸಿ ದರು. ಆದರೆ ನಾಲ್ಕನೆಯ ವರ್ಗಕ್ಕೆ ಬೆಳಗಾವಿ ಹಾಗೂ ಬೈಲಹೊಂಗಲ ಮಾಧ್ಯಮಿಕ ಶಾಲೆಗಳಲ್ಲಿ ಅವರಿಗೆ ಪ್ರವೇಶ ದೊರೆಯಲಿಲ್ಲ. ತುಂಬಾ ನಿರಾಶೆ ಯಾಯಿತು. ಆದರೂ ಖಾಸಗಿ ಶಾಲಾ ಗುರುಗಳು ಧಾರವಾಡಕ್ಕೆ ಅವರನ್ನು

ಕರೆದೊಯ್ದು ಅಲ್ಲಿಯ ತಮ್ಮ ಆಪ್ತರೊಬ್ಬರ ನೆರವಿನಿಂದ ಧಾರವಾಡ ಶಿಕ್ಷಣಾಧಿಕಾರಿಗಳ ಪರವಾನಗಿ ದೊರಕಿಸಿಕೊಂಡು ಧಾರವಾಡ ಕರ್ನಾಟಕ ಹಾಯಸ್ಕೂಲಿನಲ್ಲಿ ನಾಲ್ಕನೆಯ ವರ್ಗದಲ್ಲಿ ಹೆಸರು ಹಚ್ಚಿದರು. (ಆಗಿನ ನಾಲ್ಕನೆಯ ವರ್ಗವೆಂದರೆ ಈಗಿನ ಎಂಟನೆಯ ವರ್ಗ). ಆಗ ಅವರಿಗೆ ಜೀವದಾನವಾದಷ್ಟು ಸಂತೋಷವಾಯಿತು. ಕರ್ಮಧರ್ಮ ಸಂಯೋಗದಿಂದ ಅಲ್ಲಿಯೂ ಒಳ್ಳೆಯ ಗುರುಗಳ ಸಾನಿಧ್ಯ ಪ್ರಾಪ್ತವಾಗಿ ವಿದ್ಯಾರ್ಜನೆಗೆ ತುಂಬಾ ನೆರವಾಯಿತು. ಹಿರಿಯ ಕವಿಗಳಾದ ಶ್ರೀ ಸಾಲಿ ರಾಮಚಂದ್ರರಾಯರು, ಶ್ರೇಷ್ಠ ವಿಮರ್ಶಕರಾದ ಶ್ರೀ ಶಂ. ಬಾ. ಜೋಶಿಯವರು ಪಾಠ ಹೇಳಿಕೊಟ್ಟು ಅವರಲ್ಲಿದ್ದ ಸಾಹಿತ್ಯಾಭಿರುಚಿಯನ್ನು ಪೋಷಿಸಿದರು. ಅದೇ ಕಾಲಕ್ಕೆ ಅಲ್ಲಿಯೇ ಶಿಕ್ಷಕರಾಗಿದ್ದ ಡಾ. ಕಬ್ಬೂರ ಅವರು ಸಾಕು ಮಗನ ಹಾಗೆ ಪ್ರೀತಿಯಿಂದ ಅವರನ್ನು ಕಂಡರು. ಅಲ್ಲಿಯ ಅಂದಿನ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿಯೂ ಹೆಚ್ಚಿನ ಗುಣಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದರಿಂದ ಶಾಲೆಯಲ್ಲಿ ಮಾಫಿ ಆಗಿ ಮೂರು ರೂಪಾಯಿ ಶಿಷ್ಯವೇತನ ಲಭಿಸಿತು. ಧಾರವಾಡದ ಪರಿಸರವು ಅವರಿಗೆ ಅನುಕೂಲವಾಗಿದ್ದರೂ ಕೂಡ ಅವರ ಮನಸ್ಸು ಯಾವಾಗಲೂ ಬೆಳಗಾವಿಯ ಕಡೆಗೆ ಇದ್ದುದರಿಂದ ಒಂದು ವರ್ಷದ ತರುವಾಯ ೧೯೨೯ ನೆಯ ಜೂನ ತಿಂಗಳಲ್ಲಿ ಗಿಲಗಿಂಚಿ ಅರಟಾಳ ಹಾಯಸ್ಕೂಲ ಪ್ರವೇಶಿಸಿ ತಮ್ಮ ಅನೇಕ ಬಾಲ್ಯದ ಗೆಳೆಯರನ್ನು ಕೂಡಿಕೊಂಡರು. ಹಾಯಸ್ಕೂಲಿನ ಜೀವನದಲ್ಲಿ ದಿ. ಸಾಖರೆ, ದಿ. ಮಮದಾಪೂರ, ದಿ. ಪುರಾಣಿಕ, ಶ್ರೀ ಸರದಾರ ವೀರನಗೌಡರು ಮೊದಲಾದ ಕೆ. ಎಲ್. ಇ. ಸೊಸಾಯಟಿಯ ಆಜೀವ ಸದಸ್ಯರೂ ಶ್ರೇಷ್ಠ ಶಿಕ್ಷಕರೂ ಆದ ತ್ಯಾಗಜೀವಿಗಳ ಸಹವಾಸ ಲಭಿಸಿ ಅವರೆಲ್ಲರ ಜೀವನದ ಆದರ್ಶ ಅಂತರಂಗದಲ್ಲಿ ಸ್ಫೂರ್ತಿಕೇಂದ್ರವಾಗಿ ನಿಂತಿತು. ಬರೆಯಬೇಕೆಂಬ ಲವಲವಿಕೆ ಆಗಲೇ ಅವರಲ್ಲಿ ಅಂಕುರಿಸಿತ್ತು. ಪ್ರತಿಭಾಪೂರ್ಣ ಕಥೆಗಾರರೂ ನಾಟಕಕಾರರೂ ಆದ ಶ್ರೀ ಕೃಷ್ಣಕುಮಾರ ಕಲ್ಲೂರ ಅವರು ೧೯೩೦-೩೧ ರಲ್ಲಿ ಗಿಲಗಿಂಚಿ ಅರಟಾಳ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಅವರ ಸಹವಾಸ ಕವಿಯ ಜೀವನದಲ್ಲಿ ಬಹಳಷ್ಟು ಉಪಯುಕ್ತವಾಯಿತು. ಆರು ತಿಂಗಳ ಕಾಲ ಶ್ರೀ ಇಂಚಲರು ಶ್ರೀ ಕಲ್ಲೂರರ ಜೊತೆಯಲ್ಲಿ ಹಾಸ್ಟೇಲಿನ ಒಂದೇ ಕೋಣೆಯಲ್ಲಿದ್ದರು. ಆಗ ಅವರು ಸುಂದರವಾದ ಕಥೆಗಳನ್ನೂ ಇಂಚಲರಿಗೆ ಹೇಳುತ್ತಿದ್ದರು; ಒಳ್ಳೆಯ ಗ್ರಂಥಗಳನ್ನು

ಓದಲು ಕೊಡುತ್ತಿದ್ದರು. ಅವರ ಪ್ರೋತ್ಸಾಹದಿಂದಲೇ ಶಾಲಾ ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯತೊಡಗಿದರು. 'ಅವರ (ಶ್ರೀ ಕಲ್ಲೂರರ) ಸಾನಿಧ್ಯದ ಆದರ್ಶ ಜೀವನ ನನ್ನ ಎಳೆಯ ಮನಸ್ಸಿನ ಮೇಲೆ ಒಳ್ಳೇ ಪರಿಣಾಮ ಬೀರಿದೆ ಶ್ರೀ. ಅಂಬಿಕಾತನಯದತ್ತರ, ಶ್ರೀ. ಮಧುರಚೆನ್ನರ ಕಾವ್ಯದ ಪರಿಚಯ ಅವರಿಂದಲೇ ನನಗಾಯಿತು ಈ ಕವಿಗಳ ಕವನಗಳನ್ನು ಅವರು ಹಾಡಿ ತೋರಿಸುತ್ತಿದ್ದರು. ಆಗಲೇ ಹೊಸದಾಗಿ ಪ್ರಸಿದ್ಧಿಗೆ ಬರುತ್ತಿದ್ದ ಆಧುನಿಕ ಭಾವಗೀತೆಗಳ ಸವಿ ನನಗೆ ದೊರಕಿದಂತಾಗಿತ್ತು. ಆಗಲೇ ನಾನು ಕೆಲವು ಕವನಗಳನ್ನು ಗೀಚಿದ್ದು ನೆನಪಿದೆ.' ಎಂದು ಶ್ರೀ. ಇಂಚಲರು ಒಂದೆಡೆ ಹೇಳಿದ್ದಾರೆ. ಅವರು ೧೯೩೦-೩೧ ರ ಪ್ರಾರಂಭದಿಂದಲೇ ಕವನಗಳನ್ನು ಬರೆಯಲು ಪ್ರಾರಂಭಿಸಿದ್ದರೆಂದು ಇದರಿಂದ ಸ್ಪಷ್ಟವಾಗುತ್ತದೆ.

ಇಂಚಲರದು ಚಿಕ್ಕಂದಿನಲ್ಲಿ ತೀರ ಅಶಕ್ತ ಪ್ರಕೃತಿ; ಹಾಲು ಕೊಟ್ಟರು ಕೂಡ ಕುಡಿಯುತ್ತಲಿರಲಿಲ್ಲ. " ಹಾಲ ಸಂವಿ ಹತ್ತಾಕಿಲ್ಲ ಅಂವಗ್ಸ, ಎಂಥಾ ಹಾಲ ಕೊಡತೀರಿ ಅಂವಗ್ಸ" ಎಂದು ಹೊಳೆಪ್ಪ ಮಾಸ್ತರರು ಒಮ್ಮೆ ಅಂದು "ಅವನು ಕುಡಿಯದಿದ್ದರೂ ಒತ್ತಾಯದಿಂದಲಾದರೂ ಅವನಿಗೆ ಹಾಲು ಕುಡಿಯುವ ಅಭ್ಯಾಸ ಮಾಡಿಸಿರಿ " ಅಂತ ದೇಮಪ್ಪನವರಿಗೆ ಮಾಸ್ತರರು ಉಪದೇಶಿಸಿದರು. ಗುರುಗಳ ಉಪದೇಶದ ಮೇರೆಗೆ ದೇಮಪ್ಪನವರು ಪ್ರೀತಿಯಿಂದ ಹಾಲನ್ನು ಮಗನಿಗೆ ಕುಡಿಯಲು ಕೊಟ್ಟರು. ಅಂದಿನಿಂದ ಆರೋಗ್ಯ ಸುಧಾರಿಸಿ ಬಲಗೊಂಡಿತು. ಇಂಚಲರು ಜೀವನದಲ್ಲಿ ಯಶಸ್ಸನ್ನು ಸಾಧಿಸಿದ್ದು ಶ್ರೀ. ಹೊಳೆಪ್ಪ ಮಾಸ್ತರರ ಪ್ರೇರಣೆಯ ಪುಣ್ಯದಿಂದ; ಅದನ್ನವರು ತಮ್ಮ ಜೀವನದುದ್ದಕ್ಕೂ ಸ್ಮರಿಸುತ್ತಲೇ ಇದ್ದರು.

ಒಮ್ಮೆ ಬಸಾಪುರದ ಮದುವೆಯ ಮನೆಗೆ ಎಲ್ಲರೂ ಹೊರಟುನಿಂತಾಗ ಶಿವಪುತ್ರನು ಆ ಗುಂಪಿನಲ್ಲಿ ಕಾಣಲಿಲ್ಲ. ಬಳಗದವರು ಗಾಬರಿಯಾಗಿ ಅತ್ತ ಇತ್ತ ಹುಡುಕುವಷ್ಟರಲ್ಲಿ ಇಂಚಲರು ಬಂದರು. ಕೂಡಲೇ ಹಿರಿಯರೊಬ್ಬರು— " ಆಯತ್ತ ಸಮಯದಲ್ಲಿ ಎಲ್ಲಿ ಹೋಗಿದ್ದೆಯೋ ಶಿವಪುತ್ರಾ " ಎಂದು ಅಂದಾಗ ಅತ್ಯಂತ ವಿನಯದಿಂದ ಅವರು—" ನಾನು ಹೊಳೆಪ್ಪ ಮಾಸ್ತರರ ದರುಶನ ತೆಗೆದುಕೊಂಡು ಬಂದೆ. ನನ್ನ ಹಣೆಗೆ ಪ್ರಸಾದ ಹಚ್ಚಿದ್ದಾರೆ ನೋಡಿರಿ"

ಎಂದು ಹೇಳಿ ಗುಂಪಿನಲ್ಲಿ ಒಂದಾದರು. ಇದರಿಂದ ಇಂಚಲರಲ್ಲಿ ಹುದುಗಿದ ಗುರುಭಕ್ತಿ ಎದ್ದು ಕಾಣುತ್ತದೆ.

ಪ್ರಾಮಾಣಿಕತೆ ಅವರ ಜೀವನದ ಪ್ರಾರಂಭದಲ್ಲಿಯೇ ಕಾಣಿಸಿಕೊಂಡಿತ್ತು. ಇಂಚಲರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಬೆಳ್ಳಿಯ ಕಡಗವೊಂದು ಸಿಕ್ಕಿತಂತೆ. ಆ ಕಡಗವನ್ನು ತೆಗೆದುಕೊಂಡು ಹೋಗಿ ಗುರುಗಳಿಗೆ ಒಪ್ಪಿಸಿದರು. ಗುರುಗಳು ಗ್ರಾಮದ ಪೋಲೀಸ ಹವಾಲದಾರರಿಗೆ ತಿಳಿಸಿ ಶೋಧ ಮಾಡಿಸಿದರೂ ಆ ಕಡಗ ಯಾರದು ಎಂಬುದು ಕೊನೆಗೂ ಗೊತ್ತಾಗಲೇ ಇಲ್ಲ. ಬೆಳಗಾವಿಯ ತಹಶಿಲದಾರರಿಗೂ ಈ ವಿವರ ತಿಳಿಸಲಾಗಿ ಅವರು ಎಷ್ಟು ಪ್ರಯತ್ನ ಮಾಡಿದರೂ ಆ ಒಡವೆಯ ಮಾಲಿಕನು ಸಿಗದ್ದರಿಂದ ತಂದುಕೊಟ್ಟ ವಿದ್ಯಾರ್ಥಿಯ ಪ್ರಾಮಾಣಿಕತನವನ್ನು ಮೆಚ್ಚಿ ಅವನಿಗೇ ಬಹುಮಾನ ಕೊಟ್ಟುಬಿಡಬೇಕೆಂದು ನಿರ್ದೇಶಿಸಿದರು. ಪ್ರಾಮಾಣಿಕತೆಗೆ ದೊರೆತ ಈ ಗೌರವದಿಂದ ಇಂಚಲರು ಸಂತೋಷಗೊಂಡರು ಮೊಳಕೆಯಲ್ಲಿ ಚಿಗುರಿದ ಪ್ರಾಮಾಣಿಕತೆ ಅವರ ಬಾಳಿನುದ್ದಕೂ ಬೆಳೆದು ಹೆಮ್ಮರವಾಯಿತೆಂಬುದನ್ನು ಅವರ ಜೀವನವೇ ಸಾಕ್ಷಿ ನುಡಿಯುತ್ತದೆ.

ಅವರ ಕಾಲೇಜ ವಿದ್ಯಾಭ್ಯಾಸವು ಕೊಲ್ಹಾಪೂರ ಹಾಗೂ ಬೆಳಗಾವಿಯಲ್ಲಿ ನಡೆಯಿತು. ಇಂಚಲರು ಮ್ಯಾಟ್ರಿಕ್ ಪರೀಕ್ಷೆ ಪಾಸಾದಾಗ ಅವರ ಮನೆತನದ ಸ್ಥಿತಿಗತಿ ಅಷ್ಟು ಸರಿಯಾಗಿರಲಿಲ್ಲ. ದೇವಪ್ಪ ಮಾಸ್ತರರು ಅದೇ ಮಾರ್ಚ ತಿಂಗಳಲ್ಲಿ ಶಿಕ್ಷಕ ಹುದ್ದೆಯಿಂದ ನಿವೃತ್ತರಾಗಿದ್ದರು. ಆಗ ಕೇವಲ ಹದಿನೇಳು ರೂಪಾಯಿ ನಿವೃತ್ತಿವೇತನ ಅವರಿಗೆ ದೊರೆಯುತ್ತಿತ್ತು. ಹೀಗಾಗಿ ಮಗನನ್ನು ಕಾಲೇಜಿಗೆ ಕಳಿಸಲು ತಂದೆಯ ಮನಸ್ಸಿರಲಿಲ್ಲ. ಆಗಲೂ ಅವರ ತಾಯಿ ಪುನಃ ಮಗನ ನೆರವಿಗೆ ಬಂದು ಕಾಲೇಜಿಗೆ ಕಳಿಸಲೇಬೇಕೆಂದು ಹಟ ಹಿಡಿದರು. ಇಂಥ ಕಷ್ಟ ಪರಿಸ್ಥಿತಿಯಲ್ಲಿಯೂ ತಾಯಿಯ ಅನುಗ್ರಹ ಅವರನ್ನು ಕಾಲೇಜಿಗೆ ಸೇರ್ಪಡಿಸಿತು. ೧೯೩೨ ರಿಂದ ೧೯೩೪ ರ ವರೆಗೆ ಎರಡು ವರ್ಷಕಾಲ ಕೊಲ್ಹಾಪೂರ ರಾಜಾರಾಮ ಕಾಲೇಜಿನಲ್ಲಿ ಓದಿದರು. ಫೀ ಸೌಕರ್ಯಗಳಿಂದಾಗಿ ಆ ಕಾಲದಲ್ಲಿ ಅದೆಷ್ಟೋ ಬಡಮಕ್ಕಳು ದೂರೆನಿಸಿದರೂ ಕೊಲ್ಹಾಪೂರಕ್ಕೆ ಹೋಗಿ ಉಚ್ಚ ಶಿಕ್ಷಣವನ್ನು ಪಡೆಯುತ್ತಿದ್ದರು. ಮನೆತನದ ಆರ್ಥಿಕ ಅಡಚಣೆಯ ಪರಿಣಾಮದಿಂದಾಗಿ ಧಾರವಾಡದ ಕರ್ನಾಟಕ ಕಾಲೇಜನ್ನು ಸೇರಬೇಕೆಂಬ ಅವರ ಬಹು

ದಿನದ ಕನಸು ಒಡೆದು ಹೋಯಿತು. ಆದರೂ ಕಾಲೇಜ ಶಿಕ್ಷಣವನ್ನು ಹೊಂದುವ ಯೋಗ ಲಭಿಸಿದ ಸಂತೋಷದಲ್ಲಿಯೇ ತಮ್ಮ ಶಿಕ್ಷಣವನ್ನು ಎರಡು ವರ್ಷ ರಾಜಾರಾಮ ಕಾಲೇಜದಲ್ಲಿ ಪಡೆದರು. ಕೊಲ್ಹಾಪೂರದ ಕಾಲೇಜ ಜೀವನದಲ್ಲಿ ದಿ ಶ್ರೀ. ಟಿ. ಸಿ. ಇಟಗಿ ಎಂಬವರು ಆತ್ಮೀಯ ಗೆಳೆಯರಾಗಿದ್ದುಕೊಂಡು ಅವರ ಸುಖದುಃಖಗಳಲ್ಲಿ ಸದಾವಕಾಲವೂ ಸಮಭಾಗಿಗಳಾಗಿ ಆರ್ಥಿಕ ಅಡಚಣೆಗಳಿಗೆ ಬೆನ್ನೆಲುಬಾಗಿ ಕಾಲೇಜ ಅಧ್ಯಯನದಲ್ಲಿ ತುಂಬಾ ನೆರವು ನೀಡಿದರು. ಇಂಚಲರು ಅಲ್ಲಿಯ ಸ್ನೇಹಿತರ ಸಹವಾಸವನ್ನು ಜೀವನದ ತುಂಬಾ ಒಂದು ನಿಧಿಯನ್ನಾಗಿ ಬೆಳೆಸಿಕೊಂಡು ಬಂದರು. ಅವರ ದೃಷ್ಟಿಯಲ್ಲಿ ಅದೊಂದು ಕರಗಲಾರದ ಅಮೂಲ್ಯ ನಿಧಿ. ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದಾಗ ದಿ. ಪ್ರೊ. ಕೆ. ಜಿ. ಕುಂದಣಗಾರ, ಡಾ. ಆ. ನಾ. ಉಪಾಧ್ಯೆ, ಪ್ರಿ. ಡಾ. ಬಾಳಕೃಷ್ಣ ಅವರುಗಳು ತುಂಬಾ ಸಹಾಯಕರಾದರು. ಅವರ ಘನತೆ, ವಿದ್ವತ್ತು, ಅಪೂರ್ವ ವ್ಯಕ್ತಿತ್ವ ಇವುಗಳು ಇಂಚಲರ ಮೇಲೆ ಬಹಳೇ ಪರಿಣಾಮ ಬೀರಿದವು. ಕೊಲ್ಹಾಪೂರದಲ್ಲಿಯ ಎರಡು ವರ್ಷಗಳ ಜೀವನವು ತುಂಬಾ ಅಭ್ಯಾಸಮಯವಾಗಿತ್ತು. ಕಾಲೇಜ ವಾಚನಾಲಯದ ಉತ್ತಮವಾದ ಕಥೆ, ಕಾದಂಬರಿ, ಕವನ ಪುಸ್ತಕಗಳನ್ನು ಅವರು ಓದುತ್ತಿದ್ದರಲ್ಲದೆ, ಕೆಲವು ಸಲ ನಿತ್ಯದ ಅಭ್ಯಾಸವನ್ನು ಕಡೆಗಣಿಸಿ ಕನ್ನಡ ಸಾಹಿತ್ಯದ ಅಭ್ಯಾಸದಲ್ಲಿ ಮೈಮರೆತುದೂ ಉಂಟು. ಅಲ್ಲಿ ಇರುವಾಗಲೇ ಹಲವಾರು ಕವನಗಳನ್ನು ಅವರು ಬರೆದರಲ್ಲದೆ, ವಾರ್ಷಿಕ ಕಾವ್ಯಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನಗಳನ್ನು ಪಡೆದರು, 'ಸಂಕ್ರಾಂತಿ' 'ತಾಯಿ' 'ಕರ್ನಾಟಕ ಗೀತೆ' 'ಕಳೆದ ಕಿತ್ತೂರ' ಮೊದಲಾದ ಕವನಗಳು 'ರಾಜಾರಾಮಿಯನ್' ಮಾಸಿಕದಲ್ಲಿ ಪ್ರಕಟವಾಗಿ ಅಪೂರ್ವ ಕೀರ್ತಿ ಗೌರವಗಳನ್ನು ತಂದವು. ಕರ್ನಾಟಕ ಸಂಘದ ಪ್ರತಿಯೊಂದು ಕಾರ್ಯಕಲಾಪದಲ್ಲಿ ಆಸಕ್ತಿಯಿಂದ ಅವರು ಭಾಗವಹಿಸುತ್ತಿದ್ದರು. ದಿ. ಅ. ತು. ಸಾಸನೂರ, ಡಾ. ವಿ. ಕೃ. ಗೋಕಾಕ, ಡಾ. ಬಾಳಕೃಷ್ಣ ಮೊದಲಾದ ಗಣ್ಯ ಸಾಹಿತಿಗಳ ಪರಿಚಯವೂ ಆಯಿತು. ಅನೇಕ ಹಿರಿಯ ಸಾಹಿತಿಗಳ ಲೇಖನಗಳನ್ನು ವಿಮರ್ಶೆಗಳನ್ನು ಕವನಗಳನ್ನು 'ಜಯ ಕರ್ನಾಟಕ' ಮೊದಲಾದ ಮಾಸಿಕಗಳಲ್ಲಿ ಓದುತ್ತಿದ್ದರು. ಗೆಳೆಯರನೇಕರು ಅವರ ಕವನಗಳನ್ನು ಸಭೆ ಸಮ್ಮೇಲನಗಳಲ್ಲಿ ಸರಾಗವಾಗಿ ಹಾಡಿ ಅವುಗಳನ್ನು ಒಳ್ಳೇ ಪರಿಣಾಮಕಾರಿಯಾಗಿ ಪ್ರಚುರಗೊಳಿಸಿದರು. ಬಾಲ್ಯದಲ್ಲಿಯೇ ಅವರಿಗೆ ಪದ್ಯರಚನೆಯ ಹಂಬಲವುಂಟಾಗಿತ್ತು; ಆಗಲೇ ಅವರ

ಕವನಗಳು ಪ್ರೌಢವಾಗಿದ್ದು ರಸಕ್ರಿಯೆಯನ್ನು ತೋರುತ್ತಿದ್ದವು. ‘ ತಾಂಡವ ನೃತ್ಯ ’ ಎಂಬ ಗೀತೆಯೇ ಇದಕ್ಕೆ ಸಾಕ್ಷಿ.

‘ ಸಾಮ್ರಾಟರಬ್ಬರವು ಸದ್ದಿಲ್ಲದಡಗುತಿದೆ
ಬಲಾಬಲರ ತೆನೆ ಒಕ್ಕುತಿದೆ ಮುಕ್ಕುತಿದೆ
ಪೋಷವದು ಮರುಕವದು ನ್ಯಾಯನೀತಿಯು ಮೇಣ್
ಜಾತಿ ಮತಭೇದಗಳು ತಾವೆದ್ದು ಓಡುತಿವೆ !
ಬಂತಿದೋ ! ! ಶೂಲೆಂದು ! ! ತತ್ರಳಿವುದೆಂದು ! !
ಹಾರುತಿವೆ ಪಾರುತಿವೆ ಪ್ರಾಣಗಳು ಹೇಳಹೆಸರಿಲ್ಲದೆ
ತಾಂಡವಕೆ ತತ್ತರಿಸಿ ತಾಳೆವೆಂದು . ’

(೧೯೩೪)

ದೇಶಪ್ರೇಮದ ಹೃದಯದ ಕುದಿಯು ತೀವ್ರ ಪರಿಣಾಮಕಾರಿಯಾಗಿ ಮೂಡಿ ಬಂದುದನ್ನು ನಾವು ಈ ಕವಿತೆಯಲ್ಲಿ ಕಾಣಬಹುದಾಗಿದೆ. ಈ ರೀತಿ ಕಾವ್ಯ ರಚನೆಯಲ್ಲಿ ಹೆಚ್ಚಿನ ಸ್ಫೂರ್ತಿಯನ್ನು ಮಹಾರಾಷ್ಟ್ರದ ನೆಲದಿಂದ ಪಡೆದುಕೊಂಡು ಬಿ. ಎ. ಅಭ್ಯಾಸ ಮುಂದುವರಿಸಲು ಬೆಳಗಾವಿಯ ಲಿಂಗರಾಜ ಕಾಲೇಜನ್ನು ಸೇರಿದರು. ಪ್ರೊ. ಶಿ. ಶಿ. ಬಸವನಾಳ, ಪ್ರೊ. ಬಾಗಿ, ಪ್ರೊ. ವ್ಹಿ. ಜಿ. ಕುಲಕರ್ಣಿ, ಪ್ರೊ. ಶ್ರೀನಿವಾಸ ಅಯ್ಯಂಗಾರ ಅವರಂಥ ಅಧ್ಯಾಪಕ ಶ್ರೇಷ್ಠರ ಮಾರ್ಗದರ್ಶನ ಇಂಚಲರಿಗೆ ಲಭಿಸಿ ಜೀವನ ವಿಕಾಸಗೊಂಡಿತು ಕನ್ನಡ ವಿದ್ವಾಂಸರಾದ ಪ್ರೊ. ಬಸವನಾಳರಿಂದ ಕನ್ನಡದಲ್ಲಿ ವಿಶೇಷ ಪರಿಣತಿಯನ್ನು ಪಡೆದರು. ಶ್ರೀ. ಬಸವನಾಳರ ಆಳವಾದ ಕನ್ನಡ ಪಾಂಡಿತ್ಯ, ಹಾಸ್ಯಪ್ರಧಾನವಾದ ಗಂಭೀರವಾದ ಉಚ್ಚಮಟ್ಟದ ಪಾಠಗಳು, ಅತುಲವಾದ ಪ್ರೀತಿ ವಿಶ್ವಾಸಗಳು, ಸಾಹಿತ್ಯದ ಪರಿಜ್ಞಾನ ಪರಿಚಯಗಳು ಅವರ ಅಭ್ಯಾಸದ ಮೇಲೆ ಪ್ರಭಾವ ಬೀರಿದವು. ‘ ಪ್ರೊ. ಬಸವನಾಳರ ಕನ್ನಡದ ಕಕ್ಕುಲತೆ ಹಾಗೂ ಪಾಂಡಿತ್ಯ, ಅವರ ಉನ್ನತವಾದ ವಿಮರ್ಶನ ನೈಪುಣ್ಯ ಹಾಗೂ ಚಾತುರ್ಯ, ಹಳಗನ್ನಡದ ಅಪಾರವಾದ ಜ್ಞಾನ, ಅನುಭವ, ಇಂಗ್ಲೀಷ ಹಾಗೂ ಕನ್ನಡ ವಿಷಯಗಳ ತುಲನಾತ್ಮಕವಾದ ಭಾಷಾಪಾಂಡಿತ್ಯ ಪ್ರೌಢಿಮೆಗಳು ನನ್ನನ್ನು ಬೆರಗುಗೊಳಿಸುತ್ತಿದ್ದವು. ಅವರ ಜೊತೆಯಲ್ಲಿರುವದರಿಂದಲೇ ಒಂದು ಬಗೆಯಾದ ಒಳ್ಳೆಯ ಸಂಸ್ಕಾರಕ್ಕೆ ಎಡೆಯಾಗುತ್ತಿತ್ತು.’ ಎಂದು ಇಂಚಲರೇ ಹೇಳಿಕೊಂಡಿದ್ದಾರೆ. ಎರಡು ವರುಷಗಳ

ಕಾಲ ಪ್ರೊ. ಶಿ. ಶಿ. ಬಸವನಾಳರ ಸಾನಿಧ್ಯದಲ್ಲಿದ್ದುಕೊಂಡು ಪಾಠ ಕೇಳುವ ಸುಯೋಗ ಅವರಿಗೆ ಲಭಿಸಿತು. ಕಾಲೇಜ ವಿದ್ಯಾರ್ಥಿಯಾಗಿದ್ದಾಗಲೇ ಶಿಸ್ತು ಓರಣ ಅವರಲ್ಲಿ ಎದ್ದು ಕಾಣುತ್ತಿದ್ದವು. ಯಾವಾಗಲೂ ಸ್ವಚ್ಛವಾದ ಬಟ್ಟೆಗಳನ್ನು ಧರಿಸುತ್ತಿದ್ದರು. ೧೯೩೮ ರಲ್ಲಿ ಬಿ. ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಹಿರೇಬಾಗೇವಾಡಿಗೆ ಮೊದಲನೆಯ ಪದವೀಧರರಾದುದೊಂದು ವಿಶೇಷ. ಪದವೀಧರರಾದ ನಂತರ ಒಂದು ಪ್ರಸಂಗ ಜರುಗಿತು. ತಂದೆ ದೇವಪ್ಪ ಮಾಸ್ತರರಿಗೆ ದುಡ್ಡಿನಮೇಲೆ ಅಭಿಲಾಷೆ ಹೆಚ್ಚು. ಯಾವದೋ ಒಂದು ಕಾರಣ ಮುಂದಿಟ್ಟು ಇಂಚಲರು ತಂದೆಯ ಹತ್ತಿರ ಹಣ ಬೇಡಿದರು. ತಂದೆಯವರು ಕೊಡಲು ನಿರಾಕರಿಸಿದಾಗ ದೊಡ್ಡ ವಾಗ್ವಾದವೇ ಆಯಿತು. ಕೊನೆಯಲ್ಲಿ ನೂರು ರೂಪಾಯಿ ನೋಟನ್ನು ದೇವಪ್ಪನವರು ಕೋಪದಿಂದ ಮಗನಿಗೆ ಕೊಟ್ಟರಂತೆ. ಆಗ ಆ ನೋಟನ್ನು ತಂದೆಯ ಸಮಕ್ಷಮ ಹರಿದು ಹಾಕಿ ಅವರ ಮೇಲೆ ತೂರಿ 'ನಿನ್ನ ಬದುಕ ಹೊಲೆಯರಿಗೆ ಆಗಲಿ' ಎಂದು ನುಡಿದು ಬಾಗೇವಾಡಿಯಿಂದ ಬೆಳಗಾವಿಗೆ ಹೊರಟು ಬಂದರಂತೆ! ಇಂಚಲರು ಶೀಘ್ರಕೋಪಿಯೇನೊ ನಿಜ, ಆದರೆ ಜೀವನದಲ್ಲಿ ಹಣಕ್ಕಿಂತಲೂ ಗುಣಕ್ಕೆ ಪ್ರಾಧಾನ್ಯವಿರಬೇಕೆಂದು ಅವರ ಮನಸ್ಸಿನ ಹಂಬಲವು ಈ ಘಟನೆಯಿಂದ ಎದ್ದು ಕಾಣುತ್ತದೆ. ಆನಂತರ ಶ್ರೀಗಳಾದ ಎಸ್. ಎಫ್. ಪಾಟೀಲ, ರಾಮನಗೌಡಾ ಬಿ. ಪಾಟೀಲ (ಮಾಸ್ತರ) ಬಿ. ಎ. ದೇಸಾಯಿ ಪ್ರಭೃತಿಗಳ ಸಹಾಯದಿಂದ ಬೆಳಗಾವಿ ಗಿಲಗಿಂಚಿ ಅರಟಾಳ ಹಾಯಸ್ಕೂಲಿನಲ್ಲಿ ಶಿಕ್ಷಕರಾದರು. ಪಟ್ಟಣದಲ್ಲಿ ನೌಕರಿ ಆರಂಭಿಸಿದೊಡನೆ ಕೆಲವರು ತಮಗೆ ಜನ್ಮಕೊಟ್ಟ ಹಳ್ಳಿಯನ್ನು ಮರೆಯುತ್ತಾರೆ. ಆದರೆ ಇಂಚಲರು ಹಾಗೆ ಮರೆಯಲಿಲ್ಲ. ಹಿರೇಬಾಗೇವಾಡಿಯ ಪ್ರತಿಯೊಂದು ಕಾರ್ಯಕ್ರಮಗಳ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. 'ನಿಮ್ಮ ಕೂಸು ನಾ. ಭಾಗ್ಯದವಾಡಿಯ ಮಗ' ಎಂದು ಮೇಲಿಂದ ಮೇಲೆ ಅವರು ಉದ್ಗಾರ ಹೊರಡಿಸುತ್ತಿದ್ದರು. ತಮ್ಮೂರ ಜನ ಎಲ್ಲಿಯೇ ಭೆಟ್ಟಿಯಾದರೂ ಅವರನ್ನು ಆತ್ಮೀಯತೆಯಿಂದ ಮಾತನಾಡಿಸಿಯೇ ಮುಂದೆ ಹೋಗುತ್ತಿದ್ದರು. ಇವರ ಪ್ರೇರಣೆಯಿಂದಲೇ ಬಾಗೇವಾಡಿಯ ಹೆಚ್ಚಿನ ಜನ ವಿದ್ಯಾಭ್ಯಾಸ ಪಡೆದರೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಿಕ್ಕಿಲ್ಲ. ತಮ್ಮೂರಲ್ಲಿ ಹಾಯಸ್ಕೂಲನ್ನು ಪ್ರಾರಂಭಿಸುವಾಗ ಬಹಳೇ ಶ್ರಮವಹಿಸಿ ದುಡಿದರು. ಕರ್ತವ್ಯ ಬುದ್ಧಿಯಿಂದ ಮಾಡಿದ ಇಂಚಲರ ಈ ಸೇವೆಯನ್ನು ಬಾಗೇವಾಡಿಯ ಜನ ಈಗಲೂ ಕೊಂಡಾಡುತ್ತಾರೆ. ಇಂಚಲರ

ಭಾಷಣ ಬಾಗೇವಾಡಿಯಲ್ಲಿ ಇದೆಯೆಂದು ತಿಳಿದರೆ ಸುತ್ತುಮುತ್ತಲಿನ ಅನೇಕ ಗ್ರಾಮಗಳ ಜನಸಹಸ್ರಾರು ಸಂಖ್ಯೆಯಲ್ಲಿ ಸೇರಿ ಅವರ ಭಾಷಣವನ್ನು ತದೇಕ ಚಿತ್ತದಿಂದ ಆಲಿಸುತ್ತಿದ್ದರು. ಅವರ ಭಾಷಣದ ಮೋಡಿಯೇ ಅಂತಹದು !

' ಇಂಚಲ ಮುತ್ತಿನ ಗೊಂಚಲ ' ' ಹೊಂಗಲ ಮುತ್ತಿನ ಟೊಂಗಲ ' ಎಂದು ಮೇಲಿಂದ ಮೇಲೆ ಇಂಚಲರು ಗುಣಗುಣಿಸುತ್ತಿದ್ದರು. ಇದು ಗ್ರಾಮಗಳ ಮೇಲಿನ ಸಾತ್ವಿಕ ಪ್ರೇಮವನ್ನು ವ್ಯಕ್ತಪಡಿಸುತ್ತದೆಯಲ್ಲವೆ ? ಕ್ರಾಂತಿಕಾರಿಣಿ ಕಿತ್ತೂರ ಚೆನ್ನಮ್ಮನ ಪ್ರಭಾವ ಇಂಚಲರ ಮೇಲೆ ಬಿದ್ದಷ್ಟು ಬಹುಶ: ಮತ್ತಿತರರ ಮೇಲೆ ಬಿದ್ದಿರಲಿಕ್ಕಿಲ್ಲೆಂದು ಅನಿಸುತ್ತದೆ. ಕಿತ್ತೂರು ನೆನಪಾದರೆ ಅವರ ಮೈ ಉಬ್ಬಿ ರೋಮಾಂಚನಗೊಳ್ಳುತ್ತಿತ್ತು. ಆ ಗಂಡುಭೂಮಿಯ ಪ್ರಭಾವವೇ ಅಂತಹದು. ಅವರು ಕಿತ್ತೂರನ್ನು ಕುರಿತು ಬರೆದ ಲಾವಣಿಯನ್ನು ' ಗೀಗೀ ' ಗೆ ತರ್ಜುಮೆ ಮಾಡಿದರಲ್ಲದೆ, 'ಕಿತ್ತೂರ ಕ್ರಾಂತಿ' ಯೆಂಬ ಕವನವನ್ನು ಪರಿಣಾಮಕಾರಿಯಾಗಿ ರಚಿಸಿದರು. ಇಂದಿಗೂ ಆ ಪದಗಳನ್ನು ಹಳ್ಳಿಹಳ್ಳಿಗಳಲ್ಲಿ ಪರಿಣಾಮಕಾರಿಯಾಗಿ ಜನ ಹಾಡುತ್ತಾರೆ.

ಇಂಚಲರು ಕೆ. ಎಲ್. ಇ. ಸೊಸಾಯಟಿಯಿಂದ ನಡೆಸಲ್ಪಡುತ್ತಿರುವ ಹುಬ್ಬಳ್ಳಿ ಮತ್ತು ಬೆಳಗಾವಿ ಟ್ರೇನಿಂಗ ಕಾಲೇಜುಗಳಲ್ಲಿ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರಲ್ಲದೆ. ಗಿಲಗಿಂಚಿ ಅರಟಾಳ ಹಾಯಸ್ಕೂಲಿನಲ್ಲಿಯೂ ಅನೇಕ ವರ್ಷ ಕಾಲ ಪ್ರಿನ್ಸಿಪಾಲರಾಗಿ ದಕ್ಷ ಸೇವೆಯನ್ನು ಸಲ್ಲಿಸಿ ' ಆದರ್ಶ ಶಿಕ್ಷಕ ' ರಾದರು. ೧೯೭೪ ರ ಎಪ್ರೀಲ ಒಂದರಂದು ಗಿಲಗಿಂಚಿ ಅರಟಾಳ ಹಾಯಸ್ಕೂಲಿನಿಂದಲೇ ನಿವೃತ್ತರಾದರು.

ಶಾಲೆಯ ಮಕ್ಕಳೆಲ್ಲರು ತಮ್ಮ ಮಕ್ಕಳೆಂದು ಇಂಚಲರು ಭಾವಿಸಿದ್ದರು. ಎಷ್ಟೋ ಬಾರಿ ಅವರು ಸಾಯಂಕಾಲ ಶಾಲೆಯಿಂದ ಬೇಗನೆ ಮನೆಗೆ ಬಾರದೆ ಇದ್ದಾಗ ದಾರಿಕಾಯ್ದು, ಧರ್ಮಪತ್ನಿ ಕಮಲಮ್ಮನವರು, ಅವರು ಬಂದಾಗ ಹುಸಿ ಮುನಿಸಿನಿಂದ—" ಅದೆಂತಹ ಶಾಲೆ, ಅದೇನು ಕೆಲಸ, ಊಟದ, ನಿದ್ರೆಯ ಪರಿವೆಯಿಲ್ಲ. ಎರಡೆರಡು ದಿನ ಮಕ್ಕಳ ಮುಖದರ್ಶನವೂ ನಿಮಗಿಲ್ಲ" ಎಂದು ನುಡಿದರೆ ಅವರು–" ನಿನಗೆ ನಿನ್ನ ಬರಿ ನಾಲ್ಕು ಮಕ್ಕಳ ಚಿಂತೆಯಾದರೆ ನನಗೆ ನನ್ನ ಶಾಲೆಯ ಸಾವಿರ ಮಕ್ಕಳ ಚಿಂತೆ !" ಎಂದು ಅನ್ನುತ್ತಿದ್ದರು. ಶಾಲೆಯಲ್ಲಿ

ದ್ದಾಗ ಮನೆಯು ನೆನಪೂ ಸಹ ಅವರಿಗಾಗುತ್ತಿರಲಿಲ್ಲ. ಮಕ್ಕಳೊಡನೆ ಮಕ್ಕಳಾಗಿ ಬೆರೆತು ಹೊರಗಿನ ವಾಸ್ತವ ಪ್ರಪಂಚವನ್ನೇ ಮರೆತು ಬಿಡುತ್ತಿದ್ದರು. ಶಾಲೆಯಲ್ಲಿ ವಿದ್ಯಾರ್ಥಿಗಳೊಡನೆ ಬೆರೆತು ಅನೇಕ ಆಟಗಳನ್ನು ಆಡುತ್ತಿದ್ದರು. 'Musical Chair' ಆಟ-ಅವುಗಳಲ್ಲಿ ಒಂದು. ಯಾವುದೇ ಆಟ ಆಡಿದರೂ ಕೊನೆಗೆ ಜಯಮಾತ್ರ ಅವರದೇ !

ಹೆಣ್ಣು ಮಕ್ಕಳನ್ನು ಚುಡಾಯಿಸುವ ಗಂಡುಗಳನ್ನು ಕಂಡರಂತೂ ಇಂಚಲರು ಈದ ಹುಲಿಯಂತೆ ಸಿಡಿಮಿಡಿಗೊಳ್ಳುತ್ತಿದ್ದರು, ಅವರೊಮ್ಮೆ ತಮ್ಮ ಶಾಲೆಗೆ ಹೊರಟಾಗ ದಾರಿಯಲ್ಲಿ ಸಾಗಿದ ಸಾಲ್ವರು ಹುಡುಗಿಯರಿಗೆ ಹುಡುಗರ ಗುಂಪೊಂದು ಕೀಟಲೆ ಕೊಟ್ಟಿತು. ಅವರು ಯಾರು ಏನು ಯಾವದೂ ವಿಚಾರಿಸದೆ. ಆ ಹುಡುಗರನ್ನು ಚೆನ್ನಾಗಿ ಥಳಿಸಿಯೇ ಬಿಟ್ಟರು. ಇಂತಹ ಕೀಟಲೆ ಕೆಲಸವನ್ನು ಆ ಹುಡುಗರು ಬಹುಶ: ತಮ್ಮ ಭಾವಿ ಜೀವಮಾನ ದಲ್ಲಿಯೇ ಮಾಡಿರಲಿಕ್ಕಿಲ್ಲ ! ಹೆಣ್ಣುಮಕ್ಕಳೆಂದರೆ ಎಷ್ಟೊಂದು ಗೌರವ ಇವರಿಗೆ!!

ಹಾಯಸ್ಕೂಲಿನ ವಿದ್ಯಾರ್ಥಿಯೊರ್ವನು, ಬಡತನದಲ್ಲಿ ಬಳಲಿ ನೊಂದು ಒಣಗುತ್ತಿರುವ ಬಾಳಿನ ಸುಳಿಯಲ್ಲಿ ಸಿಕ್ಕಿ ಹಗಲಿರುಳು-ಮುಂದೆ ಏನು, ಹೊಟ್ಟೆಗಿಲ್ಲದ ಬಟ್ಟೆಗಿಲ್ಲದ ತಾನು ವಿದ್ಯೆ ಕಲಿಯುವದು ಸಾಧ್ಯವೇ ? ಎಂದು ಚಿಂತಿಸುತ್ತ ವಿದ್ಯಾಮಂದಿರದ ಕಡೆಗೆ ಬರುತ್ತಿದ್ದ ಇಂಚಲರು ಆಬಾಲಕನನ್ನು ಕಂಡು ಅವನ ದು:ಖದ ಕಥೆಯನ್ನು ಕೇಳಲು ಉತ್ಸುಕರಾದರು. "ಯಾಕೆ ಮಗೂ, ನಿನಗೆ ಬಂದ ಕಷ್ಟವಾದರೂ ಏನು ?" ಎಂದು ಅವನನ್ನು ವಿಚಾರಿಸಿದಾಗ ಆ ವಿದ್ಯಾರ್ಥಿಯು ತನ್ನ ಕರುಣ ಕಥೆಯನ್ನು ಹೇಳಿ ಕಣ್ಣೀರು ಸುರಿಸಿದ. ಆ ದೀನ ಮುಖದಿಂದ ಉದುರಿದ ಕಣ್ಣೀರನ್ನು ಕಂಡು ಇಂಚಲರ ಕಣ್ಣೀರು ಕೂಡ ಹೊನಲಾಗಿ ಹರಿಯಿತು. ಅದುವೇ ಪ್ರತಿರೂಪಗೊಂಡು 'ತಬ್ಬಲಿ' ಕವನದ ರೂಪದಲ್ಲಿ ಮೂಡಿ ಬಂತು.

ಸ್ವಭಾವತಃ ಶೀಘ್ರಕೋಪಿಯಾದ ಇವರು ವಿದ್ಯಾರ್ಥಿಗಳ ನಡತೆಗೆ ಬೇಸತ್ತು ಕೆಲವೊಂದು ಸಾರೆ ಅವರ ಮೇಲೆ ಕೋಪಗೊಂಡುದು ಉಂಟು; ಮತ್ತೊಮ್ಮೆ ಅವರನ್ನು ಕಂಡಾಗ ಪ್ರೀತಿಯಿಂದ ಅಪ್ಪಿಕೊಂಡದ್ದೂ ಉಂಟು. ಅವರ ಶಿಷ್ಯಾಭಿಮಾನ ಅನುಪಮವಾದುದು. ವಿದ್ಯಾರ್ಥಿಗಳು ಪ್ರಥಮ ಶ್ರೇಣಿ

ಯಲ್ಲಿ ಉತ್ತೀರ್ಣರಾದಾಗ ಅವರ ಹೆಮ್ಮೆ ಹೇಳತೀರದು. ಕುಮಾರ ಕಳ್ಳಿಮಠ ಎಂಬ ವಿದ್ಯಾರ್ಥಿಯು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪ್ರಥಮ ವರ್ಗವನ್ನು ಸಂಪಾದಿಸಿದನು. ಆತನು ಇಂಚಲರ ಹತ್ತಿರ ಬಂದು ನಮಸ್ಕರಿಸಿ— " ಸರ್ ಪ್ರಥಮ ವರ್ಗದಲ್ಲಿ ಉತ್ತೀರ್ಣನಾದೆ. ಕಾಲೇಜು ಸೇರಬಯಸುವೆ।" ಎಂದು ನುಡಿದ. ಆಗ ಇಂಚಲರು— " ದಕ್ಷತೆಯಿಂದ ಮಾಡಿದ ಯಾವ ಕೆಲಸವಾದರೂ ಫಲ ಕೊಡುವದು. ಕರ್ತವ್ಯದಕ್ಷತೆಯೇ ಮುಖ್ಯ. ತತ್ವ ನಿಷ್ಠೆಯೇ ಪ್ರಮುಖ ಸಾಧನೆ. ಜೀವನದಲ್ಲಿ ಈ ವಿಚಾರಗಳನ್ನು ಸಕ್ರಿಯವಾಗಿ ಅಳವಡಿಸಿಕೊಂಡರೆ ಕೊನೆಗೆ ಜೀವನದುದ್ದಕ್ಕೂ ಯಶ ಕಟ್ಟಿಟ್ಟ ಬುತ್ತಿಯಾಗುತ್ತದೆ....... ಮುಂದಿನ ಪರೀಕ್ಷೆಗಳಲ್ಲೂ ಇದೇ ರೀತಿ ಯಶಸ್ಸನ್ನು ಸಂಪಾದಿಸು " ಎಂದು ಆಶೀರ್ವದಿಸಿದರು. ಹೀಗೆ ವಿದ್ಯಾರ್ಥಿಗಳ ಬೆಳವಣಿಗೆಗೆ ಆಗಾಗ ವಿಶೇಷ ಪ್ರೋತ್ಸಾಹ ನೀಡಿ ಮಾರ್ಗದರ್ಶನ ಮಾಡುತ್ತಿದ್ದರು. ವಿದ್ಯಾರ್ಥಿಗಳು ಬೇಡದಿದ್ದರೂ ಕೂಡ ಅವರು ಒಳ್ಳೆಯವರೆಂದು ಕಂಡು ಬಂದರೆ ತಾವಾಗಿಯೇ ಒಳ್ಳೆಯ ಶಿಫಾರಸ ಪತ್ರವನ್ನು ಕೊಟ್ಟು ಅವರನ್ನು ಸಂತೋಷಗೊಳಿಸುತ್ತಿದ್ದರು, ಜೊತೆಗೆ ತಾವೂ ಸಂತೋಷಪಡುತ್ತಿದ್ದರು. ' ನಿಮ್ಮಲ್ಲಿರುವ ಹೊಸತನವು ಜನತೆಯ ಕಲ್ಯಾಣಕ್ಕಾಗಿ ಉಪಯೋಗವಾಗಬೇಕು ' ಎಂದು ವಿದ್ಯಾರ್ಥಿಗಳಿಗೆ ಪದೇ ಪದೇ ಹೇಳುತ್ತಿದ್ದರು. ಸಪ್ಪೆ ಜೀವನ ಅವರಿಗೆ ಎಳ್ಳಷ್ಟೂ ಸೇರುತ್ತಿರಲಿಲ್ಲ. ಕರ್ತವ್ಯವನ್ನು ಮರೆತ ಮನುಷ್ಯ ಸತ್ತಂತೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಇದೇ ಮಾತನ್ನು ಅವರು ಮಹಾಭಾರತದ ಹಲವಾರು ದೃಷ್ಟಾಂತಗಳನ್ನೆತ್ತಿಕೊಂಡು ತಮ್ಮ ವಿದ್ಯಾರ್ಥಿಗಳಿಗೆ ಮೇಲಿಂದ ಮೇಲೆ ಬಿಂಬಿಸಿ ಹೇಳಿ ಅವರು ಕರ್ತವ್ಯಚ್ಯುತರಾಗದಂತೆ ಬೋಧಿಸುತ್ತಿದ್ದರು. ವಿದ್ಯಾರ್ಥಿಗಳು ಧೈರ್ಯಗೆಡದಂತೆ ಅವರು ಎಚ್ಚರವಹಿಸುತ್ತಿದ್ದರು. ಅಧೈರ್ಯಗೊಂಡರೆ ವಿಚಾರಶೂನ್ಯವಾಗುವದು ಎಂಬುದು ಅವರ ಅಭಿಪ್ರಾಯ.

ಶಿಕ್ಷಕರು ಕರ್ತವ್ಯಪಾಲನೆಯಲ್ಲಿ ತಪ್ಪಿದ್ದು ಕಂಡುಬಂದರೆ ಅವರು ಬೆಂಕಿಯ ಕೆಂಡವಾಗುತ್ತಿದ್ದರು. " ಮಾಸ್ತರಕಿ ಒಂದನ್ನು ಬಿಟ್ಟು ಎಲ್ಲಾ ' ಧಂಧಾ ' ಮಾಡಿದರ ನಡೀತ್ವದಂತ ತಿಳಕೊಂಡೀರೇನು ? ಯಾವಾಗ ಬೇಕಂ ಆವಾಗ ಸಾಲೀಗೆ ಬರೂದಂದ್ರ ಇದೇನು ದನಗಳ ಕೊಂಡವಾಡಿ ಅಲ್ಲ !

ನಿಮ್ಮ ಕೆಲಸ ಮುಖ್ಯ. ನಿಯಮಿತತನ ಪ್ರಾಮಾಣಿಕತೆ ಇರಲಿ! ತಿಳಿತೇನ್ರಿ!!" ಎಂದು ಕರ್ತವ್ಯಪರಾಙ್ಮುಖರಾದ ಕೆಲವು ಶಿಕ್ಷಕರನ್ನು ಕಂಡು ಬೆದರಿಸಿ ದಾರಿಗೆ ತರುತ್ತಿದ್ದರು. ಅನೀತಿ, ಅಸಭ್ಯ, ಅಪ್ರಾಮಾಣಿಕತೆ, ಅನಿಯಮಿತತನ ಕಂಡು ದೂರ ಹಾರುವ ವಜ್ರದಂತಿದ್ದ ವ್ಯಕ್ತಿ.

೧೯೪೦ ರಕ್ಕಿಂತಲೂ ಮೊದಲು ಬೆಳಗಾವಿಯಲ್ಲಿ ಕನ್ನಡಕ್ಕೊದಗಿದ ದುರ್ದೆಸೆ ಹೇಳತೀರದು. ಕನ್ನಡಿಗರು ಯಾವುದೇ ಅಂಗಡಿಗೆ ಹೋದರೂ ಅಂಗಡಿಕಾರರು 'ಕಾಯ್ ಪಾಹಿಜೇ' ಎಂದೇ ಕೇಳುತ್ತಿದ್ದರು. ಇದಕ್ಕೆ ಏನು ಉತ್ತರಿಸಬೇಕೆಂಬುದನ್ನರಿಯದ ಕನ್ನಡಿಗರು ಜೀನಸುಗಳ ಮೇಲೆ ಬೊಟ್ಟಿಟ್ಟು ತೋರಿಸುವ ಪ್ರಸಂಗ ಬರುತ್ತಿತ್ತು. ಕನ್ನಡದ ಬಗ್ಗೆ ಕಳಕಳಿ ಇದ್ದವರೂ ಕೂಡ ತಮ್ಮ ಹೃದಯದಲ್ಲಿ ಹುದುಗಿದ್ದ ಕನ್ನಡ ಪ್ರೇಮವನ್ನು ಹೊರಗೆ ತೋರಗೊಡದೆ ಮರಾಠಿಗರ ಕಡೆಗೆ ವಾಲುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ಕನ್ನಡಿಗರಲ್ಲಿ ಕನ್ನಡತನವನ್ನು ಅರಿವು ಮಾಡಿಕೊಟ್ಟು 'ಬೆಳಗಾವಿ ಎಂದೆಂದಿಗೂ ಕನ್ನಡಿಗರದ್ದು' ಎಂದು ಹೇಳಿಕೊಡುವ ಭಾಗ್ಯವು ಆಗ ಕೆಲವರಿಗೆ ಮಾತ್ರ ಸೀಮಿತವಾಗಿತ್ತು. ಅಂಥವರಲ್ಲಿ ಶ್ರೀ. ಇಂಚಲರೂ ಒಬ್ಬರಾಗಿದ್ದರು. ಕನ್ನಡದ ಗಂಡುನಾಡು ಬೆಳಗಾವಿ ಕನ್ನಡಿಗರಾದ ನಮ್ಮದು; ಅದರ ವಾರಸುದಾರರು ನಾವು ಎಂದು ಕನ್ನಡಿಗರಿಗೆ ಬಿಚ್ಚು ಮಾತುಗಳಲ್ಲಿ ಅನೇಕ ಬಾರಿ ಗುಡುಗಿ ಅವರನ್ನು ಕನ್ನಡದ ಜಾಗೃತಿಗೆ ಅಣಗೊಳಿಸುತ್ತಿದ್ದರು.

ಆದೆಷ್ಟೋ ಕನ್ನಡಿಗರು ಕನ್ನಡತನವನ್ನು ಮರೆತು ಜೊತೆಗಾರರ ಪ್ರಭಾವದಿಂದ ಮರಾಠಿ ಭಾಷೆಯನ್ನು ಕಲಿಯುತ್ತಿದ್ದಾಗ ಇಂಚಲರ ಸಂಪರ್ಕದಿಂದ ಅವರಲ್ಲಿಯ ಕನ್ನಡತನವು ಪುನಃಶ್ಚೇತನಗೊಂಡು ಕನ್ನಡವನ್ನು ಅಭ್ಯಾಸ ಮಾಡಲು ಮುಂದಾದದ್ದುಂಟು. 'ಎಳೆಯರ ಬಳಗ' ಎಂಬ ಹೆಸರಿನಲ್ಲಿ ಬೆಳಗಾವಿಯಲ್ಲಿ ಕನ್ನಡ ಮಕ್ಕಳ ಸಾಹಿತ್ಯ ಸಂಘವೊಂದನ್ನು ಕಟ್ಟಿ ಅದರ ಸ್ಫೂರ್ತಿಯ ಸೆಲೆಯಾಗಿ ನಿಂತರು. ಡಾ. ಡಿ. ಎಸ್. ಕರ್ಕಿ, ಶ್ರೀ. ಬ. ಗಂ. ತುರಮರಿ ಇವರೇ ಮೊದಲಾದ ಸ್ನೇಹಿತರನ್ನು ಕೂಡಿಕೊಂಡು ಕನ್ನಡದ ಜಾಗೃತಿಗಾಗಿ ಅನವರತ ಯತ್ನಿಸಿದರು. ೧೯೪೩ ರಲ್ಲಿ ಬೆಳಗಾವಿ ಲಿಂಗರಾಜ ಕಾಲೇಜ ಆವರಣದಲ್ಲಿ ಕನ್ನಡದ ಉತ್ಸವವನ್ನು ಅದ್ದೂರಿಯಿಂದ ಆಚರಿಸಿ ಕನ್ನಡ ಮಕ್ಕಳಲ್ಲಿ ಆತ್ಮಾಭಿಮಾನವನ್ನು ಕುದುರಿಸಿದರು.

ಅದೆಷ್ಟೋ ಸಲ ಅವರು ದಿಙ್ಮೂಢರಾಗಿ ಕೂಡ್ರುತ್ತಿದ್ದರು. ಆಗ ಅವರನ್ನು ಕಂಡವರಿಗೆ ತುಂಬಾ ಚಿಂತೆ ಆವರಿಸುತ್ತಿತ್ತು. ಯಾವ ಚಿಂತೆಯಲ್ಲಿ ಬೆಂದು ಬೇಗುದಿಗೊಳ್ಳುತ್ತಿದ್ದಾರೆ ? ಕನ್ನಡಿಗರ ಕಳವಳವನ್ನು ಕಂಡು ದುಃಖಿತರಾಗಿದ್ದಾರೋ ಅಥವಾ ಇನ್ನಾವುದೋ ಮನಸ್ಸಿನ ದುಗುಡ ಇವರನ್ನು ಕಾಡುತ್ತಿದೆಯೊ ? ಎಂಬ ವಿಚಾರ ಅವರ ಅಭಿಮಾನಿಗಳಲ್ಲಿ ಮೂಡುತ್ತಿತ್ತು. ಯಾವಾಗಲೂ ಅವರು ದುಃಖವನ್ನು ಮೌನರಾಗಿಯೇ ಅನುಭವಿಸುತ್ತಿದ್ದರು.

"ಎತ್ತಿ ಹಾಲುಣಿಸಿರ್ದ ತವರು ಮನೆಯನ್ನಗಲಿ
ಋಣವೆತ್ತ ಪರಿಪರಿಯ ಮೋಹ ಮಮತೆಯನುಳಿದು
ತಬ್ಬಲಿಗಳಾಗಿರ್ದ ಕರುನಾಡ ಸೋದರರೆ
ಮರಗುವೆನ್ ನಿಮಗಾಗಿ ಕರಗಿ ಕಡುವಿರಹದಲಿ
... ... ... ... ... "

ಕರ್ನಾಟಕ ರಾಜ್ಯೋದಯದ ಶುಭಕಾಲದಲ್ಲಿ ಕರುನಾಡನ್ನಗಲಿ ಹೋಗಿರುವ ಸೋದರ ಸೋದರಿಯರನ್ನು ಕುರಿತು ಇಂಚಲರು ಮರುಗಿ ಎದೆದುಂಬಿ ಆಡಿದ ಮಾತುಗಳಿವು. ದೂರ ಸರಿಯುತ್ತಿರುವ ತನ್ನ ಮಕ್ಕಳನ್ನು ಕಂಡು "ತಾಯೊಂದ ಕಣ್ಣನಲಿ ಅದೋ ನೀರು ಸುರಿಯುತಿದೆ" ಎಂದು ನುಡಿದ ಕವಿ "ಎಂತು ಸಹಿಸುವಳಮ್ಮ ಕರುಳ ಸವಿನೆನಹುಗಳ" ಎಂದು ಕೇಳುತ್ತಾರೆ. ಇಳಿವಯಸ್ಸನ್ನು ಲೆಕ್ಕಿಸದೆ ಹದಿನೆಂಟರ ಹರಯದವನಿಗಿಂತಲೂ ಹೆಚ್ಚು ಉತ್ಸಾಹದಿಂದ ದುಡಿದ ಪ್ರಸಂಗಗಳು ಹಲವಾರು. ಬೆಳಗಾವಿಯಲ್ಲಿ ಎಲ್ಲೆಲ್ಲಿ ಕನ್ನಡದ ಚಟುವಟಿಕೆಗಳು ನಡೆಯುತ್ತಿವೆಯೋ ಅಲ್ಲಲ್ಲಿ ಇಂಚಲರು ಇದ್ದವರೇ! ಅವರು ಇಲ್ಲದೆ ಚಟುವಟಿಕೆಗಳಿಗೆ ಕಳೆ ಕಟ್ಟುತ್ತಿರಲಿಲ್ಲವೆಂದು ಹೇಳಿದರೆ ತಪ್ಪಲ್ಲ. ಕನ್ನಡ ನಾಡಿನ ಮೂಲೆ ಮೂಲೆಗಳನ್ನು ಸಂಚರಿಸಿ ತಮ್ಮ ಗಂಡುಧ್ವನಿಯಿಂದ ಕನ್ನಡದ ಡಿಂಡಿಮವನ್ನು ಬಾರಿಸಿ ಕನ್ನಡದ ಕಿಚ್ಚನ್ನೂ, ಕೆಚ್ಚನ್ನೂ ಜಾಗೃತಗೊಳಿಸುವ ಮಹಾಪುಣ್ಯದ ಕಾರ್ಯವನ್ನು ಮಾಡಿದ್ದಾರೆ. ಕನ್ನಡದ ನೆಲ ಒಂದಾಗಲಿ ಯೆಂದು ಅಂದು ಅವರು ಬಯಸಿದರು. ಹರಿದು ಹಂಚಿಹೋದ ನೆಲ ಒಂದಾಯಿತೇನೋ ನಿಜ, ಆದರೆ ಅವರು ಬಯಸಿದಂತೆ ಆಗಲಿಲ್ಲ. ಜತ್ತ, ಅಕ್ಕಲಕೋಟೆ, ದಕ್ಷಿಣದ ಸೊನ್ನಲಿಗೆ (ಸೊಲ್ಲಾಪೂರ), ಕಾಸರಗೋಡು, ಆಲೂರು, ಆದ್ವಾನಿ, ಕನ್ನಡ ಪ್ರದೇಶದಿಂದ ದೂರುಳಿದವು. ಅದಕ್ಕಾಗಿ ಅವರು ಕೊನೆ

ಯುಸಿರಿರುವವರೆಗೂ ನಿಟ್ಟುಸಿರುಗರೆದರು. ಕಾವ್ಯಮುಖೇನ ಕನ್ನಡದ ತುತ್ತೂರಿಯನ್ನು ಇಂಚಲರು ಊದಿದ್ದಾರೆ. ಈ 'ಗಂಡುಕವಿ'ಯ ಹೃದಯದಿಂದ ಹೊರಬಂದ ಜಾಗೃತಿಯ ಕಿಡಿ ಜನಜೀವನದ ನರನಾಡಿಗಳನ್ನೇ ಮಿಡಿದಿದೆ.

ಸುಮಾರು ೧೯೭೦ ರಿಂದಲೂ ಅಸ್ತಮಾದಿಂದ ಅವರು ಆಗಾಗ ನರಳುತ್ತಿದ್ದರು. ಆದರೂ ಭಾಷಣ ಕಾರ್ಯಕ್ರಮವೆಂದರೆ ಇಂಚಲರ ಉತ್ಸಾಹ ಇಮ್ಮಡಿ-ಮುಮ್ಮಡಿಗೊಳ್ಳುತ್ತಿತ್ತು. ಆಗ ದೈಹಿಕ ತೊಂದರೆಗಳೆಲ್ಲವು ಮಾಯವಾಗುತ್ತಿದ್ದವು. ಅವರ ಅನಾರೋಗ್ಯದಿಂದ ಮನೆಯವರಿಗೆ ತೀವ್ರ ಕಳವಳವಾಗುತ್ತಿದ್ದರೂ ತಮ್ಮ ಪೂರ್ವನಿಯೋಜಿತ ಕಾರ್ಯಕ್ರಮದ ಪ್ರಕಾರ ಊರೂರು ಅಲೆದು ಭಾಷಣಗಳ ಮೂಲಕ ಜನಜಾಗೃತಿ ಮಾಡುತ್ತಿದ್ದರು. ಅವರು ಮೇಲುನೋಟಕ್ಕೆ ದೃಢಕಾಯರಾಗಿ ಕಂಡುಬರುತ್ತಿದ್ದರೂ ಒಳಗೊಳಗೇ ಅನಾರೋಗ್ಯದಿಂದ ಹಣ್ಣಾಗಿದ್ದರು. ಹೀಗೆಯೇ ಒಂದು ಪ್ರಸಂಗ. ಯಾದಗುಡ್ಡ ಗ್ರಾಮದಲ್ಲಿ ಕವಿಸಮ್ಮೇಳನ ಕಾರ್ಯಕ್ರಮ. ಅದರ ಉದ್ಘಾಟನೆಯನ್ನು ಇಂಚಲರೇ ಮಾಡುವವರಿದ್ದರು. ಸಮ್ಮೇಲನಕ್ಕೆ ಎರಡು ದಿನ ಮೊದಲು ನಾನು ಬೆಳಗಾವಿಗೆ ಹೋಗಿ ಅವರನ್ನು ಕಂಡಾಗ ಅವರು ಅಸ್ತಮಾದಿಂದ ಹಾಸಿಗೆ ಹಿಡಿದಿದ್ದರು. "ಅಸ್ತಮಾ ಉಲ್ಬಣಿಸಿದೆಯೇ ಸರ್" ಎಂದು ಕೇಳಿದಾಗ ಅವರು "ಅಹುದು, ನನ್ನ ಕನ್ನಡದ ಕೆಲಸಕ್ಕೆ ಮೇಲಿಂದಮೇಲೆ ಅಡ್ಡಿಪಡಿಸುತ್ತದೆ, ಏನು ಮಾಡಲಿ ?" ಎಂದು ಉದ್ಗಾರ ಹೊರಡಿಸಿದರು. ಮುಂದುವರೆದು ಅವರು—"ನಾಡದು ಯಾದಗುಡ್ಡಕ್ಕೆ ಹೋಗುವದು ಸಾಧ್ಯವಾಗಲಿಕ್ಕಿಲ್ಲ." ಎಂದರು. ಪೂರ್ವನಿಯೋಜಿತ ಕಾರ್ಯಕ್ರಮದ ಪ್ರಕಾರ ನಾನು ಯಾದಗುಡ್ಡಕ್ಕೆ ಹೋದೆ. ಅಚ್ಚರಿಯ ಸಂಗತಿಯೆಂದರೆ ನಾನು ಗ್ರಾಮವನ್ನು ಪ್ರವೇಶಿಸುವ ಮೊದಲೇ ಇಂಚಲರು ಅಲ್ಲಿಗೆ ಬಂದು ಕವಿಮಿತ್ರರೊಂದಿಗೆ ಹರಟೆ ಹೊಡೆಯುತ್ತಿದ್ದರು. ಕನ್ನಡದ ಕೆಲಸಕ್ಕೆ ಅಡ್ಡಬರುತ್ತಿದ್ದ ಅಸ್ವಸ್ಥತೆಯನ್ನು ಗಣನೆಗೆ ತಾರದೆ ತಮ್ಮ ಕೊನೆಯುಸಿರು ಇರುವವರೆಗೂ ಕರ್ಮಯೋಗಿಯಂತೆ ದುಡಿದರು. ೧೯೭೪ನೆಯ ಎಪ್ರಿಲ ೪ ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಶಾಖೆಯ ಪರವಾಗಿ ಜರುಗಿದ ಶ್ರೀ. ರಂಗನಾಥ ದಿವಾಕರ ಅವರ ಸತ್ಕಾರ ಸಮಾರಂಭದ ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷ

ಣವೇ ಅವರ ಕೊನೆಯ ಭಾಷಣವಾಯಿತು. ತಮ್ಮ ಕೊನೆಯ ಆಶೆಯನ್ನು ಈಡೇರಿಸಿಕೊಳ್ಳಲೆಂದೇ ಕೂಡಲಸಂಗಮ ಪುಣ್ಯಕ್ಷೇತ್ರಕ್ಕೆ ಹೋದರೇನೋ ! ಅಲ್ಲಿಯ ಪ್ರಶಾಂತ ಪುಣ್ಯಸ್ಥಳವನ್ನು ಕಂಡು, ಎಂತಹ ಘನಮಹಿಮ ಪವಾಡ ಪುರುಷನಾದ ಬಸವಣ್ಣನವರಿಗೂ ಸಾವು ತಪ್ಪಲಿಲ್ಲ, ಒಬ್ಬ ಸಾಮಾನ್ಯ ಮಾನವನ ಪಾಡೇನು ! ಎಂದು ಕಂಬನಿದುಂಬಿ ನುಡಿದರು, ಅವರ ಅಂತರಂಗಕ್ಕೆ ಆಗ ಏನೆನ್ನಿಸಿತ್ತೋ ಏನೊ, ಕೊನೆಯುಸಿರಿರುವವರೆಗೂ ಪವಾಡಪುರುಷ ಬಸವಣ್ಣನ ಮಹಿಮೆ ಕುರಿತು ಮಾತನಾಡುತ್ತಲೇ ಇದ್ದರು.

೧೯೭೪ ನೆಯ ಎಪ್ರಿಲ ೭, ಕನ್ನಡ ನಾಡಿನ ಜೀವನದಲ್ಲಿ ಕರಾಳ ದಿನ. ಭಾರಿ ಆಘಾತದ ಸುದ್ದಿಯನ್ನು ತಂತಿಗಳು ಹೊತ್ತು ತಂದವು: “ ಇಂಚಲರು ಹೋಗಿಬಿಟ್ಟರು !........” ಮೊದಮೊದಲು ಯಾರೂ ನಂಬಲಿಲ್ಲವಾದರೂ ಕೊನೆಗೆ ನಂಬಬೇಕಾಯಿತು. ಸುಮಾರು ೩-೪ ದಶಕಗಳ ಕಾಲ ಕನ್ನಡ ನಾಡಿನಲ್ಲಿ ಕಾವ್ಯಮಯ ಬಾಳನ್ನು ನಡೆಸಿದ ಉದಾತ್ತ ಕವಿ, ಜನಪ್ರಿಯ ಶಿಕ್ಷಕ, ಶ್ರೇಷ್ಠ ವಾಗ್ಮಿ, ಸ್ನೇಹ ಜೀವಿ ಇಂಚಲರು ಮರಳಿ ಬಾರದ ದಾರಿಗೆ ಹೋಗಿಬಿಟ್ಟಿದ್ದರು. ಅನೇಕ ಜೀವಿಗಳಿಗೆ ಜೀವಶಕ್ತಿಯನ್ನು ದಯಪಾಲಿಸಿದ ಸಂಜೀವಿನಿ ಶಕ್ತಿ ಅಂದು ವಿಶ್ವಲೀನವಾಗಿತ್ತು. ಇಂಚಲರ ಸಾವು ತುಂಬಿಬಾರದ ನಷ್ಟ. ಸಾವಿನಲ್ಲಿಯೂ ಘನತೆಯನ್ನು ಕಂಡ ಮಹಾನುಭಾವ ! ಶರಣರ ಪುಣ್ಯವನ್ನು ಮರಣದಲ್ಲಿ ಕಾಣು ಎಂಬುದರ ಪ್ರತ್ಯಕ್ಷ ದೃಷ್ಟಾಂತ !!

“ ಬಸ್ ಕೆಟ್ಟರ್ತಿ, ದುರಸ್ತ ಆಗೂತನಕ ಸಾಗಿಸೋದು, ದುರಸ್ತ ಆಗೋದಿಲ್ಲ ಅಂತ ತಿಳಿದಮೇಲೆ ಚೆಲ್ಲಿ ಬಿಡೋದು ” “ ಸಾಮಾನ್ಯ ಒಬ್ಬ ವ್ಯಕ್ತಿ ಹೋಗುವಾಗ ನಗತಿರಬೇಕು, ಸಮಾಜೆಲ್ಲಾ ಅಳತಿರಬೇಕು. ಆಗ ಜೀವನ ಸಾರ್ಥಕವಾಗತದ ”

ಇವು ನಿಧನದ ಹಿಂದಿನ ದಿನ ರಾತ್ರಿ, ಅನಿರೀಕ್ಷಿತವಾಗಿ ಆಡಿದ ಮಾತುಗಳು; ಈಗ ಸಾಂಕೇತಿಕವಾಗಿ ಕಾಣುತ್ತಿವೆ. ಆ ದಿನ ರಾತ್ರಿ ಹತ್ತು ಗಂಟೆಯ ವರೆಗೆ ಮನೆಯಲ್ಲಿ ಇಂಚಲರು ನಗುಮುಖದಿಂದ ಹರಟೆ ಕೊಚ್ಚಿದರು. ಎಲ್ಲರಿಗೂ ಆನಂದವೇ ಆನಂದ ! ಆದರೆ ಹನ್ನೊಂದು ಗಂಟೆಯ ಸುಮಾರಿಗೆ

ಅವರಿಗೆ ಅಸ್ಥಮಾ ತೊಂದರೆಯುಂಟಾಯಿತು. ತಾತ್ಪೂರ್ತಿಕ ಉಪಚಾರವೂ ನಡೆಯಿತು. ರಾತ್ರಿ ಚೆನ್ನಾಗಿ ನಿದ್ರಿಸಿದರು. ಮರುದಿನ ಮುಂಜಾವಿನ ಆರು ಗಂಟೆಗೆ ಎದ್ದು ಎಂದಿನಂತೆ ಹಾಡುತ್ತಲೇ ಪ್ರಾತರ್ವಿಧಿಗಳನ್ನು ಉಲ್ಲಾಸದಿಂದ ಮುಗಿಸಿದರು. ಚಹ ಸೇವಿಸಿದರು. ಮಕ್ಕಳು ಮೊಮ್ಮಕ್ಕಳೊಂದಿಗೆ ದಿನದ ರೂಢಿಯಂತೆ ಸ್ವಲ್ಪಕಾಲ ಹರಟೆ ಹೊಡೆದರು. ಅಷ್ಟರಲ್ಲಿ ವೃತ್ತಪತ್ರ ಬಂತು. ಕುರ್ಚಿಯ ಮೇಲೆ ಆಸೀನರಾಗಿ ಅದನ್ನು ಓದುತ್ತಿದ್ದಾಗಲೇ (ಮುಂ. ೮-೫ ಗಂಟೆ) ಅನಿರೀಕ್ಷಿತವಾಗಿ ಕುಸಿದರು. ಮಾತು ಮೌನವಾಯಿತು. ೮-೧೦ ಕೆ ಡಾಕ್ಟರರು ಆಗಮಿಸಿದರು. ಅಷ್ಟರಲ್ಲಿ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು.

. . . . ಬಸ್ಸು ದುರಸ್ತ ಆಗಲೇ ಇಲ್ಲ. ಅವರ ಸೌಭಾಗ್ಯವತಿಗೆ ಮುನ್ನಾ ದಿನ ಕುಂಕುಮ ಹಚ್ಚಿದಾಗ ಹೊಟ್ಟೆಯಲ್ಲಿ ಉರಿತ ಉಂಟಾಯಿತಂತೆ ! ಇದು ಪತಿದೇವನ ಕರಾಳ ಸಾವಿನ ಉರಿತದ ಮುನ್ಸೂಚನೆಯೋನೋ !! "ಇಂಚಲರೇ, ಒಂದು ಜೀವಮಾನಕ್ಕೆ ಹೋಲಿಸಿ ನೋಡಿದರೆ ನಿಮ್ಮ ಬರಹಗಳ ಮೊತ್ತ ಕಡಿಮೆಯೆನಿಸುತ್ತದೆ. ನೀವು ಮಾಡಬೇಕಾದ ಕಾರ್ಯ ಬಹಳಷ್ಟಿದೆ" ಎಂದು ನಾನು ಅಂದಾಗ– "ಅಹುದು, ಈ ಮಾತು ನಿಜ, ನಿವೃತ್ತಿಯ ನಂತರ ಮಾಡುತ್ತೇನೆ. ಕಾದಂಬರಿಗಳನ್ನು ಬರೆಯುವ ವಿಚಾರವಿದೆ." ಎಂದು ಅಂದಿದ್ದರು. ಆದರೆ ವೃತ್ತಿಜೀವನದಿಂದ ನಿವೃತ್ತಿ ಹೊಂದಿ ವಾರ ಕಳೆಯುವ ಮೊದಲೇ ಜೀವನದಿಂದಲೇ ನಿವೃತ್ತರಾದುದೊಂದು ವಿಧಿವಿಲಾಸ!!

# ಇಂಚಲರು ಕಂಡಂತೆ

ಪತ್ರ ಪ್ರಭೇದವು ಒಂದು ಭಾವನಾತ್ಮಕ ಗದ್ಯ ಕಾವ್ಯದ ಉತ್ಕೃಷ್ಟ ಪ್ರಕಾರ ವೆಂದೂ ಸರಳ ಸುಂದರ ಬರವಣಿಗೆಯೆಂದೂ ಹೇಳಬಹುದು. ಅತಿ ಗಂಭೀರ ವಾದ ವಿಷಯದಿಂದ ಹಿಡಿದು ನಿತ್ಯ ಜೀವನದ ತೀರ ಸಾಮಾನ್ಯ ವಿಷಯವನ್ನು ಪತ್ರರೂಪದಲ್ಲಿ ಕಾಣಬಹುದು. ನಾವು ನಮ್ಮ ಭಾವನೆಗಳನ್ನು ಸಮೀಪದವ ರೊಂದಿಗೆ ಮಾತಿನ ಮೂಲಕ ಅಭಿವ್ಯಕ್ತ ಗೊಳಿಸುವಂತೆ ದೂರದಲ್ಲಿರುವ ಪ್ರೀತಿಯ ಜೀವಿಗಳೊಂದಿಗೆ ಬರವಣಿಗೆಯ ಮೂಲಕ ವ್ಯಕ್ತಪಡಿಸಿ ಮಧುರ ಸಂಬಂಧವನ್ನು ಬೆಳೆಸುತ್ತೇವೆ. ಈ ಕಾರಣದಿಂದ ಮಾನವ ಜೀವನದಲ್ಲಿ ಪತ್ರ ಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಕವಿ ಸಾಹಿತಿಗಳ ಪತ್ರಗಳು 'ವ್ಯಕ್ತಿಯ ಆತ್ಮಕಥೆಯಾಗಿ, ಆತ್ಮನಿವೇದನೆಯಾಗಿ ಅಂತರಂಗವನ್ನು ತೆರೆದು ತೋರಿಸುವ ಕನ್ನಡಿ '[1] ಯಾಗಬಹುದು. ಸಾಮಾನ್ಯವಾಗಿ ಪತ್ರಗಳು ವೈಯಕ್ತಿಕ ವೆನಿಸಿದರೂ ಅವುಗಳಲ್ಲಿಯ ಗುಣವೈಶಿಷ್ಟ್ಯದಿಂದ ಸರ್ವರಿಗೂ ಪ್ರಿಯವೆನಿಸು ತ್ತವೆ. ಈ ದೃಷ್ಟಿಯಿಂದ ನೋಡಿದಾಗ ಶ್ರೀ. ಎಸ್. ಡಿ. ಇಂಚಲ ಅವರ ಪತ್ರ ಗಳು ಉಲ್ಲೇಖನೀಯವೆನಿಸಿವೆ. ತಮ್ಮ ಸಾಹಿತಿ ಮಿತ್ರರಿಗೆ, ಬಂಧುಬಳಗದವರಿಗೆ ಬರೆದ ಪತ್ರಗಳಲ್ಲಿ ಕೆಲವೊಂದನ್ನು ಇಲ್ಲಿ ಆಯ್ದು ಕೊಡುವ ಪ್ರಯತ್ನ ಮಾಡ ಲಾಗಿದೆ. ಇಂಚಲರ ಸಂಪರ್ಕದಲ್ಲಿ ಬಂದಿರುವ ಹಿರಿಕಿರಿಯ ಸಾಹಿತಿಗಳು ನೂರಾರು ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಪತ್ರಕ್ಕೆ ಸೂಕ್ತವಾದ ಉತ್ತರ ಬರೆ ಯುವದರಲ್ಲಿ ಅವರದು ಬೇಸರಿಯದ ಜೀವ! ಸರಳ ಸುಂದರ ಶೈಲಿ, ಆಕರ್ಷಕ ನಿರೂಪಣೆ—ಇಂಚಲರ ಪತ್ರಗಳ ವೈಶಿಷ್ಟ್ಯ.

ಇಂಚಲರು ತಮ್ಮ ಪ್ರಿಯ ಮಿತ್ರರಿಗೆ ಆಗಾಗ ಪತ್ರ ಬರೆದಿದ್ದಾರೆ. ಅವ ರಲ್ಲಿ ಶ್ರೀ. ಕೃಷ್ಣಮೂರ್ತಿ ಪುರಾಣಿಕರು ಒಬ್ಬರು. ಅವರಿಬ್ಬರ ನಡುವಿನ ಸ್ನೇಹ ಬಾಂಧವ್ಯ ಮೊದಲಿನಿಂದಲೂ ಬೆಳೆದು ಬಂದುದು. ತಮ್ಮ ಮಿತ್ರರು ಸಾಹಿತ್ಯ ಕ್ಷೇತ್ರದಲ್ಲಿ ಗೌರವವನ್ನು ಪಡೆದಾಗ ಅವರಿಗೆ ಪರಮ ಸಂತೋಷ,

---

1 ಶ್ರೀ ಸಿಂಪಿ ಲಿಂಗಣ್ಣ –ಜೀವತರಂಗ ಮುನ್ನುಡಿ

ಶ್ರೀ. ಕೃಷ್ಣಮೂರ್ತಿ ಪುರಾಣಿಕರ ಐವತ್ತನೆಯ ಕಾದಂಬರಿ " ಮೌನ ಗೌರಿ " ಯು ಪ್ರಕಟವಾಗಿ ಜನಮನ್ನಣೆ ಗಳಿಸಿದ ಸಂದರ್ಭದಲ್ಲಿ ಇಂಚಲರು ಪತ್ರ ಬರೆದು ತಮ್ಮ ಹರ್ಷವನ್ನು ಈರೀತಿ ಪ್ರಕಟಿಸಿದ್ದಾರೆ :

ಎಸ್. ಡಿ. ಇಂಚಲ ಓಂ ನಲ್ ಬೆಳಗಾವಿ

ು-೧೨-೧೯೬೪

ಆತ್ಮೀಯ ಮಿತ್ರರಾದ ಶ್ರೀ. ಕೃಷ್ಣಮೂರ್ತಿ ಅವರಿಗೆ,

ಸಪ್ರೇಮ ವಂದನೆಗಳು.

ತಮ್ಮ ಐವತ್ತನೆಯ ಕಾದಂಬರಿ " ಮೌನಗೌರಿ " ಯು ಪ್ರಕಟನಾ ಸಮಾರಂಭವು ಬೆಂಗಳೂರಿನಲ್ಲಿ ಸಾಹಿತ್ಯ ಪರಿಷತ್ತಿನಲ್ಲಿ ಕ. ಸಾ. ಪ. ನ ಅಧ್ಯಕ್ಷರಾದ ಶ್ರೀ ಜಿ. ವೆಂಕಟಸುಬ್ಬಯ್ಯನವರ ಘನ ಅಧ್ಯಕ್ಷತೆಯಲ್ಲಿ ಸಾಂಗ ವಾದ ಸಂಗತಿಯನ್ನು ತಿಳಿದು ಅತ್ಯಂತ ಆನಂದವಾಗಿದೆ. ಈ ಬಗೆಗೆ ಅತೀವ ಹೆಮ್ಮೆಯೂ ಅನ್ನಿಸುತ್ತದೆ. ತಮ್ಮ ೫೦ ನೆಯ ಕೃತಿಕುವರಿ " ಮೌನಗೌರಿ " ರಸಿಕ ಕನ್ನಡಿಗರ ಮನೋಮಂದಿರದಲ್ಲಿ ಕುಂದದ ಪ್ರಭೆಯಿಂದ ಬೆಳಗಿ ತಮಗೆ ಅಪೂರ್ವವಾದ ಗೌರವವನ್ನು ತರುವಲ್ಲಿ ಸಂದೇಹವಿಲ್ಲ. ಕನ್ನಡ ನುಡಿದಾಯಿಯ ವರಪ್ರಸಾದಕ್ಕೆ ಪಾತ್ರರಾದ ತಮ್ಮ ಹೃದಯ ನವರಸದೊರತೆಯಾಗಿದೆ. ಅದ ರಿಂದ ಇನ್ನೂ ಅನೇಕಾನೇಕ ಕೃತಿರತ್ನಗಳು ಹೊರಬಂದು ಕನ್ನಡಿಗರ ಹೃದಯ ಕಾಸಾರವನ್ನು ತುಳುಕಿಸಲೆಂದು ಮನವಾರೆ ಹಾರೈಸುತ್ತೇನೆ. ತಮ್ಮ ನುರಿತ ಲೇಖ ನಿಯಿಂದ ಇನ್ನೂ ಹಲವಾರು ಮೇರು ಕೃತಿಗಳು ಮೈದಾಳಿ ಕರ್ನಾಟಕದ ಸಾರ ಸ್ವತ ಪ್ರಪಂಚದಲ್ಲಿ ಚಿರಂತನವಾದ ತಾರಾಮಣಿಗಳಾಗಿ ಬೆಳಗಲೆಂದು ಬಯ ಸುವೆ. ಈ ಕಾರ್ಯಕ್ಕೆ ಅವಶ್ಯಕವಾದ ಸ್ಫೂರ್ತಿ, ಕೀರ್ತಿಗಳನ್ನೂ ಆಯುರಾ ರೋಗ್ಯಗಳನ್ನೂ ದೇವರು ತಮಗೆ ದಯಪಾಲಿಸಲೆಂದು ಪ್ರಾರ್ಥಿಸುವೆ. ಈ ಸಂದರ್ಭದಲ್ಲಿ ನನ್ನ ಅನಂತ ಅಭಿನಂದನೆಗಳನ್ನು ಸ್ವೀಕರಿಸಬೇಕಾಗಿ ಕೋರುವೆ.

ಇತಿ ವಂದನೆಗಳು ತಮ್ಮ,

ಎಸ್. ಡಿ. ಇಂಚಲ

ಸಾಹಿತ್ಯ ಕ್ಷೇತ್ರದಲ್ಲಿ ಅಮೌಲ್ಯ ಸೇವೆ ಸಲ್ಲಿಸಿದ ಹಿರಿಯ ಸಾಹಿತಿಗಳಿಗೆ ಸಾಹಿತ್ಯ ಅಕ್ಯಾಡೆಮಿಯುವರು ಪ್ರಶಸ್ತಿ ನೀಡಿ ಗೌರವಿಸುವದು ನಡೆದುಬಂದ ಕ್ರಮ. ೧೯೭೩ ರಲ್ಲಿ ಶ್ರೀ. ಕೃಷ್ಣಮೂರ್ತಿ ಪುರಾಣಿಕರಿಗೆ ರಾಜ್ಯ ಸಾಹಿತ್ಯ ಅಕ್ಯಾಡೆಮಿಯು ಪ್ರಶಸ್ತಿಯನ್ನು ನೀಡಿ ಗೌರವಿಸಿತು. ತಮ್ಮ ಮಿತ್ರರ ಸಾಹಿತ್ಯ ಸೇವೆ ನಾಡಿನ ಇತಿಹಾಸದಲ್ಲಿ ಹಸುರಾಗಿ ಕುಸುರಾಗಿ ಉಳಿದು ಬೆಳಗಲೆಂದು ಇಂಚಲರು ಅಭಿಮಾನ ತುಂಬಿ ಹೇಳಿದ್ದಾರೆ.

ಓಂ ನಲ್ ಬೆಳಗಾವಿ

೧೪-೧೧-೧೯೭೩

ಸನ್ಮಾನ್ಯ ಶ್ರೀ. ಕೃಷ್ಣಮೂರ್ತಿ ಅವರಿಗೆ,

ಸಪ್ರೇಮ ವಂದನೆಗಳು.

ಕರ್ನಾಟಕ ರಾಜ್ಯ ಸಾಹಿತ್ಯ ಅಕ್ಯಾಡಮಿಯುವರು ತಮಗೂ ಇನ್ನುಳಿದ ನಾಲ್ವರು ಸುಪ್ರಸಿದ್ಧ ಸಾಹಿತಿಗಳಿಗೂ ಕೂಡಿ ಪ್ರಶಸ್ತಿಯನ್ನು ನೀಡಿ ಗೌರವಿಸಿದ ವಿಷಯವನ್ನು ವೃತ್ತಪತ್ರಗಳಲ್ಲಿ ಓದಿ ತುಂಬಾ ಅಭಿಮಾನವೂ ಸಂತೋಷವೂ ಅನಿಸುತ್ತದೆ. ಕಾವ್ಯ, ಕತೆ, ನಾಟಕ, ಪ್ರಬಂಧ ಹಾಗೂ ಕಾದಂಬರಿ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಪ್ರತಿಭಾಪೂರ್ಣವಾದ ಸತ್ಕೃತಿಗಳನ್ನು ನೀಡಿ ಕನ್ನಡ ಸಾರಸ್ವತ ಪ್ರಪಂಚದಲ್ಲಿ ನಾಡೋಜರಾಗಿ ವಿರಾಜಿಸುತ್ತಿರುವ ತಮಗೆ ಈ ಸಲ ಈ ಗೌರವವನ್ನು ನೀಡಿದ್ದಕ್ಕಾಗಿ ತಮ್ಮನ್ನು ಈ ಶುಭ ಗಳಿಗೆಯಲ್ಲಿ ತುಂಬು ಹೃದಯದಿಂದ ಅನಂತವಾದ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮೊದಲೇ ಸಿಗಬೇಕಾಗಿದ್ದ ಇಂತಹ ಪುರಸ್ಕಾರ ಈಗಲಾದರೂ ಸಿಕ್ಕಿತಲ್ಲಾ ಎಂಬ ಸಂತೋಷವಾಗಿದೆ. ಈ ಪ್ರಶಸ್ತಿಯಿಂದ ತಮಗೆ ಗೌರವಸಿಕ್ಕಿತೆನ್ನುವುದಕ್ಕಿಂತ ಈ ಪ್ರಶಸ್ತಿಗೇ ತಮ್ಮಿಂದ ಹೆಚ್ಚಿನ ಸ್ಥಾನಮಾನ ದೊರಕಿದುವೆಂದು ಹೇಳಿದರೆ ಅದು ಹೆಚ್ಚು ಸಮಂಜಸವಾಗುವದು. ಏನೇ ಇರಲಿ, ಈ ಮಂಗಲ ಸಮಯದಲ್ಲಿ ನನ್ನ ಹಾರ್ದಿಕ ಅಭಿನಂದನೆಗಳನ್ನು ಸ್ವೀಕರಿಸಬೇಕಾಗಿ ವಿನಂತಿ.

ತಮ್ಮ,
ಎಸ್. ಡಿ. ಇಂಚಲ

ತರುಣ ಬರಹಗಾರರೆಂದರೆ ಇಂಚಲರಿಗೆ ತುಂಬಾ ಮೆಚ್ಚು. ಅವರಲ್ಲಿ ಧೈರ್ಯವನ್ನೂ, ನೈತಿಕ ಬಲವನ್ನೂ, ಮನಸ್ಸಿನ ಪ್ರಸನ್ನತೆಯನ್ನೂ ತುಂಬುತ್ತಿದ್ದರು. ಅವರು ನೀಡಿದ ಸ್ಫೂರ್ತಿಯಿಂದ ಅದೆಷ್ಟೋ ಕವಿಗಳು ಇಂದು ಬೆಳಕಿಗೆ ಬಂದಿದ್ದಾರೆ. ಇಂಚಲರಿಲ್ಲದಿದ್ದರೆ ಈ ಕವಿಗಳ ಪ್ರತಿಭೆ ಬೂದಿ ಮುಚ್ಚಿದ ಕೆಂಡದಂತೆ, ಎಲೆಯು ಮರೆಯ ಹೂವಿನಂತೆ ಅಗೋಚರವಾಗಿಯೇ ಉಳಿಯಬಹುದಾಗಿತ್ತು. ತಮ್ಮನ್ನು ಕಾಣಲು ಬಂದವರನ್ನು ಪ್ರೀತಿ ಅಂತಃಕರಣದಿಂದ ಬರಮಾಡಿಕೊಂಡು ಹೃದಯದ ಒಲುಮೆಯೊಂದಿಗೆ ಪ್ರೋತ್ಸಾಹ ನೀಡುತ್ತಿದ್ದರು. ತಿದ್ದಿ ತೀಡಿ ಬರಹಗಳಿಗೆ ಒಂದು ರೂಪವನ್ನು ಕೊಡುತ್ತಿದ್ದರು. ಪತ್ರ ಬರೆದವರಿಗೆ ಕೂಡಲೆ ಉತ್ತರ ಬರೆದು ಮಾರ್ಗದರ್ಶನ ನೀಡುತ್ತಿದ್ದರು. ಅವರ ಔದಾರ್ಯದ ನೀರುಂಡು ಬೆಳೆದ ಪುಷ್ಪಗಳಿಂದು ನಾಡಿನಲ್ಲಿ ಸುವಾಸನೆಯನ್ನು ಬೀರುತ್ತಿರುವದು ಸರ್ವವಿದಿತ. ಸಾಹಿತ್ಯ ಹಾಗೂ ವಿಮರ್ಶೆಗಳ ಬಗ್ಗೆ ತರುಣ ಬರಹಗಾರರೊಬ್ಬರು ಕೇಳಿದ ಕೆಲವು ಪ್ರಶ್ನೆಗಳನ್ನು ಕುರಿತು ನಿಸ್ಸಂದಿಗ್ಧವಾದ ರೀತಿಯಲ್ಲಿ ಅವರಿಗೆ ಉತ್ತರ ಕೊಟ್ಟ ಉದಾಹರಣೆ ಇಲ್ಲಿದೆ :

ಓಂ ನಲ್ ಬೆಳಗಾವಿ

೧೩-೮-೧೯೬೭

ಅಕ್ಕರೆಯ ಸಣ್ಣಕ್ಕಿಯವರಿಗೆ

ಒಲವುಗಳು

" ಸಾಹಿತಿಯ ಹೃದಯವೆಂದರೆ ಅದೊಂದು ರಸದೊರತೆ. ಆ ಒರತೆಯಿಂದ ಅದೆಷ್ಟು ಸಲ ನೀರನ್ನು ಕುಡಿದರೂ ಅದು ಹಾಗೇ ತುಂಬಿ ಹರಿಯುತ್ತಿರುತ್ತದೆ, ಕಲಕು ನೀರನ್ನು ಹೊರಕ್ಕೆ ತೆಗೆದು ತುಸು ಹೊತ್ತು ಕಾಯ್ದು ನಿಂತರೆ ಅದು ತಿಳಿನೀರಿನಿಂದ ತುಳುಕಿ ಹರಿಯುತ್ತದೆ. ಅಂತೆಯೇ ಕೆಲಕಾಲ ವಿಚಾರಗಳ ಮಂಥನ ಸಾಹಿತಿಯ ಹೃದಯದಲ್ಲಿ ನಡೆದಿರುವಾಗ ಸಾಹಿತ್ಯ ಕೃತಿ ನಿರ್ಮಿತಿಗೆ ತುಸು ವಿಲಂಬವಾಗುವದೂ ಉಂಟು. ಅದಕ್ಕೆ ಹೆದರಬೇಕಿಲ್ಲ. ತಾಳ್ಮೆಯಿಂದ ರಸಾನುಭವ ಪಡೆಯುತ್ತಿರಬೇಕು. ಇಂಥ ಬರೆಯುವ ಹವ್ಯಾಸವನ್ನು ನೀವೂ ಬೆಳೆಯಿಸಿಕೊಳ್ಳುವಿರೆಂದು ಆಶಿಸುವೆ... ಕಾವ್ಯವು ಕವಿಯದಾದರೂ, ಅದು ಸಮಾಜದ ಸೊತ್ತು. ಆದರಿಂದ ಸಮಾಜದ ಉತ್ಕರ್ಷಕ್ಕೆ ಕೊಂಚಮಟ್ಟಿಗಾದರೂ

ಸಹಾಯಕವಾದರೆ, ಕವಿಯ ಜೀವನ ಧನ್ಯವೆನಿಸುತ್ತದೆ, ಕವಿ ಹಾಗೂ ಜನತೆಯ ಸೂಕ್ಷ್ಮ ಸಂಬಂಧವನ್ನು ಕಲ್ಪಿಸುವ ಕಾರ್ಯವನ್ನು ವಿಮರ್ಶಕನೂ, ಗಮಕಿಯೂ ಮಾಡಬಲ್ಲರು.) ಆದ್ದರಿಂದ ವಿಮರ್ಶಕನು ಕವಿಯ ಹೃದಯಕ್ಕೂ ಜನತೆಯ ಹೃದಯಕ್ಕೂ ಮಧುರವಾದ ಸಂಬಂಧವನ್ನು ಕಲ್ಪಿಸುವ ಸುವರ್ಣ ತಂತಿಯಿದ್ದಂತೆ.) ಈ ಸುವರ್ಣತಂತಿಯಾಗುವ ಭಾಗ್ಯ ನಿಮಗೊದಗಿ ಬರಲೆಂದು ಬಲವಾಗಿ ಆಶಿಸುವೆ. ಈ ಕಾರ್ಯದಲ್ಲಿ ನನ್ನ ಸಲಹೆ ಬೇಕಿದ್ದರೆ ಅದನ್ನು ನೀಡಲು ನಾನು ಸದಾ ಸಿದ್ಧ. ಅದನ್ನು ಪಡೆಯುವ ಹಕ್ಕು ನಿಮಗಿದೆ ಎಂದು ಹೇಳುವ ಅವಶ್ಯಕತೆಯಿಲ್ಲ ..."

ಇತಿ ನಿಮ್ಮ ಆತ್ಮೀಯ,
ಎಸ್. ಡಿ. ಇಂಚಲ

ತಮಗೆ ಅನಿಸಿದ್ದನ್ನು ಯಾವ ದಾಕ್ಷಿಣ್ಯವೂ ಇಲ್ಲದೆ ಎತ್ತಿತೋರಿಸುವದು ಅವರಲ್ಲಿ ರಕ್ತಗತವಾಗಿ ಬೆಳೆದುಬಂದಿದೆ. ಗುಣದೋಷಗಳ ವಿಮರ್ಶೆ ಮಾಡಿ ಬೆಳೆಯುವ ಜೀವಕ್ಕೆ ಪೋಷಕವಾದ ಆಹಾರವನ್ನು ಒದಗಿಸುತ್ತಿದ್ದರು. ಗುಣವನ್ನು ಬಹುವಾಗಿ ಮೆಚ್ಚಿಕೊಳ್ಳುವ ಪ್ರವೃತ್ತಿ ಅವರದಾಗಿತ್ತು. ದೋಷಗಳನ್ನು ನಿಸ್ಸಂಕೋಚವಾಗಿ ಬಯಲಿಗೆಳೆಯುತ್ತಿದ್ದರು. ಪ್ರಕೃತ ಲೇಖಕನಿಗೆ ಬರೆದ ಅನೇಕ ಪತ್ರಗಳಲ್ಲಿ ಚರ್ಚೆ ಮಾಡಿದ ಸಾಹಿತ್ಯ ಸಂಗತಿಗಳಲ್ಲಿ ಕೆಲವನ್ನು ಇಂಚಲರ ಅಭಿಪ್ರಾಯನಿರೂಪಣಾ ವೈಖರಿಯ ದೃಷ್ಟಿಯಿಂದ ತೋರಿಸಲಾಗಿದೆ. ಈ ಲೇಖಕನು ಬರೆದ 'ಧ್ಯೇಯವಾದಿ' ಕವನ ಸಂಗ್ರಹದ ಬಿಡುಗಡೆಯ ಸುದ್ದಿ ಕೇಳಿ ಬರೆದ ಕಾಗದ ಇಂತಿದೆ :

"ಪ್ರೀತಿಯ ಬಾಳೇಶ ಲಕ್ಷೆಟ್ಟಿ ಇವರಿಗೆ ಬೆಳಗಾವಿ
ಅನೇಕ ಒಲವುಗಳು. ೫-೪-೧೯೬೦

. . . . . ಧ್ಯೇಯವಾದಿಯ ಒಳಹೊರಗುಗಳ ಮೆರಗನ್ನು ನೋಡಿ ಸಂತೋಷವಾಯಿತು. ಅದರ ಪ್ರಕಾಶನ ಸಮಾರಂಭವೂ ಬಲುಸೊಗಸಾಗಿ ಸಾಗಿತೆಂದು ಕೇಳಿದೆ. ಅದಕ್ಕೆ ನಿಮ್ಮ ಜನಪ್ರಿಯತೆಯೇ ಮೂಲ ಕಾರಣ. ಧ್ಯೇಯವಾದಿಯ ಮುದ್ರಣ ತೃಪ್ತಿಕರವಾಗಿದೆ. ಅಲ್ಲಲ್ಲಿ ಅಚ್ಚಿನ ದೋಷಗಳು

ಉಳಿದುಕೊಂಡಿವೆ. ಮುನ್ನುಡಿಯಲ್ಲಿಯೂ ಹಾಗೆಯೇ. ಇನ್ನೂ ಹೆಚ್ಚಿನ ದಕ್ಷತೆ ವಹಿಸಬೇಕಿತ್ತು. ಒಟ್ಟಾರೆ ಕವನಸಂಗ್ರಹ ಸಣ್ಣದಾಗಿದ್ದರೂ ಸುಂದರ ವಾಗಿದೆಯೆಂದು ಹೇಳಬಹುದು. . . . . . ಓದುಗರ ಕೈಸೇರಿದ ನಂತರ ವಿಮರ್ಶಕರ ಅಭಿಪ್ರಾಯವನ್ನು ನಿರೀಕ್ಷಿಸಬಹುದು. ಸಹೃದಯರಾದ ಕನ್ನಡ ರಸಿಕರು ಧ್ಯೇಯವಾದಿಯನ್ನು ಸಹಾನುಭೂತಿಯಿಂದ ಕಾಣುವರೆಂಬ ಭರಸವಸೆ ಯಿದೆ . . . . ''

೧೯೬೦ ಹಾಗೂ ೧೯೬೧—ಈ ಎರಡು ವರುಷಗಳು ಇಂಚಲರ ಜೀವನ ದಲ್ಲಿ ಕಷ್ಟದ ವರ್ಷಗಳು. ಸಂಸಾರದ ಕಷ್ಟನಿಷ್ಠುರಗಳ ಝಳದಲ್ಲಿ ಬೆಂದು ಹೋದರೆಂದು ಕಾಣುತ್ತದೆ. ೧೯೬೦ ನೆಯ ಅಕ್ಟೋಬರ ೧೭ ರಂದು ಅವರ ಹಿರಿಯ ಮಗಳು ಶಾಂತಾ ದೀರ್ಘ ಕಾಯಿಲೆಯನ್ನು ಅನುಭವಿಸಿ ತೀರಿ ಕೊಂಡಳು. ೧೯೬೧ ನೆಯ ಎಪ್ರಿಲದಲ್ಲಿ ತಂದೆ ದೇವಪ್ಪನವರು ಇಹಲೋಕ ಯಾತ್ರೆ ಮುಗಿಸಿದರು. ಮರಣಶಯ್ಯೆಯಲ್ಲಿ ಮಲಗಿದ ತಂದೆ-ಮಗಳ ಸೇವೆ ಯನ್ನು ಅಪ್ರತಿಮ ರೀತಿಯಲ್ಲಿ ಇಂಚಲರು ಮಾಡಿದರು. ಮಾನವೀಯ ಸೇವೆಯಲ್ಲಿ ತೊಡಗಿದಾಗ, ಪತ್ರ ಬರೆದವರಿಗೆ ಉತ್ತರ ಬರೆಯಲು ಆಗಲಿಲ್ಲ ವಲ್ಲ ಎಂದು ಕೊರಗಿದ್ದಾರೆ :

೫-೯-೧೯೬೦

" . . . . . ಸಂಸಾರದ ಈ ಕಷ್ಟನಿಷ್ಠುರಗಳ ಝಳದಲ್ಲಿ ಬೆಂದು ಹೇಗೋ ಬಾಳಿ ಬರುತ್ತಿರುವ ನನಗೆ ಕೂಡಲೇ ಬರೆಯಲಿಕ್ಕೆ ಆಗಲಿಲ್ಲ. ಬರೆ ಯೋಣವೆಂದು ಕೆಲದಿನಗಳು ಉರುಳಿದಾಗ ನನ್ನ ಸ್ಮರಣೆಯಿಂದ ಆ ವಿಷ ಯವೇ ಜಾರಿ ಹೋಯಿತು. ನಿನ್ನೆ ಬರೆದ ನಿಮ್ಮ ಪತ್ರ ಬಂದಾಗಲೇ ಅದರ ವಿಚಾರ ನನಗೆ ಬಂದುದು. ನಿಮ್ಮ ಪತ್ರಕ್ಕೆ ಉತ್ತರ ಬರೆಯದೆ ನಿಮಗೆ ವಿಷಾದಕ್ಕೆ ಎಡೆಯಾಯಿತಲ್ಲಾ ಎಂದು ನೊಂದುಕೊಂಡಿದ್ದೇನೆ. ಅದಕ್ಕೆ ಉಪೇಕ್ಷೆಯೆಂದು ಸರ್ವಥಾ ಭಾವಿಸಬಾರದು. ಇನ್ನೂವರೆಗೆ ಮನೆಯಲ್ಲಿ ನನ್ನ ಹಿರಿಯ ಮಗಳು ಶಾಂತಾ ಹಾಸಿಗೆಯಲ್ಲಿಯೇ ಇದ್ದಾಳೆ. ಉಪಾಯವಿಲ್ಲ. ನನ್ನ ಕರ್ತವ್ಯಗಳೆಲ್ಲವೂ ಕೇವಲ ಯಾಂತ್ರಿಕವಾಗಿ ಸಾಗಿವೆಯೆಂದರೆ ಅತಿಶ ಯೋಕ್ತಿಯಲ್ಲ . . . . "

ಸಂಸಾರಿಕ ಜೀವನದ ಕಷ್ಟಗಳಲ್ಲಿ ಬೆಂದು ಬಳಲುತ್ತಿದ್ದರೂ ತಮ್ಮ ಸ್ನೇಹಿತರನ್ನು ಅವರು ಎಂದಿಗೂ ನಿರಾಶೆಗೊಳಿಸುತ್ತಿರಲಿಲ್ಲ. ಕರ್ತವ್ಯಭಾವನೆಯನ್ನು ಪ್ರಕಟಿಸುತ್ತಿದ್ದರು. ಇಲ್ಲಿ ಅವರ ಜೀವನದೃಷ್ಟಿ ವ್ಯಕ್ತವಾಗುತ್ತದೆ.

೩-೪-೧೯೬೧

" . . . . ನಿಮ್ಮ ಪುಸ್ತಕ ಪ್ರಕಟನೆಯ ಆಮಂತ್ರಣ ಬಂದಿತ್ತು. ಆದರೆ ಕಾರ್ಯಬಾಹುಳ್ಯದಲ್ಲಿ ಪತ್ರ ಬರೆಯಲು ಮರೆತುಹೋಯಿತು. ಇತ್ತೀಚೆಗೆ ಕಾರ್ಯನಿರ್ಭರತೆಯ ಜೊತೆಗೆ ಅನೇಕ ಕೌಟುಂಬಿಕ ತೊಂದರೆಗಳು ಒಂದರ ಹಿಂದೊಂದು ದಾಳಿ ಮಾಡತೊಡಗಿವೆ. ಅವುಗಳನ್ನು ಎದುರಿಸುವ ಭರದಲ್ಲಿ ಮನಸ್ಸಿಗೆ ನೆಮ್ಮದಿ ಇಲ್ಲದಾಗಿದೆ. ಸಾವಿನ ಹಾಸಿಗೆಯಲ್ಲಿ ಮಲಗಿದ ತಂದೆಯವರನ್ನು ಉಪಚರಿಸುವದರಲ್ಲಿಯೇ ಮನವು ಮಗ್ನವಾಗಿದ್ದುದರಿಂದ ಬೇರೆ ಕಾರ್ಯಗಳಲ್ಲಿ ತೊಡಗೊಡುವಲ್ಲಿ ಮರೆವು ಆವರಿಸಹತ್ತಿದೆ. ಹೃದಯವನ್ನು ಹಣ್ಣಾಗಿಸುವ ಸನ್ನಿವೇಶಗಳುಂಟಾದ್ದರಿಂದ ಜೀವನದ ಕರಾಳ ಮುಖದ ದರ್ಶನವಾಗುತ್ತಿದೆ. 'ಅಬ್ಬಾ ! ಎಷ್ಟು ತೊಡಕಾಗಿದೆ ಈ ಬಾಳು' ಎನ್ನಿಸುತ್ತಿದೆ. ಅದನ್ನು ಎದುರಿಸಿ ನೂರು ವರುಷಗಳನ್ನು ಉರುಳಿಸುವದರಲ್ಲಿಯೇ ಜೀವನದ ಸೊಗಸಿದೆ ಎಂಬ ಅರಿವು ಪರೆದೆರೆಯುತ್ತಿದೆ. . . . "

ತಮ್ಮ ಸ್ನೇಹಿತರ ಜೀವನದಲ್ಲಿ ಕಷ್ಟನಷ್ಟಗಳಿಂದ ಅಪಾರ ದುಃಖವೊದಗಿದಾಗ ಅದನ್ನು ಸಹಿಸುವ ಮಾನಸಿಕ ಶಕ್ತಿಯನ್ನು ಅವರಿಗೆ ದಯಪಾಲಿಸುವಂತೆ ದೇವರಲ್ಲಿ ಅವರು ಪ್ರಾರ್ಥಿಸುತ್ತಿದ್ದರು, ಸಮಯೋಚಿತವಾಗಿ ಸಾಂತ್ವನ ಸಲ್ಲಿಸಿ ಮಾರ್ಗದರ್ಶನ ಮಾಡುತ್ತಿದ್ದರು. ನಮ್ಮ ತಂದೆಯವರು ತೀರಿಕೊಂಡಾಗ ಇಂಚಲರು ಈ ರೀತಿ ಸಾಂತ್ವನ ನೀಡಿ ನೊಂದ ಹೃದಯವನ್ನು ಹಗುರಗೊಳಿಸಿದರು.

೨-೧೧-೧೯೬೧

" . . . . ಆದರೂ ಸೃಷ್ಟಿಯ ನಿಯಮದಂತೆ ಇಂಥ ಪ್ರಸಂಗಗಳು ಅನಿವಾರ್ಯ ಹಾಗೂ ಅಪರಿಹಾರ್ಯಗಳಾಗಿವೆ, ಮಾನವ ಜೀವನಕ್ಕೆ. ಇಂಥ ಸನ್ನಿವೇಶಗಳನ್ನು ಮನೋಧೈರ್ಯದಿಂದ ವಿವೇಕದಿಂದ ಮಾನವನು ಸಹಿಸಿ

ಈ ದುಃಖಾಂಬುಧಿಯನ್ನು ಈಸಿ ಪಾರಾಗಬೇಕು. ಅದರಲ್ಲಿಯೇ ಜೀವನದ ಅಂತಿಮ ರಹಸ್ಯವಡಗಿದೆ. ಆದುದರಿಂದ ನೀವು ಈ ಪ್ರಸಂಗದಲ್ಲಿ ತುಂಬಾ ತಾಳ್ಮೆಯಿಂದ ಬಾಳಿನ ನೌಕೆಯನ್ನು ಸಾಗಿಸಬೇಕೆಂದು ಹೇಳಬೇಕಾಗಿದೆ. ಪೂರ್ವ ಕೃತ ಕರ್ಮದ ಪರಿಣಾಮವಾಗಿ ಈ ಬಾಳಿನಲ್ಲಿ ಋಣಸಂಬಂಧಗಳು ಕೂಡಿ ಒಂದಿರುತ್ತವೆಂದು ಹೇಳುತ್ತಾರೆ. ಆದುದರಿಂದ ಇರುವತನಕ ಬಾಳಿನ ಬವಣೆ ಗಳನ್ನು ಸಹಿಸುವಲ್ಲಿಯೇ ಜೀವನದ ಯಶಸ್ಸು ಅಡಗಿದೆ. . . , . . "

ತರುಣ ಮಿತ್ರರ ಕಾರ್ಯಕ್ರಮಗಳನ್ನು ಕೇಳಿ ಆನಂದಿಸುವದು ಅವರ ಔದಾರ್ಯ. ೨೭-೧-೧೯೭೧ ರಂದು ಇಂಚಲರು ಮುಂಬಯಿಗೆ ಪ್ರಯಾಣ ಬೆಳೆಸುವವರಿದ್ದರು. ೨೬ ರಂದು ಈ ರೀತಿಯಾಗಿ ಪತ್ರ ಬರೆಯುತ್ತಾರೆ :

" . . . . ಧಾರವಾಡ ಬಾನುಲಿಯಲ್ಲಿ ನಿಮ್ಮ ಭಾವಗೀತ ಪ್ರಸಾರ ವಾಗುವದೆಂಬ ಸಂಗತಿ ನನಗೆ ಸಂತೋಷವನ್ನು ನೀಡಿತು. ಸಾಧ್ಯವಾದರೆ ಅದನ್ನು ಮುಂಬಯಿಯಲ್ಲಿ ಕೇಳಲು ಯತ್ನಿಸುವೆ . . . . "

ಮುಂಬಯಿಯ ಆರ್ದ್ರಮಿಶ್ರಿತವಾದ ಶೀತವಾತಾವರಣದ ಪರಿಣಾಮ ದಿಂದ ಅಸ್ತಮಾ ಜಾಗೃತವಾಗಿ ಅವರಿಗೆ ತುಸು ತೊಂದರೆ ನೀಡಿತು. ಮುಂಬಯಿ ಯಿಂದ ಬೆಳಗಾವಿಗೆ ಮರಳಿ ಬಂದನಂತರ ಹೀಗೆ ಬರೆಯುತ್ತಾರೆ :

೧೦-೨-೭೧

" . . . . ಸ್ನೇಹವೇ ಸಂಜೀವಿನಿಯೆಂದು ನಂಬಿದ ನನಗೆ ನಿಮ್ಮೊಲ ವಿನ ಕರುಳಿನ ನುಡಿಗಳು ಹೊಸ ಚೈತನ್ಯವನ್ನು ನೀಡಿದವೆಂದು ಹೇಳಿದರೆ ಅತಿಶ ಯೋಕ್ತಿಯಲ್ಲ. ಇಂಥ ಸಹೃದಯ ಸ್ನೇಹಿತರ ಬಳಗವನ್ನು ಹೊಂದಿದ ನನ್ನ ಜೀವನ ಸಾರ್ಥಕವೆಂದು ಹೇಳಬಯಸುವೆ . . . . "

೧೯೭೧ ರ ಫೆಬ್ರುವರಿಯಲ್ಲಿ ಬೆಳಗಾವಿ ಜಿಲ್ಲೆಯ ಲೇಖಕರ ಸಂಘವನ್ನು ಸ್ಥಾಪಿಸಿಕೊಂಡು ಆ ಮೂಲಕ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯದ ಕಾರ್ಯವನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಗೆಳೆಯರು ಕೂಡಿ ಯೋಚಿಸಿ

ಯೋಜನೆ ಹಾಕಿಕೊಂಡು ಇಂಚಲರಿಗೆ ತಿಳಿಸಿದೆವು. ಯೋಜನೆಯನ್ನು ಅವರು ಹಾರ್ದಿಕವಾಗಿ ಸ್ವಾಗತಿಸಿ ಈ ರೀತಿ ಬರೆದಿದ್ದಾರೆ :

೨೫-೨-೧೯೭೧

" . . . . ಶ್ರೀ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಈ ಕಾರ್ಯ ಅತ್ಯಂತ ಉತ್ಸಾಹಪೂರ್ವಕ ಮುನ್ನಡೆಯಲೆಂದು ಹಾರೈಸುತ್ತೇನೆ. ಈ ಸಾಹಿತ್ಯ ಸೇವೆಯ ಪವಿತ್ರ ರಂಗದಲ್ಲಿ ಆತ್ಮೀಯರಾದ ನೀವೆಲ್ಲರೂ ನನಗೆ ಯಾವ ಪಾತ್ರ ವನ್ನು ಕೊಟ್ಟರೂ ಅದನ್ನು ಅತ್ಯಾಸಕ್ತಿಯಿಂದ ನೆರವೇರಿಸುವೆನೆಂದು ಸಂತೋಷ ದಿಂದ ಹೇಳಬಯಸುವೆ. ಈ ಉತ್ಸಾಹ, ಈ ಆಸಕ್ತಿ, ಈ ಸಂಘಟನಾಶಕ್ತಿ ಎಲ್ಲವೂ ದಿನೇ ದಿನೇ ಹೆಚ್ಚಿ ಒಂದು ಒಳ್ಳೆಯ ವಿಧಾಯಕ ಕಾರ್ಯ ಪ್ರಾರಂಭ ವಾಗಲೆಂದು ತುಂಬಾ ಆಶಿಸುತ್ತೇನೆ."

ಕನ್ನಡದ ಕೆಲಸವೆಂದರೆ ಇಂಚಲರಿಗೆ ಪಂಚಪ್ರಾಣ, ಅದು ವಿಧಾಯಕ ರೂಪ ತಾಳಿ ಸುವ್ಯವಸ್ಥಿತ ರೀತಿಯಲ್ಲಿ ಮುಂದುವರೆಯಬೇಕೆಂದು ಅವರು ಸದಾವಕಾಲ ಬಯಸುತ್ತಿದ್ದರು. ಕಾರ್ಯದಲ್ಲಿ ಮೇಲುಕೀಳು ಎಂಬ ಭಾವನೆ ಅವರ ಮನಸ್ಸಿನಲ್ಲಿ ಎಂದೆಂದಿಗೂ ಸುಳಿಯಲಿಲ್ಲ. ಕೊಟ್ಟ ಕಾರ್ಯವನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಮಾಡಿದರು. ಅಲ್ಲದೆ ಇತರರಿಂದಲೂ ಹಾಗೆಯೇ ಬಯಸಿದರು. ಗೋಕಾಕದಲ್ಲಿ ನಾವು ಮಾಡಿರುವ ಹಾಗೂ ಮಾಡುತ್ತಿರುವ ಕಾರ್ಯವನ್ನು ಅವರು ಮನಪಾರೆ ಹೀಗೆ ಪ್ರಶಂಸಿಸಿದ್ದಾರೆ.

೮-೧೧-೧೯೭೦

" . . . . . ಗೋಕಾಕದ ನಿಮ್ಮ ಈ ತರುಣ ಗೆಳೆಯರೆಲ್ಲರೂ ಸೇರಿ ಇತ್ತೀಚೆಗೆ ಮಾಡಿರುವ ಹಾಗೂ ಮಾಡುತ್ತಿರುವ ಸೇವೆ ನಿಜವಾಗಿಯೂ ಗೋಕಾಕಕ್ಕೆ ಕೀರ್ತಿ ತರುವಂತಹದಾಗಿದೆಯೆಂದು ಹೆಮ್ಮೆಯಿಂದ ಹೇಳಬಯಸುವೆ. ಗೋಕಾಕದ ನೆಲಜಲ, ತರುಮರಗಳ ನಿಸರ್ಗಸೌಂದರ್ಯವು ನಿಮ್ಮಂತಹ ಕವಿಗಳನ್ನೂ ಕತೆಗಾರರನ್ನೂ ಕಾದಂಬರಿಕಾರರನ್ನೂ ಪ್ರಚೋದಿಸಿ ಸ್ಫೂರ್ತಿ ಯನ್ನು ನೀಡಿರುವದು ಅಭಿಮಾನದ ಸಂಗತಿ. ಈ ನಿಮ್ಮ ಕಾವ್ಯಗುಚ್ಛವು (ಕನ್ನಡ ಕಾವ್ಯ ಕಾವೇರಿ) ಕನ್ನಡ ತಾಯಿಯ ಮುಡಿಗೆ ಸಲ್ಲುತ್ತಿರುವದಂ

ಸಂತೋಷದಾಯಕವಾದುದು. ಕನ್ನಡ ಕಲೆ ಕಾವ್ಯ ಸಾಹಿತ್ಯಗಳ ನಿಸ್ಸೀಮ ಭಕ್ತರಾದ ನಿಮ್ಮಿಂದ ಹೆಚ್ಚಿನ ಸೇವೆ ಸಲ್ಲಲೆಂದೂ, ಅದರಿಂದ ಕನ್ನಡದ ಕಣಜ ಕನ್ನಡ ಕೃತಿರತ್ನಗಳಿಂದ ತುಂಬುವಂತಾಗಲೆಂದೂ ಹಾರೈಸುವೆನು . . . "

ಹಿರಿಯ ಸಾಹಿತಿಗಳ ಆಶ್ರಯದಲ್ಲಿ ತರುಣ ಮಿತ್ರರೆಲ್ಲರೂ ಸೇರಿ ಸಾಹಿತ್ಯ ಸೇವೆಯನ್ನು ಮಾಡುತ್ತಿದ್ದೆವು. ಇದನ್ನು ಕಂಡು ಇಂಚಲರಿಗೆ ಎಲ್ಲಿಲ್ಲದ ಅಭಿಮಾನ. ಇದೇ ರೀತಿ ಕನ್ನಡದ ಕೆಲಸ ನಾಡಿನ ಮೂಲೆಮೂಲೆಗಳಲ್ಲೂ ನಡೆದು ಕನ್ನಡದ ಸಾರಸ್ವತ ಭಾಂಡಾರವು ಅಭಿವೃದ್ಧಿಗೊಳ್ಳಲೆಂದು ಹಾರೈಸಿದ್ದುಂಟು.

ಗೋಕಾವಿಯೆಂದರೆ ಅವರಿಗೆ ತುಂಬ ಅಭಿಮಾನ. "ಗೋಕಾವಿ ನೀರು ನೆಲ" ಗ್ರಂಥವನ್ನು ಕುರಿತು ಈ ರೀತಿ ಬರೆಯುತ್ತಾರೆ :

೧೧–೧೦–೧೯೭೩

" . . . . ವರ್ಣರಂಜಿತವಾದ ಗೋಕಾವಿಯ ನೆಲಜಲಗಳ ಹಿನ್ನೆಲೆಯಲ್ಲಿ ಗತಕಾಲದಿಂದಲೂ ಅರಳಿ ಬಂದ ಗೋಕಾವಿ ನಗರದ ರಂಗುರಂಗಾದ ವೈವಿಧ್ಯಪೂರ್ಣವಾದ ಜೀವನವನ್ನು ಬಹು ಸೊಗಸಾಗಿ, ಕಲಾತ್ಮಕವಾಗಿ, ಸರಳ ಸುಂದರವಾದ ಶೈಲಿಯಲ್ಲಿ ಸುಂದರವಾದ ಚಿತ್ರಕ್ಕೆ ಸುವರ್ಣದ ಕಟ್ಟನ್ನು ಹಾಕಿದಂತೆ ಬರೆದ ಈ ನಿಮ್ಮ ಹೊತ್ತಿಗೆಯನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೇನೆ. ಯಾವ ತಾಯಿಯು ನಿಮ್ಮನ್ನು ತೊಟ್ಟಿಲಲ್ಲಿಟ್ಟು ತೂಗುತ್ತ ಜೋಗುಳವನ್ನು ಹಾಡಿ ತಣಿಸಿದ್ದಳೋ ಆ ಮಹಾತಾಯಿ ಗೋಕಾವಿಯ ನಲ್ದಾಯಿಯ ಋಣವನ್ನು ಈ ಚಿಕ್ಕ ಪುಸ್ತಕದ ಪುಟಪುಟಗಳಲ್ಲಿ ಕೃತಜ್ಞತೆಯಿಂದ ತೀರಿಸಿದ ಪುಣ್ಯಕ್ಕೆ ನೀವು ಪಾತ್ರರಾಗಿದ್ದೀರೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ವೈವಿಧ್ಯತೆಯಿಂದ ಕೂಡಿದ 'ಗೋಕಾವಿ'ಯ ವರ್ಣಮಯ ಜೀವನದ ಸಮಗ್ರವಾದ ಚಿತ್ರ ಓದುಗರನ್ನು ಮುಗ್ಧಗೊಳಿಸುತ್ತದೆ. ಆದುದರಿಂದ ಈ ನಿಮ್ಮ ಪ್ರಯತ್ನ ಮುಂಬರುವ ಗೋಕಾವಿಯ ಬೃಹತ್ ದರ್ಶನಕ್ಕೆ ನಾಂದಿಯಾಗಿದೆಯೆಂದು ಹೇಳದಿರಲಾರೆ. . . , . "

೩–೪–೧೯೭೮

"ಮೊನ್ನೆ ತಾನೆ ನಾನೊಂದು ಕಥನ ಕವನವನ್ನು ಬರೆದಿದ್ದೇನೆ. 'ಭವಿ ಭಕ್ತನಾದದ್ದು' ಬಸವಣ್ಣನ ಮಹಾಮನೆಯಲ್ಲಿ ಭದ್ರನೆಂಬ ಕಳ್ಳ ಪ್ರವೇಶ ಮಾಡಿದಾಗಿನ ಸನ್ನಿವೇಶವನ್ನು ಕುರಿತಾದ ಕಥನ ಕವನವಿದು."

೧–೯–೧೯೭೨

"ದೇಹ ದುರ್ಬಲವಾಗಿದ್ದರೂ ಮನಸ್ಸಿನ ಚೈತನ್ಯದಲ್ಲಿ ಕುಂದಿಲ್ಲ. ಪರಿಣಾಮವಾಗಿ ಕವನಸಂಕಲನದ ಪ್ರತಿಯೊಂದನ್ನು ಸಿದ್ಧಪಡಿಸುವದಾಗಿಲ್ಲ. ಪ್ರಕೃತಿ ತುಸು ಸುಧಾರಿಸಿದ ತರುವಾಯ ಅದನ್ನು ಪೂರ್ತಿಗೊಳಿಸುವೆ. ಆದಕ್ಕೆ 'ಭಾವಶ್ರೀ' ಎಂಬ ಹೆಸರಿಡಬೇಕೆಂದು ಅನಿಸುತ್ತದೆ........"

೯–೧–೧೯೭೪

"ರಾಷ್ಟ್ರೋತ್ಥಾನ ಸಾಹಿತ್ಯದವರು ಭಾರತ ಭಾರತಿಗಾಗಿ ಲಿಂಗರಾಜರ ಬಗೆಗೆ ಬರೆಯಲು ತಿಳಿಸಿದರೆ ಅವಶ್ಯವಾಗಿ ಬರೆದುಕೊಡುವೆ ..... "

೧೮–೫–೧೯೭೨

"ನೀವು ಕೈಕೊಂಡ ರಾಷ್ಟ್ರಗೀತೆಗಳ ಸಂಕಲನವು ನಿಮ್ಮ ಕಣ್ಗಾರಿಕೆಯಲ್ಲಿ ಅತ್ಯಂತ ಯಶಸ್ವಿಯಾಗುವಲ್ಲಿ ಯಾವ ಸಂದೇಹವೂ ಇಲ್ಲ. ನನ್ನ ಕವನಗಳನ್ನು ಆಯ್ಕೆ ಮಾಡುವ ಕುರಿತು ನೀವು ತೋರಿಸಿದ ಆದರಾಸಕ್ತಿಗಳಿಗಾಗಿ ನಾನು ನಿಮಗೆ ತುಂಬಾ ಋಣಿ."

೧–೭–೧೯೭೨

"ನೀವು ಕೈಕೊಂಡ ರಾಷ್ಟ್ರಗೀತೆಗಳ ಬೃಹತ್ ಸಂಕಲನದ ಕಾರ್ಯ ಪೂರ್ಣವಾಗುತ್ತಿದೆಯೆಂದು ತಿಳಿದು ಹರ್ಷವಾಗುತ್ತಿದೆ. ಈ ಕಾರ್ಯದಲ್ಲಿ ನನ್ನ ನೆರವು ಬೇಕಿದ್ದರೆ ಅದನ್ನು ಕೊಡಲು ಸಿದ್ಧನೇ ಇದ್ದೇನೆ."

೯–೧–೧೯೭೪

"ಇದೀಗ ಮತ್ತೆ ಕೆಲವು ಚುಟುಕು ಪದ್ಯಗಳನ್ನು ಬರೆದಿದ್ದೇನೆ. ಇನ್ನೂ ಬರೆಯುವವನಿದ್ದೇನೆ. ನಿಮಗೆ ಬೇಕಾದವುಗಳನ್ನು ಆರಿಸಿಕೊಳ್ಳಬಹುದು. ಅದಕ್ಕೆ ಹೆಸರನ್ನು ಕುರಿತು ಆಲೋಚಿಸುವೆ. ನೀವೂ ಕೆಲವನ್ನು ಸೂಚಿಸಿರಿ. ನಂತರ ಒಂದು ನಿರ್ಣಯಕ್ಕೆ ಬರಬಹುದು. ಈ ಹೊತ್ತಿಗೆ ತುಂಬಾ ಯಶಸ್ವಿಯಾಗುವಲ್ಲಿ ಯಾವ ಸಂದೇಹವೂ ಇಲ್ಲ.... .."

ಇದೇ ಪತ್ರದಲ್ಲಿ ಕೊನೆಗೆ ಹೀಗೆ ಬರೆದಿದ್ದಾರೆ :

" ...ಇನ್ನು ಕೆಲವೇ ದಿನಗಳಲ್ಲಿ ಇನ್ನಷ್ಟು ಚುಟುಕುಗಳನ್ನು ಬರೆಯಲು ಸಾಧ್ಯವಾಗುವದು. ಮೊದಲು ಆಯ್ಕೆಯಾಗಬೇಕು. ಈ ಕಾರ್ಯ ಕೈಕೊಂಡರೆ ನಿಮಗೆ ಬಂದ ಬೇಜಾರು ಖಂಡಿತವಾಗಿಯೂ ದೂರಾಗುವದು. ಹಾಗೆ ಮಾಡೋಣ......"

೬-೨-೧೯೭೩

" .... ಮತ್ತೊಂದು ಹೊಸ ಸಂಗತಿ ನಿಮಗೆ ಹೇಳಲು ಸಂತೋಷಿಸುತ್ತೇನೆ, ಮೈಸೂರು ರಾಜ್ಯದ ಶಿಕ್ಷಕರ ಕಲ್ಯಾಣ ನಿಧಿ ಸಮಿತಿಗೆ ನನ್ನನ್ನು ಸದಸ್ಯನೆಂದು ನಾಮಕರಣ ಮಾಡಲಾಗಿದೆ, ಶಿಕ್ಷಣ ಮಂತ್ರಿಗಳೇ ಅಧ್ಯಕ್ಷರು. ನಮ್ಮ ವಿಭಾಗದಿಂದ ನಾನೊಬ್ಬನೇ ಶಿಕ್ಷಕ ಸದಸ್ಯನು. ಶಿಕ್ಷಕ ಬಂಧುಗಳ ಸೇವೆಯನ್ನು ಮಾಡಲು ಇದೊಂದು ನವೀನ ಅವಕಾಶವೆಂದು ಬಗೆದಿದ್ದೇನೆ .."

ಇದೇ ಪತ್ರದಲ್ಲಿ ಮತ್ತೂ ಹೀಗೆ ಬರೆದಿದ್ದಾರೆ.

"…. ನಿಮ್ಮ ಇನ್ನೊಂದು ವಿಚಾರದ ಬಗೆಗೆ ಅಂದರೆ 'ಕವಿಕಾವ್ಯ ದರ್ಶನ' ದ ಬಗೆಗೆ ಇಲ್ಲಿಯ ಶ್ರೀ. ಬಿಳ್ಳೂರ ಹಾಗೂ ಉಳಿದ ಮಿತ್ರರ ಜೊತೆಗೆ ನೀವು ಆಲೋಚಿಸಿರಿ. ಈ ಬಗ್ಗೆ ಒಂದು ಸಂಯುಕ್ತ ಸಂಘಟನೆ ಅವಶ್ಯ. ಈ ದೃಷ್ಟಿಯಲ್ಲಿ ಆರ್ಥಿಕವಾಗಿ ಯಾರಿಗೂ ತೊಂದರೆಯಾಗಬಾರದೆಂದೇ ನನ್ನ ಸೂಚನೆ. ಗ್ರಂಥ ಮುಖ್ಯವಲ್ಲ, ನಿಮ್ಮೆಲ್ಲರ ಅನಂತ ಪ್ರೀತಿ ವಿಶ್ವಾಸಗಳು ಮುಖ್ಯ. ನನ್ನದು ತೃಪ್ತ ಜೀವನ, ಈ ತೃಪ್ತಿಯೇ ನನ್ನ ಅಖಂಡ ಸೌಖ್ಯದ ತಾಯಿಬೇರು..."

೨೧-೩-೧೯೭೩

"…. ದೇವರು ನನಗೆ ಎಲ್ಲವನ್ನೂ ಆತ್ಮತೃಪ್ತಿಯನ್ನೂ ದಯಪಾಲಿಸಿ ಆರೋಗ್ಯಭಾಗ್ಯವನ್ನೇಕೆ ನಿರಾಕರಿಸಿರುವನೋ ತಿಳಿಯಲಾರದ ರಹಸ್ಯ ! ಇರಲಿ ಬಂದುದನ್ನು ಎದುರಿಸಿಯೇ ತೀರಲು ಎದೆ ಗಟ್ಟಿಗೊಂಡಿದೆ. ೬೦ರ ಅಂಚಿನಲ್ಲಿರುವ ನನಗೆ ಯಾವ ಚಿಂತೆಯೂ ಇಲ್ಲ ನಿಮ್ಮಂತಹ ನಾಲ್ಕು ಆತ್ಮೀಯರ ಸ್ನೇಹಸುಧೆಯು ನನಗೆ ಆಪ್ಯಾಯಮಾನವಾಗಿದೆ. ದೇಹ ದುರ್ಬಲವಿದ್ದರೂ ಜೀವ ಚೇತನದಿಂದ ತುಂಬಿದೆ. ...

...ನೀವು ಬೆಂಗಳೂರಿಗೆ ಹೋಗುವ ಸಂಗತಿ ಓದಿ ಸಂತೋಷವಾಯಿತು. ಒಂದು ಶಾಶ್ವತವಾದ ಸಾಹಿತ್ಯ ಕೃತಿ ಸಂಕಲನ ನಿಮ್ಮಿಂದ ಪೂರ್ತಿಯ ಹಂತದಲ್ಲಿರುವದನ್ನು ತಿಳಿದು ಅಭಿಮಾನವೆನಿಸುತ್ತದೆ, ಈ ಕೃತಿಗೆ ನನ್ನ ಕೆಲವು ತಲೆಬರಹಗಳನ್ನು ನಿಮ್ಮ ಸೂಚನೆಯಮೇರೆಗೆ ಕಳಿಸಿರುವೆ ಅದು ನನ್ನ ಕರ್ತವ್ಯವೇ ಹೌದು. (೧) ವೀರ ಭಾರತಿಗೆ ಕಾವ್ಯದಾರತಿ. (೨) ರಾಷ್ಟ್ರಭಕ್ತಿಗೆ ಭಾವ (ಕಾವ್ಯ) ದೀಪ್ತಿ ! (೩) ರಾಷ್ಟ್ರದೇವಿಗೆ ಭಾವ (ಕಾವ್ಯ) ದೀವಿಗೆ (೪) ಭಾರತದ (ಭಾರತಿಯ) ಮುಡಿಗೆ ರಾಷ್ಟ್ರೋತ್ಥಾನದ ಕೊಡುಗೆ (೫) ವೀರಭಾರತಿಗೆ ರಕ್ತದಾರತಿ (೬) ರಾಷ್ಟ್ರಚೇತನಕೆ ಕಾವ್ಯಕೇತನ... ಇನ್ನೂ ಕೆಲವನ್ನು ಬರೆದಿರುವೆ. ನಂತರ ತಿಳಿಸುವೆ......"

—ಇಂಚಲರ ಬರಹದ ವಿಚಾರಗಳು ಇಂಥ ಹಲವಾರು ಕಾಗದಗಳಿಂದ ತಿಳಿದು ಬರುತ್ತವೆ. ಮನಸ್ಸಿನಲ್ಲಿ ಮೂಡಿದ ಭಾವಗಳನ್ನು ಪತ್ರಗಳ ಮೂಲಕ ಪ್ರಕಟಿಸಿದ್ದಾರೆ. ಅವರ ' ಭಾವಶ್ರೀ ' ಬೆಳಕು ಕಾಣಬೇಕಾಗಿದೆ. ಅವರು ಬರೆದ ಚುಟುಕುಗಳು ಒಂದು ಕಡೆಗೆ ಬರಬೇಕಾಗಿವೆ. ಇಂಚಲರು ತಮ್ಮ ಪಾಂಡಿತ್ಯಕ್ಕೆ ಅನುಗುಣವಾದ ಪ್ರಮಾಣದಲ್ಲಿ ಗ್ರಂಥಗಳನ್ನು ರಚಿಸಲಿಲ್ಲವೆಂಬ ಮಾತನ್ನು ಅಲ್ಲಗಳೆಯುವಂತಿಲ್ಲ. ತಾವು ಸಾಕಷ್ಟು ಪ್ರಮಾಣದಲ್ಲಿ ಬರೆದಿದ್ದರೂ, ಬರೆಯುವ ಇಚ್ಛೆಯುಳ್ಳವರಾಗಿದ್ದರೂ ಆಡಳಿತ ಕಾರ್ಯಭಾರ ಅಡ್ಡ ಬರುತ್ತಿತ್ತೆಂದು ಕಾಣುತ್ತದೆ.

ಇಂಚಲರು ಕಡಿಮೆ ಬರೆದರೂ ಅವರ ಬರವಣಿಗೆ ಉನ್ನತಮಟ್ಟದ ಲಕ್ಷಣಗಳನ್ನು ಹೊಂದಿ ಸಾರ್ಥಕಗೊಂಡಿದೆಯೆಂಬುದು ನಿರ್ವಿವಾದ ಸಂಗತಿ.

೧೫-೩-೧೯೭೨

"... ಅಲ್ಲಿಯ ಗದ್ದಲವನ್ನು ಕೇಳಿದೆ. ವ್ಯವಸ್ಥೆ ಸರಿಯಾಗಿರಲಿಲ್ಲವೆಂದು ತಿಳಿದು ಬಂತು. ನಮ್ಮ ಜನವೇ ಹೀಗೆ ಎಂದೆನಿಸಿತು ನಾವಿನ್ನೂ ಬಹಳಷ್ಟು ಶಿಸ್ತು ಸಂಘಟನೆ ಹಾಗೂ ಸಭ್ಯತೆಯನ್ನು ಅಳವಡಿಸಿಕೊಳ್ಳಬೇಕಾಗಿದೆ... ಈ ತಲೆಮಾರಿನ ಹಿರಿಯ ಓರ್ವ ಶಿವಯೋಗಿಯು ಇನ್ನಿಲ್ಲವಾದರು. ಅವರ ಸಮಕಾಲೀನರಾಗಿರುವ ನಾವೆಲ್ಲರೂ ಧನ್ಯರು. ಮುಂದಿನ ಪೀಳಿಗೆಗೆ ತುಂಬಾ ಮಾನ್ಯರು!..."

ನಮ್ಮ ಕಾಲದ ಮಹಾನ್ ಶಿವಯೋಗಿ ಮುರಗೋಡ ಮಠದ ಮಹಾಂತ ಜ್ಜನವರು ಲಿಂಗೈಕ್ಯರಾದ ಸಂದರ್ಭದಲ್ಲಿ ದುಃಖ ವ್ಯಕ್ತಪಡಿಸಿ ಕಾಗದ ಬರೆದರು. ಈ ಕಾಗದವು ಸಮಾಜಕ್ಕೆ ಹಿಡಿದ ಕೈಗನ್ನಡಿಯಂತಿದೆ.

೧೧-೮-೧೯೭೦

"... ನಿಮ್ಮ ಹೃದಯದ ಒಲುಮೆಯನ್ನು ಮುಡಿದು ಬಂದ ಓಲೆಯನ್ನು ಓದಿ ತುಂಬಾ ಸಂತೋಷವಾಯಿತು....ಬಹುದಿನಗಳಿಂದ ನಿಮ್ಮನ್ನು ಕಂಡೇ ಇಲ್ಲ. ಕಾಣಬೇಕೆಂಬ ಲವಲವಿಕೆ ಅಧಿಕವಾಗುತ್ತಿದೆ, ನೀವು ಇತ್ತ ಒಂದು ರವಿವಾರ ಬಂದು ಹೋಗಬೇಕು, ನಿಮ್ಮ ಬರಲಿರುವ ಕವನಸಂಗ್ರಹದ ಪ್ರಕಟನೆ ಎಲ್ಲಿಗೆ ಬಂತು ?"

೧೯-೧-೧೯೬೦

"ಮಾನವನ ಬಾಳು ಬಂಗಾರವಾಗಬೇಕಿದ್ದರೆ ಜೀವನ ಸಂಜೀವಿನಿಯಾದ ಸ್ನೇಹವನ್ನು ನಾವೆಲ್ಲರೂ ಚೆನ್ನಾಗಿ ಅಳವಡಿಸಿಕೊಳ್ಳಬೇಕು. ಅಂಥ ಸ್ನೇಹಸೌರಭವೇ ನಮ್ಮೆಲ್ಲರ ಜೀವನವನ್ನು ಪಾವನವನ್ನಾಗಿಸಿ ಸಂಪದ್ಯುಕ್ತವನ್ನಾಗಿ ಮಾಡಬಲ್ಲದು. ಈ ಬಗೆಯಾದ ಸ್ನೇಹವನ್ನು ನೀಡುವ ನಿಮ್ಮ ಹೃದಯದ ಅಮರ ಸವಿಗಾಗಿ ನಾನು ಯಾವಾಗಲೂ ಹಂಬಲಿಸುತ್ತ ನಿರೀಕ್ಷಿಸುತ್ತಿರುತ್ತೇನೆ .."

ಇಂತಹ ಅನೇಕ ಹೃದಯದ ನುಡಿಗಳು ಅವರ ಪತ್ರಗಳಲ್ಲಿ ಸುವ್ಯಕ್ತಗೊಂಡಿವೆ. ಹೃದಯದ ಅಮರ ಸವಿಗಾಗಿ ನಾವು ಒಬ್ಬರೊಬ್ಬರು ಹಂಬಲಿಸುತ್ತ ನಿರೀಕ್ಷಿಸುತ್ತಿದ್ದೆವು. ನನ್ನಂತೆ ನೂರಾರು ತರುಣರು ಕೂಡ ಅದನ್ನೇ ನಿರೀಕ್ಷಿಸುತ್ತಿದ್ದರು,

೨೯-೯-೧೯೬೨

ಪ್ರಿಯ ಬಡಿಗೇರ ಡಿ. ಜೆ. ಇವರಿಗೆ

ಅನೇಕ ಶುಭಾಶಯಗಳು

" ಅಲ್ಲೆ ಇಲ್ಲೆ ತೊಳಲಾಡಿ ನೀನು ಕೊನೆಗೆ ಶಿಕ್ಷಕ ವೃತ್ತಿಯನ್ನು ಕೈಕೊಂಡೆ. ನನಗೆ ಹೆಮ್ಮೆ. ಈ ವೃತ್ತಿಯಲ್ಲಿ ಅನುಪಮ ತೃಪ್ತಿಯನ್ನು ಪಡೆದುಕೊಂಡು ನಮ್ಮ ನಾಡಿನ ಬಡಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡುವ ಈ ವೃತ್ತಿ ನಿಜವಾಗಿಯೂ ಒಂದು ರಾಷ್ಟ್ರೀಯ ಕಾರ್ಯವಲ್ಲದೆ, ಮತ್ತೇನು ?......"

೩೧-೫-೧೯೭೪

"......ಮುಂದೆ ಮುಂದೆ ಕಲಿಯಬೇಕೆಂಬ ನಿನ್ನ ಹಂಬಲ ಹಣ್ಣಸುವಂತಾಗಲೆಂದು ಆ ಬಸವಣ್ಣನಲ್ಲಿ ನನ್ನ ಪ್ರಾರ್ಥನೆ. ಧೈರ್ಯವಿದ್ದಲ್ಲಿ ದಾರಿಯಿದೆ. ಸಾಹಸವಿದ್ದಲ್ಲಿ ಸಿದ್ಧಿಯಿದೆ. ಇದನ್ನು ತಿಳಿದು ನಡೆ. ಇದು ನನ್ನ ಬಯಕೆ. . ."

ಈ ರೀತಿ ತಮ್ಮ ಅದೆಷ್ಟೋ ಕಿರಿಯ ಮಿತ್ರರಿಗೆ ಬರೆದು ಅವರ ಜೀವನದಲ್ಲಿ ಧೈರ್ಯೋತ್ಸಾಹಗಳನ್ನು ತುಂಬಿದ್ದಾರೆ.

ತಮ್ಮ ಶಿಷ್ಯರ ಲೇಖನಗಳಲ್ಲಿ ಪ್ರತಿಭೆಯಿದೆಯೆಂದು ಕಂಡುಬಂದರೆ ಅಂಥವರನ್ನು ಮೇಲೆತ್ತಿ ಮಾರ್ಗದರ್ಶನ ನೀಡಿ ಆ ಪ್ರತಿಭೆಯನ್ನು ಪೋಷಿಸುತ್ತಿದ್ದರು. ಅದಕ್ಕೊಂದು ಉದಾಹರಣೆ ಇಲ್ಲಿದೆ :

ಓಂ ನಲ್ ಬೆಳಗಾವಿ

೨೬-೧೧-೧೯೭೮

ಪ್ರೀತಿಯ ಶರತ್‌ಕುಮಾರ ಅವರಿಗೆ

ಹಾರ್ದಿಕವಾದ ಅನೇಕ ಒಲವುಗಳು.

ನಿಮ್ಮ ಪತ್ರ ನಿಮ್ಮ ಲೇಖನದೊಂದಿಗೆ ಕೈಸೇರಿ ಸಂತಸವನ್ನೂ ಸಮಾಧಾನವನ್ನೂ ನೀಡಿದುವು. ಈ ಮೊದಲೇ ನಾನು ಈ ನಿಮ್ಮ ನಿದ್ರೆಯ ಬಗೆಗಿರುವ ಲೇಖನವನ್ನು ಓದಿ ಮೆಚ್ಚಿಕೊಂಡಿದ್ದೆ. ಅದನ್ನೇ ಮತ್ತೊಮ್ಮೆ ಓದಿ ನೋಡಿದೆ. ಅದೊಂದು ಉತ್ತಮ ಲೇಖನವೆಂದು ತಟ್ಟನೇ ಹೇಳಿ ಬಿಡಬಹುದು ಯಾಕೆಂದರೆ ಅದು ಉತ್ತಮ ಲೇಖನದ ಉಚ್ಚ ಮಟ್ಟದ ಲಕ್ಷಣಗಳನ್ನು ಹೊಂದಿದೆ. " ನಿದ್ರೆಯ " ಬಗೆಗೆ ವೈಜ್ಞಾನಿಕವಾಗಿ ಇತ್ತೀಚಿಗಿನ ವರೆಗೆ ನಡೆದ ಸಂಶೋಧನೆ ಸಾಧನೆಗಳ ಆಧಾರಗಳನ್ನು ಅಭ್ಯಸಿಸಿ ಬರೆದ ಈ ಲೇಖನ, ಜನ ಸಾಮಾನ್ಯರಿಗೂ ಅರ್ಥವಾಗುವಂತೆ, ತಿಳಿನುಡಿಯಲ್ಲಿ ಬರೆಯಲಾಗಿರುವದು. ಅದರ ಒಂದು ವೈಶಿಷ್ಟ್ಯವೆಂದೇ ಹೇಳಬೇಕು. ಅಲ್ಲದೆ, ಅದರಲ್ಲಿ ವಿಚಾರ ಪ್ರಚೋದಕವಾದ ಚರ್ಚಾಸ್ಪದವಾದ ವಿಷಯಗಳನ್ನು ಬಹುಸೊಗಸಾಗಿ ಅಮೂಲಾಗ್ರವಾಗಿ ನಿವೇದಿಸಲಾಗಿದೆ. ಅಲ್ಲಿ ನಿರೂಪಿತವಾದ ವಿಚಾರಗಳನ್ನು ನಿಚ್ಚಳವಾದ ಸ್ಪಷ್ಟವಾದ ರೀತಿಯಲ್ಲಿ ವಿವರಿಸಲಾಗಿದೆ. ಆದುದರಿಂದ ಈ

ಲೇಖನವು ಪಂಡಿತ ಪಾಮರರಿಗೂ ಬಹು ಪ್ರಯೋಜನಕಾರಿಯಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಈ ನಿಮ್ಮ ಸಂಶೋಧನಾತ್ಮಕ ಬರೆಹವು ಜನಸಾಮಾನ್ಯರಲ್ಲಿ ಅತಿ ಮಹತ್ವದ ವಿಷಯವಾದ 'ನಿದ್ರೆ'ಯ ಬಗೆಗೆ ನಿರ್ದಿಷ್ಟವಾದ ತಿಳಿವಳಿಕೆಯನ್ನು ನೀಡುವಲ್ಲಿ ಬಹು ಮಹತ್ವದ ಪಾತ್ರ ವಹಿಸುವದೆಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ. ವೈಜ್ಞಾನಿಕ ಹಾಗೂ ವೈದ್ಯಕೀಯ ವಿಷಯಗಳ ಆಧಾರದಿಂದ ನಿಶ್ಚಿತವಾದ ಖಚಿತಾಭಿಪ್ರಾಯಗಳನ್ನು ಬಿತ್ತರಿಸುವ ಇಂಥ ಲೇಖನಗಳನ್ನು ಆಗಾಗ ಪ್ರಕಟಿಸುವ ನಿಮ್ಮ ಹಂಬಲ ನಿಜವಾಗಿಯೂ ಸ್ತುತ್ಯವಾದುದು. ಈ ಮೊದಲಿಗೆ ಬರೆದ ನಿಮ್ಮ ಇನ್ನೊಂದು ಲೇಖನ "Leprosy in Society" ಎಂಬುದಕ್ಕೆ ಅಖಿಲ ಭಾರತ ಸ್ಪರ್ಧೆಯಲ್ಲಿ ಬಹುಮಾನವನ್ನು ಪಡೆದ ಸಂಗತಿ ತಿಳಿದು ಬಹು ಹೆಮ್ಮೆಯೂ, ಆನಂದವೂ, ಉಂಟಾದವು. ಅದಕ್ಕಾಗಿ ನಾನು ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳನ್ನು ಕಳಿಸುತ್ತಿದ್ದೇನೆ.

ಅಲ್ಲದೆ ನಿಮ್ಮ ಪತ್ರದಲ್ಲಿ ನನ್ನ ಬಗೆಗೆ ವ್ಯಕ್ತಮಾಡಿದ ಗೌರವಾದರದ ಅಭಿಪ್ರಾಯಗಳಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ನಿಮ್ಮ ವೈದ್ಯಕೀಯ ಹಾಗೂ ವೈಜ್ಞಾನಿಕ ಸಂಶೋಧನೆಯ ಈ ನವೀನ ಜ್ಯೋತಿ ಹೆಚ್ಚು ಹೆಚ್ಚಾಗಿ ಬೆಳೆದು ಬೆಳಗಿ ಕನ್ನಡದ ಗುಡಿಯಲ್ಲಿ ಕನ್ನಡ ತಾಯಿಯ ಅಡಿದಾವರೆಗಳಿಗೆ ಆತ್ಮೀಯವಾದ 'ಆರತಿ'ಯಾಗಲೆಂದು ನಾನು ಮನಃಪೂರ್ವಕವಾಗಿ ಹಾರೈಸುವೆ. . . . . "

ನಿಮ್ಮ,

ಎಸ್. ಡಿ. ಇಂಚಲ

ಆದರ್ಶ ಶಿಕ್ಷಕರು, ವಿದ್ಯಾರ್ಥಿಗಳಲ್ಲಿ ಜನಪ್ರಿಯರು, ದಕ್ಷ ಆಡಳಿತೆಗಾರರು, ಶಿಕ್ಷಣವನ್ನು ತಪಸ್ವಿಯಂತೆ ಸಾಧನೆ ಮಾಡಿಕೊಂಡವರು ಆದ ಶ್ರೀ. ಇಂಚಲರ ಈ ಯೋಗ್ಯತೆಯನ್ನು ಮೆಚ್ಚಿ ರಾಜ್ಯ ಸರಕಾರದವರು ಪ್ರಶಸ್ತಿಯನ್ನು ದಯಪಾಲಿಸಿ, ಪ್ರಶಸ್ತಿಗೊಂದು ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಂದ ಅನೇಕ ಸನ್ಮಿತ್ರರ ಅಭಿನಂದನೆಗಳಿಗೆ ಉತ್ತರವನ್ನು ಬರೆದಾಗ ಅವರು ತಮ್ಮ ವೈಯಕ್ತಿಕ ಹಿರಿಮೆಯನ್ನು ಹಿಂದಿಟ್ಟು ಇದಕ್ಕೆಲ್ಲ ತಮ್ಮ ಅಭಿಮಾನಿಗಳೇ ಕಾರಣರೆಂಬ ಮಾತನ್ನು ಹೇಳಿ ಹೃದಯದ ಔದಾರ್ಯವನ್ನು ತೋರಿದ್ದಾರೆ :

೧೯-೭-೧೯೬೫

"ಪ್ರೀತಿಯ ಶ್ರೀ. ಶರತ್‌ಕುಮಾರ ನಾರ್ವೇಕರ ಅವರಿಗೆ.
ಸಪ್ರೇಮ ಶುಭಾಶಯಗಳು.

. . . . ನನಗೆ ದೊರೆತ ಈ ಲೋಕಮನ್ನಣೆಯಲ್ಲಿ ನನ್ನ ಸುಖದುಃಖಗಳಲ್ಲಿ, ಕರ್ತವ್ಯ ಕರ್ಮಗಳಲ್ಲಿ, ಹಕ್ಕು ಹೊಣೆಗಳಲ್ಲಿ ಹಾಗೂ ಆಗುಹೋಗುಗಳಲ್ಲಿ ಪಾಲುಗಾರರಾಗಿ ಬಂದ ಅನೇಕರಲ್ಲಿ ವಿದ್ಯಾರ್ಥಿಗಳಿಗೂ ಕೊಂಚ ಪಾಲು ಸಲ್ಲುತ್ತದೆ. ಸಂಸ್ಥೆಯವರಿಂದ, ಸಹಶಿಕ್ಷಕರಿಂದ, ಬಂಧುಬಾಂಧವರಿಂದ, ಪಾಲಕರಿಂದ, ಶಿಷ್ಯ ಬಳಗದವರಿಂದ ನನಗೆ ದೊರೆತ ಸಹಾಯ ಸಹಕಾರಗಳೇ ನನ್ನ ಯಶಸ್ಸಿಗೆ ಕಾರಣವೆಂದು ಅತ್ಯಂತ ಪ್ರಾಂಜಲ ಮನಸ್ಸಿನಿಂದ ಹೇಳಬಯಸುತ್ತೇನೆ. ಆದರಿಂದ ನನ್ನ ಬಾಳು ಬಂಗಾರವಾಯಿತು. ನನ್ನ ಅಲ್ಪಸೇವೆ ಕನ್ನಡ ತಾಯಿಯ ಅಡಿದಾವರೆಗಳಿಗೆ ಕೊಂಚವಾದರೂ ಸಲ್ಲಿತು ಎಂಬ ಆತ್ಮತೃಪ್ತಿ ನನಗಾಗಿದೆ. ಆದರಿಂದಲೇ ನನ್ನ ಬಾಳು ಧನ್ಯವೆಂದು ಬಗೆದಿದ್ದೇನೆ. . . . ."

೧-೯-೧೯೭೧

" . . . . ಗುರುಹಿರಿಯರಿಗೆ ವಿಧೇಯರಾಗಿ, ಬಂಧುಬಳಗದವರಿಗೆ ಹಿತವಾಗಿ, ನೆರೆಹೊರೆಯವರಿಗೆ ಬೇಕಾಗಿ, ಎಲ್ಲರಿಗೂ ಬೆಲ್ಲಸಕ್ಕರೆಯಾಗಿ ಎಲ್ಲರೊಳಗೂ ಒಂದಾಗಿ ನಿಮ್ಮ ಬಾಳು ಬಂಗಾರವಾಗಲೆಂದು ತುಂಬುಹೃದಯದಿಂದ ಹಾರೈಸುವೆವು . . . . "

ತಮ್ಮ ಏಕಮಾತ್ರ ಪ್ರೀತಿಯ ಅಳಿಯ ಶ್ರೀ. ಶಿವಕುಮಾರ ಮುಧೋಳಿಯವರಿಗೆ ಬರೆದ ಪತ್ರದಲ್ಲಿಯ ಕೆಲವು ಸಾಲುಗಳಿವು. ಸ್ನೇಹಬಂಧನದಿಂದ ಒಂದುಗೂಡಿದ ಜೀವಗಳು ದೈವಾನುಗ್ರಹದಿಂದ ಹೆಚ್ಚಿನ ಆಯುರಾರೋಗ್ಯ ಸೌಭಾಗ್ಯ ಪಡೆದು ನೆಮ್ಮದಿಯ ಮಾದರಿ ಬಾಳನ್ನು ಬಾಳಲೆಂದು ಒಮ್ಮನಸಿನಿಂದ ಇಂಚಲರು ಬಯಸಿದರು. ಮಾನವ ಜೀವನದ ತಿರುಳನ್ನೇ ಅಂದು ಅವರು ಅಳಿಯನ ಮುಂದಿಟ್ಟರು.

ಇಂಚಲರ ವ್ಯಕ್ತಿತ್ವವು ಬೆಳೆದು ಬರಲು ಅವರ ಧರ್ಮಪತ್ನಿ ಸೌ. ಕಮಲಮ್ಮನವರ ತ್ಯಾಗ ಸೇವೆ ಪ್ರೇಮಗಳ ದಿವ್ಯ ವ್ಯಕ್ತಿತ್ವವೇ ಕಾರಣ. ತಮಗೆ

ಸಂದ ಅಪೂರ್ವ ಗೌರವಗಳಿಗೆಲ್ಲ ಅವರ ಸೌಭಾಗ್ಯವತಿಯೇ ಪೂರ್ಣ ಅಧಿಕಾರಿ. ಏಕಮೇವ ಪ್ರೀತಿಯ ಪುತ್ರಿ ಶ್ರೀಮತಿ ಉಷಾತಾಯಿಗೆ ಬರೆದ ಓಲೆಯಲ್ಲಿ ಇದು ವ್ಯಕ್ತವಾಗುತ್ತದೆ. ತಾಯಿಯ ಆದರ್ಶವನ್ನೇ ತಾನೂ ಮುಂದುವರಿಸಿಕೊಂಡು ಹೋಗಬೇಕೆಂದು ಮಗಳಿಗೆ ತಂದೆಯ ಉಪದೇಶವಾಗಿದೆ :

೨೮–೩–೧೯೭೩

" ಪ್ರೀತಿಯ ಚಿ. ಉಷಾತಾಯಿಗೆ

ನನ್ನ ಹಾರ್ದಿಕ ಶುಭಾಶಯಗಳು ಹಾಗೂ ಆಶೀರ್ವಾದಗಳು. . . . . . ೩೩ ವರ್ಷ ಸೇವೆ ಸಲ್ಲಿಸಿ ನಿವೃತ್ತನಾಗುತ್ತಿರುವ ನನಗೆ ಒಂದು ರೀತಿಯ ತೃಪ್ತಿಯಾಗಿದೆ. ಕೈಕೊಂಡ ಶಿಕ್ಷಕ ವೃತ್ತಿಯಲ್ಲಿ ನನಗೆ ರಾಜ್ಯವಾಗಲಿ ರಾಷ್ಟ್ರವಾಗಲಿ ಸಕಾಲಕ್ಕೆ ಅಪೂರ್ವ ಗೌರವವನ್ನು ಸಲ್ಲಿಸಿ ನನ್ನ ಸೇವೆಗೆ ಸುವರ್ಣದ ಕಟ್ಟನ್ನು ತೊಡಿಸಿದ್ದಾರೆ. ಇದೊಂದು ದೊಡ್ಡ ಪುಣ್ಯವಿಶೇಷ. ಈ ಪುಣ್ಯಕ್ಕೆ ನಾನು ಪಾಲುಗಾರನಾಗುತ್ತಿರುವದು ನಿಷ್ಕಾಮಕರ್ಮಯೋಗಿಯಾದ ಸೌ. ಕಮಲಾ, ನಿನ್ನ ತಾಯಿ. ನಿಜವಾಗಿ ಹೇಳಬೇಕೆಂದರೆ ಅವಳೇ ನನ್ನ ಗೌರವಕ್ಕೆ ಅಧಿಕಾರಿಯೆಂದರೂ ಸಲ್ಲುವದು. ಅಂಥ ಅಪೂರ್ವವಾದ ಗೃಹಿಣಿಯ ಕೈಹಿಡಿದ ನಾನು ಧನ್ಯನೇ ಸರಿ. ಅವಳಂಥ ಗೃಹಿಣಿಯ ನೆಚ್ಚಿನ ಕುವರಿಯಾದ ನೀನು ಅವಳ ಆದರ್ಶವನ್ನು ಬಾಳಿನ ದಾರಿದೀಪವನ್ನಾಗಿರಿಸಿಕೊಂಡು ಸಾಗಿದರೆ, ನಿನಗೆ ಎಂಥ ಕಷ್ಟಗಳು ಬಂದರೂ ಅವೆಲ್ಲ ಮುಂಜಾನೆಯ ಮಂಜಿನಂತೆ ಕರಗಿ ಹೋಗುವವೆಂಬ ಧೈರ್ಯ ನನಗಿದೆ. . . . . "

ಆತ್ಮೀಯತೆಯ ಅಂತಃಕರಣದ ಹೊನಲಾಗಿ ಹರಿದ ಇಂಚಲರ ಪತ್ರಗಳು ಮಾದರಿಯೆನಿಸಿವೆ. ಅವರ ಮಾನವೀಯ ಗುಣವೂ, ಪ್ರಾಮಾಣಿಕ ವ್ಯಕ್ತಿತ್ವವೂ, ಸ್ನೇಹಸೌರಭವೂ ಅವರ ಪತ್ರಗಳಲ್ಲಿ ಸುವ್ಯಕ್ತಗೊಂಡಿವೆ. ಎಲ್ಲರಿಗೂ ಬೆಲ್ಲ ಸಕ್ಕರೆಯಾಗಿ ಎಲ್ಲರೊಳಗೊಂದಾದ ಅವರ ಬಾಳು ಬಂಗಾರವಾಗಿದೆ.

# ಒಳಗಣ್ಣು ತೆರೆದಾಗ !

ಶ್ರೀ. ಎಸ್. ಡಿ. ಇಂಚಲ ಅವರು ೧೯೭೦ ರ ಪ್ರಾರಂಭದಿಂದ ಕೊನೆಯವರೆಗೆ ದಿನಚರಿ ಬರೆದದ್ದು ಕಂಡು ಬರುತ್ತದೆ. ೧೯೭೧ ರಲ್ಲಿ ಜಾನೇವರಿ ೧ ರಂದು ಪ್ರಾರಂಭಮಾಡಿ ಜಾ. ೨೫ ರ ವರೆಗೆ ಮಾತ್ರ ಬರೆದಿದ್ದಾರೆ. ಇನ್ನುಳಿದ ಅವಧಿಯ ದಿನಚರಿಯ ಪುಟಗಳು ದೊರೆತಿಲ್ಲವಾದುದರಿಂದ ಬರೆದಿರುವದಿಲ್ಲವೆಂದು ಹೇಳಬೇಕಾಗುತ್ತದೆ.

" ಭದ್ರಂ ಶುಭಂ ಮಂಗಲಂ "
" ಸತ್ಯಂ ಶಿವಂ ಸುಂದರಂ "
ಎಂದು ದಿನಚರಿಯು ಪ್ರಾರಂಭವಾಗುತ್ತದೆ.

" ಬರಲಿರುವ ಈ ವರುಷ
ತರಲಿ ಹೊಸ ಹೊಸ ಹರುಷ !
ಮುಂದೆ ಸಾಗಲಿ ಬಾಳು
ಬಂದುದನು ಸಲೆ ತಾಳು
ಹೊಸ ಗೀತೆಯನು ಹೇಳು
ನಸುನಗುತ ಎದ್ದೇಳು ! "

ಎಂದು ಹೊಸವರುಷವನ್ನು ಸ್ವಾಗತಿಸಿ ಬರೆದ ಪದ್ಯದ ಸಾಲುಗಳು ಪ್ರಾರಂಭದ ಪುಟದಲ್ಲಿವೆ.

ಪ್ರಾರಂಭದ ಪುಟದಲ್ಲಿ ಇನ್ನೂ ಹೀಗಿದೆ :

**" ೫ ನೆಯ ಶತಮಾನದಲ್ಲಿ ನಡೆದ ಸಂಗತಿ "**

ಋಷಿವಾಣಿ ; ತನ್ನ ವಿದ್ಯಾಭ್ಯಾಸ ಮುಗಿಸಿ ಹೊರಟು ನಿಂತ ರಾಜಕುಮಾರಿಗೆ ಋಷಿವರ್ಯರು ಮಾಡಿದ ಉಪದೇಶವಾಣಿ :

೧. ಯಾರಿಗೂ ಮಾತು ಕೊಡಬೇಡ
೨. ಮಾತು ಕೊಟ್ಟಮೇಲೆ ಅದನ್ನೆಂದೂ ತಪ್ಪಿಸಬೇಡ
೩. ಉತ್ತಮರಿಗೆ ಯಾವ ರೀತಿಯಿಂದಲೂ ತೊಂದರೆ ಕೊಡಬೇಡ, ಅವರನ್ನು ಗುರುತಿಸಿ ಅವರನ್ನು ಪೋಷಿಸು.
೪. ದುಷ್ಟರಿಗೆ ಯಾವ ಸಹಾಯ ಸಹಕಾರವನ್ನೂ ನೀಡಬೇಡ.
೫. ಭ್ರಷ್ಟಾಚಾರಕ್ಕೆ ಎಂದೆಂದಿಗೂ ಇಳಿಯಬೇಡ.

ಈ ನುಡಿಮುತ್ತುಗಳು ಇಂದಿಗೂ ಮಾರ್ಗದರ್ಶಕವಾಗಿವೆ. ಇವುಗಳನ್ನು ನಮ್ಮ ಜನತೆ ಹಾಗೂ ಜನನಾಯಕರು ಕಾರ್ಯರೂಪಕ್ಕೆ ತಂದುದಾದರೆ, ಕಲಿಯುಗದಲ್ಲಿಯೂ 'ರಾಮರಾಜ್ಯ' ವನ್ನು ಕಟ್ಟಬಹುದು. ಇದು ಸಾಧ್ಯವೇ ? ಚಿರಂತನವಾದ ಆಹ್ವಾನವಿದು !'' (೧-೧-೧೯೭೦)

ನಮ್ಮ ರಾಷ್ಟ್ರದ ಪರಿಸ್ಥಿತಿಯ ವಿಷಯವಾಗಿ ೧೯೭೦ ರ ಆರಂಭದಲ್ಲಿಯೇ ಹೊರಡಿಸಿದ ಈ ಉದ್ಗಾರವು ಶ್ರೀ. ಇಂಚಲರ ಮುನ್ನೋಟದ ಅರಿವನ್ನುಂಟು ಮಾಡುತ್ತದೆ. ಅಂದು ಅವರು ಕೇಳಿದ ಪ್ರಶ್ನೆ 'ಇದು ಸಾಧ್ಯವೇ ?'—ಇದು ಇಂದಿಗೂ ಪ್ರಶ್ನೆಯಾಗಿಯೇ ಉಳಿದಿದೆ. ಇದು ನಮಗೆ ಚಿರಂತನವಾದ ಆಹ್ವಾನವನ್ನು ಒಡ್ಡಿದೆ.

"ಅರುಣೋದಯದ ಹೊಂಗಿರಣಗಳ ಮಧ್ಯದಲ್ಲಿ ತೂರಿ ತೂರಿ ಬರುತ್ತಿದೆ. ಪ್ರಸನ್ನತೆ ಮನಸ್ಸಿನ ಮುಗ್ಧತೆಗಳು ವ್ಯೋಮನಗಳನ್ನು ತುಂಬಾ ಆವರಿಸಿ ಸಂತೋಷದಾಯಕ ವಾತಾವರಣ ಮನೆಯಲ್ಲಿ ತಾನೇತಾನಾಗಿ ತುಂಬಿಕೊಂಡಿದೆ ಇಂಥ ಪ್ರಸನ್ನತೆಯಿಂದ ಆರಂಭವಾದ ಹೊಸ ವರುಷ ಹರುಷದಾಯಕವಾಗಿ ಮುನ್ನಡೆಯಲೆಂದು ಆ ಮಲ್ಲಿಕಾರ್ಜುನನಲ್ಲಿ ಭಕ್ತಿಭಾವದಿಂದ ಪ್ರಾರ್ಥಿಸುತ್ತೇನೆ.

ಇಂದು ನನ್ನ ಆತ್ಮೀಯ ಸ್ನೇಹಿತರಾದ ಶ್ರೀ. ಬಾಳೇಶ ಲಕ್ಷೆಟ್ಟಿ ಹಾಗೂ ಅವರ ಪುತ್ರಿ 'ಆಶಾ' ಇವರ ಮಧುರ ಸ್ನೇಹ ಮನೆಗೆ ಹೆಚ್ಚಿನ ಶುಭವನ್ನೂ, ಸುಖವನ್ನೂ ನೀಡಿತು. ಸತ್‌ಸ್ನೇಹವೇ ಬಾಳಿನ ಸಂಜೀವಿನಿಯಲ್ಲವೆ !''
(೧-೧-೧೯೭೦)

ಹೊಸವರುಷದ ಮೊದಲ ದಿನವನ್ನು ಈ ರೀತಿ ಅವರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆ. ಜೀವನದಲ್ಲಿ ಅವರಿಗೆ ತುಂಬಾ ಶ್ರದ್ಧೆ. ಸ್ನೇಹಿತರ ಆಗಮನದಿಂದ ಅವರು ಬಹಳೇ ಹಿಗ್ಗುತ್ತಿದ್ದರು. ಸ್ನೇಹವೇ ಜೀವನದ ಸಂಜೀವಿನಿಯೆಂದು ನಂಬಿ ನಡೆದ ಕವಿ ನಿತ್ಯ ಜೀವನದಲ್ಲಿಯೂ ಸ್ನೇಹಸಂಜೀವಿನಿಯೇ ಆಗಿದ್ದರು.

ಮತ್ತೊಂದು ಹೊಸ ವರುಷವನ್ನು ಹೀಗೆ ಸ್ವಾಗತಿಸುತ್ತಾರೆ :

"...ಹಾಗೆಯೇ ನಿನ್ನೆ ಪೂರ್ತಿಗೊಂಡ ಕಳೆದ ವರ್ಷವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಕಳೆದ ವರುಷವು ಇತ್ತ ರಸನಿಮಿಷಗಳನ್ನೂ ವಿಷನಿಮಿಷಗಳನ್ನೂ ಸಮವಾಗಿ ಭಾವಿಸಿ, ಮುಂಬರುವ ವರುಷದ ಭವಿಷ್ಯತ್ತಿಗೆ ತೆರೆದ ಹೃದಯದಿಂದ ಕಳಕಳಿಯಿಂದ ಸುಸ್ವಾಗತವನ್ನು ಕೋರುತ್ತೇನೆ.

"ರಸವೆ ಜನನ ವಿರಸ ಮರಣ ಸಮರಸವೇ ಜೀವನ'

ಎಂದು ನಂಬಿ ಬಂದುದನ್ನು ಅನುಭವಿಸಲು ಧೈರ್ಯವನ್ನೂ, ನೈತಿಕ ಬಲವನ್ನೂ, ಮನಸ್ಸಿನ ಪ್ರಸನ್ನತೆಯನ್ನೂ ಕೊಡಲೆಂದು ಆ ಪರಮಾತ್ಮನಲ್ಲಿ ಅನನ್ಯಭಕ್ತಿಯಿಂದ ಪ್ರಾರ್ಥಿಸಿ ಮುಗ್ಧ ಮನಸ್ಸಿನ ಹರುಷದಿಂದ ಹೊಸ ವರುಷವನ್ನು ಇಂದು ಆರಂಭಿಸುತ್ತೇನೆ." (೧-೧-೧೯೭೧)

ಜೀವನವು ಸುಖದುಃಖಗಳ ಸಂಗಮಸ್ಥಾನ. ರಸನಿಮಿಷಗಳಂತೆ ವಿಷನಿಮಿಷಗಳು ಸುಳಿಯುವದು ಸ್ವಾಭಾವಿಕ. ಮನುಷ್ಯನು ಜೀವನದಲ್ಲಿ ಅವುಗಳನ್ನು ಹೇಗೆ ಎದುರಿಸುತ್ತಾನೆ ಎಂಬುದೇ ಮುಖ್ಯ. ಇಂಚಲರು ತಮ್ಮದೇ ಆದ ವಿಶಿಷ್ಟ ಜೀವನದೃಷ್ಟಿಯನ್ನು ಪಡೆದು ಬಂದುದೆಲ್ಲವನ್ನು ಶಿವನ ಪ್ರಸಾದವೆಂದು ಸ್ವೀಕರಿಸಿ ಮುನ್ನಡೆದರು. ಇದೇ ಭಾವವನ್ನು ಹೊಂದಿ ಅನೇಕ ಹೊಸ ವರುಷಗಳನ್ನು ಹರುಷದಿಂದ ಸ್ವಾಗತಿಸಿದರೆಂದು ಕಾಣುತ್ತದೆ.

ಯಾವ ಫಲಾಪೇಕ್ಷೆಯೂ ಇಲ್ಲದೆ ಕರ್ತವ್ಯವನ್ನು ಮಾಡುವದು ಅವರ ಜೀವನದ ಅಮೌಲ್ಯ ಗುಣವಾಗಿತ್ತು. ಕರ್ತವ್ಯವಿಮುಖತೆ ಅವರಿಗೆಂದಿಗೂ ಸೇರುತ್ತಿರಲಿಲ್ಲ. ಕರ್ತವ್ಯವಿಮುಖತೆಗೆ ಒಳಗಾದವರು ಯಾರೇ ಇರಲಿ ಅವ

ರನ್ನು ಖಡಾಖಂಡಿತವಾಗಿ ಬಯಲಿಗೆಳೆಯುತ್ತಿದ್ದರು. ಶಿಕ್ಷಕರು ಕರ್ತವ್ಯದ ಕರೆಗೆ ಓಗೊಟ್ಟು ತತ್ವನಿಷ್ಠರಾಗಿರಬೇಕು ಎಂಬುದು ಅವರ ಹೃದಯದ ಹಂಬಲ.

ಶಿಕ್ಷಕರಲ್ಲಿಯ ಔದಾಸೀನ್ಯವನ್ನು ಕಂಡು ಮನಸ್ಸಿನ ಭಾವನೆಗಳನ್ನು ಹೀಗೆ ಬರೆದಿದ್ದಾರೆ :

"ಇದೀಗ ವಿದ್ಯಾರ್ಥಿಗಳಿಗಿಂತ ಕೆಲ ಶಿಕ್ಷಕರೇ ಹೆಚ್ಚಾಗಿ ಬಿಡುವನ್ನು ಮೆಚ್ಚುವವರಾಗಿದ್ದುದು ಅವರ ಔದಾಸೀನ್ಯವನ್ನು ಎತ್ತಿ ತೋರಿಸುತ್ತದೆ. ' To teach is to love the students ' ಎಂಬ ಗಾಂಧೀಜಿಯ ಅಮೃತ ವಾಕ್ಯಕ್ಕೂ ಇಂದಿನ ಶಿಕ್ಷಕರ ಕರ್ತವ್ಯವಿಮುಖತೆಗೂ ಅದೆಂಥ ಅಜ ಗಜಾಂತರ. ಶಿಕ್ಷಕರ ಈ ಬಗೆಯಾದ ಶೈಥಿಲ್ಯ ವಿದ್ಯಾರ್ಥಿಗಳ ಅಭ್ಯಾಸವಿಮುಖತೆಗೆ ಕೆಲಮಟ್ಟಿಗೆ ಕಾರಣವಾಗಿದೆ. ಆದುದರಿಂದ ಶಿಕ್ಷಕರಾದ ನಾವು ಈ ಸೋಮಾರಿತನದ ಜಾಡ್ಯವನ್ನು ತೊಡೆದುಹಾಕಿ ಕರ್ತವ್ಯಪಾಲನೆಯ ಬಗೆಗೆ ತುಂಬಾ ಜಾಗೃತರಾಗಿರಬೇಕು. ಶಿಕ್ಷಕನು ನಿತ್ಯವೂ ಜಾಗೃತನಾಗಿ, ಭಾವೀ ಪೀಳಿಗೆಯ ತರಬೇತಿಯಲ್ಲಿ ನಿಷ್ಕಾಮ ಕರ್ಮದಿಂದ ದುಡಿಯಬೇಕು.

(೨-೧-೧೯೬೦)

ಶಿಕ್ಷಕರು ಶಾಲೆಯಲ್ಲಿ ಯಾಂತ್ರಿಕವಾದ ರೀತಿಯಲ್ಲಿ ಕೆಲಸ ಮಾಡುವ ಪ್ರವೃತ್ತಿಯನ್ನು ಅವರು ಎಂದೆಂದಿಗೂ ಸಹಿಸುತ್ತಿರಲಿಲ್ಲ. ತಮ್ಮ ಮನಸ್ಸಿನ ಭಾವನೆಗಳನ್ನು ಹೀಗೆ ಬರೆದಿದ್ದಾರೆ :

" ಶಾಲೆಯಲ್ಲಿ ' ಶ್ರಮದಾನ ' ಯಥಾಪ್ರಕಾರ ನಡೆಯಿತು. ವಿದ್ಯಾರ್ಥಿಗಳಲ್ಲಿ ಉತ್ಸಾಹ ಕಂಡುಬಂದಿತು. ಆದರೆ ಶಿಕ್ಷಕರಲ್ಲಿ ಅದು ಇದ್ದಂತಿಲ್ಲ. ಅವರು ಶಾಲೆಯಲ್ಲಿ ಯಾಂತ್ರಿಕವಾದ ರೀತಿಯಲ್ಲಿ ಕೆಲಸ ಮಾಡುವ ಪ್ರವೃತ್ತಿಯವರಾಗಿದ್ದಾರೆ. ಇದು ಶೋಚನೀಯ. ಈ ಬಗೆಯಾದ ಔದಾಸೀನ್ಯವನ್ನು ಕಂಡು ಇಂದು ಮನಸ್ಸಿಗೆ ತುಂಬಾ ಬೇಜಾರವಾಯಿತು. . . . . ಮಾಡುವ ಕೃತಿಗಳಲ್ಲಿ ಅಭಿರುಚಿ ಕಡಿಮೆಯಾದರೆ ವಿದ್ಯಾರ್ಥಿಗಳು ಸಹಜವಾಗಿ ತಪ್ಪಿಸುವರೆಂಬುದೇ ನನ್ನ ಸಾದ್ಯಂತ ಅನುಭವ. ಇದನ್ನು ಹೇಗೆ ಸಾಧಿಸುವದು ?"

(೧೩-೧೧-೧೯೬೦).

ಇಂಚಲರು ಕವಿತೆ ಕಲಿಸುವಾಗ ಅವರ ಮೈ ತುಂಬುತ್ತಿತ್ತು, ಹೃದಯ ರಸಬುಗ್ಗೆಯಾಗಿ ಮಾರ್ಪಡುತ್ತಿತ್ತು, ಕವಿತೆಯಲ್ಲಿಯ ರಸಭಾವವನ್ನು ಮನೋಜ್ಞವಾಗಿ ವಿದ್ಯಾರ್ಥಿಗಳೆದುರು ಇಡುತ್ತಿದ್ದರು, ಪು. ತಿ. ನ, ಅವರ ಕವಿತೆ 'ಒಂದು ಸಂಜೆ' ಕುರಿತು ಹೀಗೆ ಬರೆದಿದ್ದಾರೆ.

"ಸಂಜೆಯ ಮುಸುಕುಗತ್ತಲೆಯಲ್ಲಿ ಪೃಥ್ವಿಯೆಂಬ ಕೂಸು ಧೂಳಿನಲ್ಲಿ ಮಲಿನವಾದಂತೆ ತೋರಿತು ಕವಿಗೆ. ಕವಿಯ ಅಸಮಾಧಾನದ ಅನಂತ ತೆರೆಗಳಲ್ಲಿ ಅಲ್ಲಲ್ಲಿ ಕಾಣುವ ಚಿಕ್ಕಿಗಳಂತೆ ರಸಭಾವದ ಸನ್ನಿವೇಶಗಳು ಮಿನುಗುತ್ತವೆಯೆಂಬ ವಿಚಾರ ಮನೋಜ್ಞವಾಗಿ ಕವಿಯ ಅಸಮಾಧಾನದ ಅನಂತತೆಯನ್ನು ಎತ್ತಿ ತೋರಿಸುತ್ತದೆ. ಕವಿಯ ಹೃದ್ಗತವಾದ ಅನುಭವದ ರಸವಾಣಿಯೇ ಕಾವ್ಯವೆಂಬ ಸತ್ಯ ಈ ಕವನದಲ್ಲಿ ಅಚ್ಚಳಿಯದೆ ಮೂಡಿದೆ." (೧೬-೧-೧೯೭೦)

ಇಂಚಲರು ವಿದ್ವಾಂಸರು. ಅವರದು ವಿಮರ್ಶಕ ದೃಷ್ಟಿ. ವರ್ಗಗಳಲ್ಲಿ ತಮ್ಮ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದಾಗ ಪಾಠದಲ್ಲಿ ತಾದಾತ್ಮ್ಯ ಹೊಂದುತ್ತಿದ್ದರು. ನಾಗಚಂದ್ರನ ರಾಮಾಯಣದಲ್ಲಿ ಬರುವ ಸೀತಾಪಹರಣವೆಂಬ ಭಾಗವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತ—

"ಪರನಾರೀ ವಿರತಿವ್ರತವನ್ನು ಪಾಲಿಸುತ್ತಿದ್ದ ದಶಾನನನು ರಾಮಲಕ್ಷ್ಮಣರ ಮೇಲೆ ಸೇಡು ತೀರಿಸಲೆಂದು ಅತ್ಯಂತ ಸಿಟ್ಟಿನಿಂದ ಪುಷ್ಪಕ ವಿಮಾನವನ್ನೇರಿ ದಂಡಕಾರಣ್ಯದ ಗಗನಕ್ಕೆ ಧಾವಿಸುತ್ತಾನೆ. ರಾವಣನ ಕೋಪಾಗ್ನಿಯನ್ನು ಕವಿಯು ಮನೋಜ್ಞವಾಗಿ ಬಣ್ಣಿಸಿದ್ದಾನೆ. ಭಾವವಾಚಕವಾದ ಕೋಪಾಗ್ನಿಯನ್ನು ವಸ್ತುವಾಚಕವಾಗುವಂತೆ ವರ್ಣಿಸುವಲ್ಲಿ ಅವನ ಕಾವ್ಯಶಕ್ತಿಯ ಆಳವನ್ನು ಗುರುತಿಸಬಹುದಾಗಿದೆ. ಬಲಭದ್ರನ ಬದಿಯಲ್ಲಿ ಕುಳಿತ ಸೀತೆಯನ್ನು ಒರಸಿಡಿಲ ಬದಿಯ ಸೆಳೆಮಿಂಚಿಗೆ ಹೋಲಿಸಿ ಅವಳ ರೂಪಶ್ರೀ ರಾವಣನ ಮನಸ್ಸನ್ನು ಚಂಚಲಗೊಳಿಸಿದ ರೀತಿಯನ್ನು ಬಹು ಮಾರ್ಮಿಕವಾಗಿ ಬಣ್ಣಿಸಿದ್ದಾನೆ. ಅಲ್ಲದೆ ರಾವಣನು ಸೀತಾದೇವಿಯ ಸೌಂದರ್ಯಕ್ಕೆ ಮರುಳಾದ ಪ್ರಸಂಗದಲ್ಲಿ ಸ್ತ್ರೀರೂಪವನ್ನು ಅದ್ಭುತವಾಗಿ ಬಣ್ಣಿಸಿದ್ದಾನೆ. ಈ ಸನ್ನಿವೇಶದಲ್ಲಿ ಕವಿ ಶೃಂಗಾರ ರಸವನ್ನು ಯಥೇಚ್ಛವಾಗಿ ಪುಟಿಸಿದ್ದಾನೆ."

(೬-೧-೧೯೭೧)

ಕುಮಾರವ್ಯಾಸನ ಕರ್ಣನನ್ನು ಕುರಿತು—

“ .. ಬೆಂಕಿಯಲ್ಲಿ ಬಿದ್ದ ಬಂಗಾರ ಹೆಚ್ಚಿನ ಒರೆಗೆ ಬರುವಂತೆ ಕರ್ಣನ ವ್ಯಕ್ತಿತ್ವ ಕಳೆಗಟ್ಟಿ ನಿಂತಿದೆ. ಇದು ಕುಮಾರವ್ಯಾಸನ ಕಲಾಭಿತ್ತಿಯಲ್ಲಿ ಬಣ್ಣ ಬಣ್ಣದಿಂದ ಮೆರಗುವಡೆದು ನಿಲ್ಲುವ ಸುವರ್ಣಮಯ ರೇಖೆಗಳಿಂದ ಅಲಂಕೃತವಾದ ಚಿತ್ರವಾಗಿದೆ.” (೧೮-೭-೧೯೭೦)

ಶ್ರೀ. ಪುರಾಣಿಕರ ‘ ಸೈರಂಧ್ರಿ ’ ಯನ್ನು ಕುರಿತು— “ ಮಾನ ವಿರಹಿತಳಾಗಿ ಬಾಳುವದಕ್ಕಿಂತ ವನವಾಸವು ಮೇಲೆಂದು ಧರ್ಮರಾಯನನ್ನು ಕುರಿತು ಹೇಳುವ ಸೈರಂಧ್ರಿಯ ನುಡಿಯು ಅವಳ ವೀರಶ್ರೀಯನ್ನು ಎತ್ತಿ ತೋರಿಸುತ್ತದೆ. ನೈತಿಕ ಧೈರ್ಯ, ನಿಷ್ಠುರ ಸತ್ಯವನ್ನು ಸುರುವ ಅವಳ ಮಾನವೀಯ ಶೀಲ, ಪಾಂಡವರ ಬಗೆಗಿರುವ ಅವಳ ಸ್ವಾಭಿಮಾನ ಅವಳ ವ್ಯಕ್ತಿತ್ವದ ಸುವರ್ಣರೇಖೆಗಳಾಗಿವೆ. ಧೀರೋದಾತ್ತತೆ, ಪಾವನತೆ, ಪಾತಿವ್ರತ್ಯ ನಿಷ್ಠೆ ಅವಳನ್ನು ಎತ್ತರದಲ್ಲಿ ನಿಲ್ಲಿಸಿವೆ.” (೨೨-೭-೧೯೭೦)

ಮಾತನಾಡುವದೂ ಒಂದು ಕಲೆ. ಅದನ್ನು ಬೆಳೆಸಿಕೊಂಡು ಬರುವ ಕ್ರಮವನ್ನು ವಿದ್ಯಾರ್ಥಿಗಳಿಗೆ ಈ ರೀತಿ ಉಪದೇಶಿಸಿದ್ದಾರೆ :

‘‘ ಮಾತುಗಾರಿಕೆ ಇಂದಿನ ಪ್ರಜಾಪ್ರಭುತ್ವದ ಜೀವಜೀವಾಳವೆನಿಸಿದೆ. ಆದುದರಿಂದ ಇಂದಿನ ವಿದ್ಯಾರ್ಥಿಗಳು ತಮ್ಮ ಭಾವೀ ಜೀವನಕ್ಕೆ ಅತ್ಯಂತ ಅವಶ್ಯಕವಾದ ಈ ಕಲೆಯನ್ನು ವಿದ್ಯಾರ್ಥಿದೆಸೆಯಲ್ಲಿಯೇ ಸಿದ್ಧಿಸಿಕೊಳ್ಳಲು ಯತ್ನಿಸಬೇಕು. ಅದಕ್ಕಾಗಿ ಓದಬೇಕು, ಓದಿದ್ದನ್ನು ಅನುಭವದಲ್ಲಿ ಅರಗಿಸಿಕೊಳ್ಳಬೇಕು, ಅನಂತರ ಉಂಟಾದ ಅನುಭವಜನ್ಯವಾದ ಸತ್ಯವನ್ನು ಮಾರ್ಮಿಕವಾದ ಪರಿಣಾಮಕಾರಿಯಾದ ಮಾತುಗಳಿಂದ ಅಭಿವ್ಯಕ್ತಗೊಳಿಸಬೇಕು. ಅಂಥ ಮಾತು ಶ್ರೋತೃಗಳಮೇಲೆ ಶಾಶ್ವತ ಪರಿಣಾಮ ಬೀರಬಲ್ಲದೆಂದೇ ಹೇಳಬಹುದು.’’
(೧೮-೭-೧೯೭೦)

ಇಂಚಲರು ಆದರ್ಶ ಶಿಕ್ಷಕರು. ಅವರು ಇಂದಿನ ಶಿಕ್ಷಣ ಪದ್ಧತಿಯನ್ನು ಕಂಡು ಸಿಡಿಮಿಡಿಗೊಂಡಿದ್ದಾರೆ. ಉದಾತ್ತ ಜೀವನ ನಿರ್ವಹಣೆಗೆ ಇಂದಿನ ಶಿಕ್ಷಣದಿಂದ ಯಾವ ಪ್ರಯೋಜನವೂ ಇಲ್ಲವೆನ್ನುತ್ತಾರೆ. ಉದಾತ್ತವಾದ

ಸಂಸ್ಕೃತಿಯ ಸಂವರ್ಧನೆಗೆ ಶಿಕ್ಷಣವು ಪೋಷಕವಾಗಬೇಕೆ ಹೊರತು ಮಾರಕ ವಲ್ಲ ಎಂಬುದು ಅವರ ಅಭಿಪ್ರಾಯ. ಅವರ ಮಾತಿನಲ್ಲಿಯೇ ಕೇಳಿ.

"ಶಿಕ್ಷಣದಲ್ಲಿ ಕಾಯಕ ತತ್ವವನ್ನು ಅಳವಡಿಸಿಕೊಳ್ಳದೆ ನಮ್ಮ ಸಾಮಾಜಿಕ ಆರ್ಥಿಕ ಹಾಗೂ ನೈತಿಕಮಟ್ಟ ಎಂದೆಂದಿಗೂ ಸುಧಾರಿಸುವಂತಿಲ್ಲ. ಸದ್ಯದ ಶಿಕ್ಷಣ ಸತ್ವಹೀನರಾದ ತತ್ವರಹಿತರಾದ ತೇಜೋವಿಹೀನರಾದ ನಿರುಪಯೋಗಿ ನಿರುದ್ಯೋಗಿ ತರುಣರನ್ನು ತಯಾರಿಸುವದಾಗಿದೆ. ಆದುದರಿಂದಲೇ ಸಮಾಜ ದಲ್ಲಿ ಶೋಷಣೆ ಬೀಡುಬಿಟ್ಟಿದೆ, ಮತ್ಸರ ತಾಂಡವವಾಡುತ್ತಿದೆ, ಅಶಾಂತಿ ಹರಡಿದೆ. ನಿಜವಾದ ನೆಮ್ಮದಿ ಕನಸಿನ ಕುಸುಮವಾಗಿದೆ. ಬದುಕು ಸಂಪ ದ್ಯುಕ್ತವಾಗುವಂತಹ ಸತ್ವಶಾಲಿ ಶಿಕ್ಷಣ ನಮಗಿಂದು ಬೇಕಾಗಿದೆ. ಕೇವಲ ನೌಕರಿಗಾಗಿ ಪರದಾಡುವ ಪೋಕರಿಗಳನ್ನು ನಿರ್ಮಾಣ ಮಾಡುವ ಅನಿಷ್ಟವಾದ ಈ ಶಿಕ್ಷಣ ತೊಲಗಬೇಕು. ನೈತಿಕ ಧೈರ್ಯವನ್ನು ಹೆಚ್ಚಿಸಿ ಸ್ವಂತ ದುಡಿಮೆ ಯಿಂದ ಜೀವನವನ್ನು ಸಾಗಿಸುವ ಸ್ವಾವಲಂಬಿ ನಾಗರಿಕರನ್ನು ತರಬೇತುಗೊಳಿ ಸುವ ಶಿಕ್ಷಣ ನಮಗಿಂದು ಬೇಕು. ಆದರಿಂದ ನಾಡು ಬದುಕೀತು !'

(೭-೪-೧೯೭೦)

ಕರ್ತವ್ಯವನ್ನು ಏಕಚಿತ್ತದಿಂದ ಮಾಡುವದು ಅವರಲ್ಲಿ ರಕ್ತಗತವಾಗಿ ಬೆಳೆದು ಬಂದಿತ್ತು. ಅಪ್ಪಿತಪ್ಪಿ ಕರ್ತವ್ಯವಿಮುಖರಾದಾಗ ಅವರಿಗೆ ಜೀವನ ದಲ್ಲಿ ಸೊಬಗೇ ಕಾಣದಂತಾಗುತ್ತಿತ್ತು :

"ತುಸು ಹೆಚ್ಚು ಶಕ್ತಿ ಬಂದಂತಾಗಿ ಗುಣಮುಖವಾಗಿತ್ತು. ಹಾಯ ಸ್ಕೂಲಿಗೂ ಒಂದು ತಾಸು ಹೋಗಿ ಬಂದೆ. XI (P. U. C.) ವರ್ಗದ ಒಂದು ಪೀರಿಯಡ್‌ನ್ನು ತೆಗೆದುಕೊಂಡೆ, 'ಮಾಯಾ ಕೋಲಾಹಲ'. ಈ ಕರ್ತವ್ಯವನ್ನು ನಿರ್ವಹಿಸಿ ಪಾಠ ಹೇಳಿಕೊಟ್ಟ ಬಗ್ಗೆ ಮನಸ್ಸಿಗೆ ತುಂಬಾ ಸಂತೋಷವೆನಿಸಿತು. ಪರಿಣಾಮವಾಗಿ ಮನೆಯಲ್ಲಿ ನಾಲ್ಕು ದಿನಗಳಿಂದ ಮಾಡದೆ ಇದ್ದ ಊಟ ಮಾಡಿದೆ." (೨೨-೧-೧೯೭೦)

ಮೇಲಧಿಕಾರಿಗಳಲ್ಲಿ ಕಂಡುಬಂದ ಆಲಸಿ ಪ್ರವೃತ್ತಿಯನ್ನು ನೋಡಿದಾಗ ಇಂಚಲರಿಗೆ ಬಹು ಬೇಸರವಾಗುತ್ತಿತ್ತು, ಒಂದು ದಿನಚರಿಯಲ್ಲಿ ಅದನ್ನು ಅವರು ಹೀಗೆ ವ್ಯಕ್ತಪಡಿಸಿದ್ದಾರೆ :

"ಆಫೀಸಿನ ಅತಿ ವಿಲಂಬ ಧೋರಣೆ ಔದಾಸೀನ್ಯಕ್ಕೆ ಇಳಿದದ್ದು ವಿಷಾದದ ಸಂಗತಿ........ಆಫೀಸಿನ ಸಿಬ್ಬಂದಿಯವರಿಗೆ ಅಂಕುಶವೇ ಇಲ್ಲದಾಗಿದೆ. ಇದೇನು ಆಡಳಿತೆಯ ಶೈಥಿಲ್ಯವೋ ? ಏನೂ ತಿಳಿಯದಾಗಿದೆ. ಇದನ್ನು ಸುಧಾರಿಸುವ ದೆಂತು ? ಯಾವಾಗ ?" (೨೩-೧-೧೯೭೦)

ಇಂಚಲರು ಕಟ್ಟೆದೆಯ ಕನ್ನಡಿಗರು. ಕರ್ನಾಟಕ ವಿಶ್ವವಿದ್ಯಾಲಯದ ೨೦ನೆಯ ಘಟಿಕೋತ್ಸವದಲ್ಲಿ ಸಿನೇಟಿ ಸದಸ್ಯರಾಗಿ ಅವರು ಭಾಗವಹಿಸಿದ್ದರು. ಉಪಕುಲಪತಿಗಳು ಕನ್ನಡದಲ್ಲಿ ಸ್ವಾಗತಿಸಿ ಮಾತನಾಡಿದ ಪ್ರಸಂಗವನ್ನು 'ಈ ಕಳೆದ ವಾರದಲ್ಲಿ ಜರುಗಿದ ಮಹತ್ವದ ಘಟನೆಗಳು' ಎಂಬ ಶೀರ್ಷಿಕೆಯ ಕೆಳಗೆ ಹೀಗೆ ಬರೆದಿದ್ದಾರೆ :

" ಅವರ ಕನ್ನಡ ಸಹಿಸಲಸಾಧ್ಯವಾದ ಕನ್ನಡ . . . . "
(೪-೧-೧೯೭೦).

ಕನ್ನಡವನ್ನು ಕೆಡಿಸದೆ ಸುಂದರವಾಗಿ ಮಾತನಾಡಬೇಕೆಂಬುದೇ ಈ ಮಾತಿನ ಸ್ಪಷ್ಟವಾದ ಉದ್ದೇಶ. ಯಾರಾದರೂ ಕನ್ನಡದ ಭಾಷಾಸೌಂದರ್ಯ ವನ್ನು ಕೆಡಿಸಿ ಮಾತನಾಡಿದರೆ ಅವರು ಮನಸ್ಸಿನಲ್ಲಿಯೇ ಕಳವಳಪಡುತ್ತಿದ್ದರು. ಅಂತಹ ಅಪ್ರತಿಮ ಕನ್ನಡ ನಿಷ್ಠೆ ಅವರದು.

ಇಂಚಲರು ಚಲನಚಿತ್ರಪ್ರಿಯರು. ಅನೇಕ ಚಲನಚಿತ್ರಗಳನ್ನು ನೋಡಿ ದ್ದಾರೆ. ಅದರಲ್ಲೂ ಕನ್ನಡ ಚಿತ್ರಗಳೆಂದರೆ ತುಂಬಾ ಪ್ರೀತಿ. ಒಮ್ಮೆ ಅವರು 'ರಾಜಕುಮಾರ' ಎಂಬ ವರ್ಣರಂಜಿತ ಕನ್ನಡ ಚಿತ್ರವನ್ನು ನೋಡಲು ಹೋಗಿದ್ದರು.

"ಚಿತ್ರದ ಬಹುಭಾಗವು 'ಸ್ಟಂಟ್' ದೃಶ್ಯಗಳಿಂದ ಕೂಡಿದ್ದರಿಂದ ಆಕರ್ಷಣೀಯವಾಗಿರಲಿಲ್ಲ. ಏನೋ ಕನ್ನಡ ಚಿತ್ರವೆಂಬ ಅಭಿಮಾನದಿಂದ ಅದನ್ನು ಕೊನೆಯವರೆಗೆ ಕುಳಿತು ನೋಡಿದ್ದೇ ನೋಡಿದ್ದು." (೪-೯-೧೯೭೦)

'ಮುಕ್ತಿ' ಚಲನಚಿತ್ರವನ್ನು ನೋಡಿ ಹೀಗೆ ಬರೆದಿದ್ದಾರೆ :

"... ಕಥೆಯು ವೇಶ್ಯಾ ಸಮಸ್ಯೆಯೊಂದರ ಸುತ್ತಲೂ ಹೆಣೆದುದಾಗಿದೆ. ಇಂದಿನ ಸಮಾಜದಲ್ಲಿ ತಲೆದೋರಿದ ಒಂದು ಜಟಿಲ ಸಮಸ್ಯೆಗೆ ಪರಿಹಾರ ಸೂಚಿಸಲೆಂದು ಎತ್ತಿಕೊಳ್ಳಲಾದ ಈ ಸನ್ನಿವೇಶ ಯಾವ ಪರಿಹಾರವನ್ನೂ ನೀಡಲು ಸಮರ್ಥವಾಗಿಲ್ಲವೆಂದೇ ಹೇಳಬೇಕು. ಒಬ್ಬ ವೇಶ್ಯೆಯ ಒಬ್ಬಳೇ ಮಗಳ ಜೀವನದ ದುರಂತತೆಯನ್ನು ಮನಕರಗುವಂತೆ ಚಿತ್ರಿಸಲಾಗಿದೆ. ಮಗಳ ಪಾತ್ರದಲ್ಲಿ ನುರಿತ ತಾರೆ ಕಲ್ಪನಾ ಬಹು ಮಾರ್ಮಿಕವಾಗಿಯೂ ಗಂಭೀರವಾಗಿಯೂ ಅಭಿನಯಿಸಿದ್ದಾಳೆ. ಅವಳ ಬಾಳಿಗೆ ಎರಗಿದ ಸಿಡಿಲಾಕಾರದ ದುಃಖಗಳು ನಮ್ಮ ಕರುಳನ್ನು ಹಿಂಡಿ, ನಮ್ಮನ್ನು ದುಃಖದ ಅಂಚಿಗೆ ಎಸೆಯುವಂತಾಗುತ್ತದೆ. ಚಿತ್ರ ತುಂಬಾ ಪರಿಣಾಮಕಾರಿಯಾಗಿದೆ. ಉಳಿದ ಪಾತ್ರಗಳೂ ಜೀವಂತವಾಗಿವೆ. ಇಂಥ ಸುಂದರ ಚಿತ್ರವನ್ನು ಶ್ರೀ. ವ್ಹಿ. ಎಂ. ಇನಾಮದಾರರ ಕಾದಂಬರಿಯೊಂದರ ಆಧಾರದ ಮೇಲೆ ರಚಿಸಿರುವದು ಅತ್ಯಂತ ಯಶಸ್ವಿಯಾಗಿದೆಯೆಂದು ಹೇಳಲಡ್ಡಿಯಿಲ್ಲ."

(೨೦-೧-೧೯೭೧)

'ಎರಡು ಮುಖ' ಕಂಡು—

"ಚಿತ್ರ ತುಂಬ ಸೊಗಸಾಗಿದೆ. ಅತ್ಯಂತ ಪರಿಣಾಮಕಾರಿಯಾಗಿದೆ. 'ಜಯಂತಿ' ಈ ಚಿತ್ರದ ಪ್ರಾಣವಾಗಿದ್ದಾಳೆ. ಅವಳ ಅಭಿನಯ ತುಂಬಾ ಹಿಡಿಸುತ್ತದೆ. ಅದರಲ್ಲಿ ಮನೋವಿಜ್ಞಾನ ವಿಶ್ಲೇಷಕನಾದ ಡಾಕ್ಟರರ ಪಾತ್ರವನ್ನು ಶ್ರೀ. ಸಂಪತ್ಕುಮಾರರು ಬಹು ಚೆನ್ನಾಗಿ ಅಭಿನಯಿಸಿದ್ದಾರೆ. ಶ್ರೀ. ಅಶ್ವತ್ಥರೂ ಅಷ್ಟೇ ಸುಂದರವಾಗಿ ಅಭಿನಯಿಸಿದ್ದಾರೆ. ಹೊಸಬಗೆಯಾದ ಈ ಚಿತ್ರ ಅಪೂರ್ವವಾದ ಯಶಸ್ಸನ್ನು ಸಂಪಾದಿಸಿ ಖ್ಯಾತಿಯನ್ನು ಪಡೆದಿದೆ. ಕನ್ನಡದ ಕೀರ್ತಿಯನ್ನು ಬೆಳೆಸುವಲ್ಲಿ ಮುನ್ನಡೆದಿದೆಯೆಂದು ಹೇಳಬಹುದು."

(೨೧-೧-೧೯೭೧)

ಇದೇ ರೀತಿ 'ಶ್ರೀಕೃಷ್ಣದೇವರಾಯ', 'ಚಿಕ್ಕಮ್ಮ', 'ಪುನರ್ಜನ್ಮ', 'ಬಂಧನ' ಮೊದಲಾದ ಚಲನಚಿತ್ರಗಳನ್ನು ಕಂಡು ತಮ್ಮ ದಿನಚರಿಯಲ್ಲಿ ವಿಮರ್ಶಿಸಿದ್ದಾರೆ. ಕವಿಯ ವಿಮರ್ಶಕ ಬುದ್ಧಿಯೊಂದಿಗೆ ಸೂಕ್ಷ್ಮ ನಿರೀಕ್ಷಣಾ ದೃಷ್ಟಿ ಹಾಗೂ ರಸಿಕತೆ ಇಲ್ಲಿ ವ್ಯಕ್ತಗೊಂಡುದನ್ನು ಕಾಣಬಹುದು.

ಮೆಚ್ಚುಗೆ ಇಂಚಲರ ಜೀವನದ ಪ್ರಧಾನ ಗುಣ. ಅದು ದಿನಚರಿಯಲ್ಲಿ ಪರಿಣಾಮಕಾರಿಯಾಗಿ ವ್ಯಕ್ತವಾಗಿದೆ. ತಾವು ಮೆಚ್ಚಿದ ಅನೇಕ ವ್ಯಕ್ತಿಗಳ ಪ್ರಸ್ತಾಪ ಅಲ್ಲಲ್ಲಿ ಕಾಣಿಸಿಕೊಂಡಿದೆ. ಶ್ರೀಗಳಾದ ವೀರೇಂದ್ರ ಪಾಟೀಲ, ಎಸ್. ಶಿವಪ್ಪ, ಮಳಖ್ಳರ ಆನಂದರಾವ, ಜಿ. ನಾರಾಯಣ, ಪು. ತಿ. ನ., ಜಿ. ಪಿ. ರಾಜರತ್ನಂ, ಗೌರೀಶ ಕಾಯ್ಕಿಣಿ, ಡಿ. ಎಸ್. ಕರ್ಕಿ, ಕೃಷ್ಣಮೂರ್ತಿ ಪುರಾಣಿಕ ಮೊದಲಾದವರ ವಿಷಯವಾಗಿ ಅಲ್ಲಲ್ಲಿ ಉಲ್ಲೇಖ ಬರುತ್ತದೆ.

ಅಂದು ಮುಖ್ಯಮಂತ್ರಿಗಳಾಗಿದ್ದ ಶ್ರೀ. ವೀರೇಂದ್ರ ಪಾಟೀಲರು ೧೪-೨-೧೯೭೦ ರಂದು ಬೆಳಗಾವಿಯ ಕಾಂಗ್ರೆಸ ರಾಜಕೀಯ ಪರಿಷತ್ತಿನಲ್ಲಿ ಮಾಡಿದ ಭಾಷಣವನ್ನು ತುಂಬಾ ಮೆಚ್ಚಿಕೊಂಡು ಹೀಗೆ ಬರೆದಿದ್ದಾರೆ :

" ಅವರ ಭಾಷಣ ತುಂಬಾ ಉನ್ನತವೂ ಸ್ಫೂರ್ತಿದಾಯಕವೂ ಆಗಿತ್ತು. ಅವರ ನುಡಿ ಅವರ ನಡೆಗೆ ಸಾಕ್ಷಿ ನುಡಿಯುತ್ತಿತ್ತು. . . . " ಇತ್ಯಾದಿ.

ಎಪ್ರೀಲ ೨೮ ರಂದು ಬೆಳಗಾವಿಯಲ್ಲಿ ನಡೆದ ಗಡಿರಕ್ಷಣೆಯ ಬಗೆಗಿನ ಸರ್ವಪಕ್ಷೀಯ ಸಭೆಯಲ್ಲಿ ಮಾತನಾಡಿದ ಆಗ ವಿರೋಧಿ ಪಕ್ಷದ ನಾಯಕ ರಾಗಿದ್ದ ಶ್ರೀ. ಎಸ್. ಶಿವಪ್ಪನವರ ಭಾಷಣವನ್ನು ಮೆಚ್ಚಿಕೊಂಡು ಹೀಗೆ ಬರೆದಿದ್ದಾರೆ :

" ಅವರ ಮಾತಿನಲ್ಲಿ ಕನ್ನಡದ ಕೆಚ್ಚು ತುಂಬಿತ್ತು. ಅತ್ಯಂತ ಸಮರ್ಥ ವಾಗಿ ಸಮಂಜಸವಾಗಿ ಮಾತನಾಡಿ, ಕನ್ನಡಿಗರು ಅಭಿಮಾನದಿಂದ ಸಂಘಟಿತ ರಾಗಿ ಬರಲಿರುವ ಗಂಡಾಂತರವನ್ನು ಕೆಚ್ಚೆದೆಯಿಂದ ಎದುರಿಸಬೇಕೆಂದು ಒಳ್ಳೇ ಮಾರ್ಮಿಕವಾಗಿ ಹೇಳಿದರು......"

ರಾಜ್ಯ ಮಾಧ್ಯಮಿಕ ಸಂಘದ ಪ್ರಧಾನ ಕಾರ್ಯದರ್ಶಿಗಳೂ, ವಿಧಾನ ಪರಿಷತ್ತಿನ ಸದಸ್ಯರೂ ಆದ ಶ್ರೀ. ಮಳಖ್ಳರ ಆನಂದರಾಯರನ್ನು ಬೆಳಗಾವಿ ಯಲ್ಲಿ ೨೨-೭-೧೯೭೦ ರಂದು ಶಿಕ್ಷಕರ ಪರವಾಗಿ ಸತ್ಕರಿಸಿದಾಗ ಶ್ರೀ. ಇಂಚಲರು ಆಡಿದ ಪ್ರಶಂಸೆಯ ಮಾತುಗಳನ್ನು ಹೀಗೆ ಬರೆದಿಟ್ಟಿದ್ದಾರೆ :

" ಆನಂದರಾಯರ ಭಾಷಣ ತುಂಬಾ ಪರಿಣಾಮವನ್ನು ಬೀರಿತು. ಮಾಧ್ಯಮಿಕ ಶಿಕ್ಷಕರು ಒಂದೇ ಛತ್ರದ ಕೆಳಗೆ ಕೂಡದಿದ್ದರೆ ಅವರಿಗೆ ನಮ್ಮ

ರಾಜ್ಯದಲ್ಲಿ ಯಾವ ಸ್ಥಾನಮಾನಗಳೂ ಇಲ್ಲವೆಂಬ ನಗ್ನಸತ್ಯವನ್ನು ತೋರಿಸಿ ಕೊಟ್ಟರು, ಅವರೊಡನೆ ಸಹಕರಿಸಲು ಅಂದು ನಮ್ಮೆಲ್ಲರನ್ನೂ ಆವ್ಹಾನಿಸಿದರು. ಆದಕ್ಕೆ ನಮ್ಮ ಸಮ್ಮತಿಯೂ ಇದೆ."

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ೮-೪-೭೦ ರಂದು ಬೆಳಗಾವಿಯಲ್ಲಿ ಜಿಲ್ಲೆಯ ಬರಹಗಾರರ ಸಭೆ ಜರುಗಿತು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಜಿ. ನಾರಾಯಣರು, ಖ್ಯಾತ ಸಾಹಿತಿಗಳಾದ ಡಾ. ರಂ. ಶ್ರೀ. ಮುಗಳಿಯವರು, ಪರಿಷತ್ತಿನ ಕಾರ್ಯದರ್ಶಿ ಶ್ರೀ. ಹಂಪನಾಗರಾಜರು ಮೊದಲಾದವರು ಪಾಲ್ಗೊಂಡಿದ್ದರು. ಆ ಸಮಯದಲ್ಲಿ ಸ್ವಾಗತಿಸುತ್ತ ನಾರಾಯಣರ ಬಗೆಗೆ—

" ಇಂದು ಕನ್ನಡದ ನಾರಾಯಣನು ಎಚ್ಚತ್ತಿದ್ದಾನೆ..... ಇದು ಶುಭ ಲಕ್ಷಣ. ಅವರು ಕನ್ನಡಕ್ಕಾಗಿ ತನುಮನ ಧನಗಳನ್ನು ಸೂರೆ ಮಾಡಿದ ಧುರೀಣರು. ಅವರ ಮುಂದಾಳತ್ವದಲ್ಲಿ ಕನ್ನಡವು ರಾಜ್ಯದಲ್ಲಿ ತನ್ನ ಸ್ಥಾನ ಮಾನಗಳನ್ನು ಉಳಿಸಿ ಬೆಳಿಸಿ ಬೆಳಗಿಸಿಕೊಳ್ಳುವದೆಂದು ಹಾರೈಸಲಾಗಿದೆ.''

(೮-೪-೧೯೭೦)

ಶ್ರೀ. ಗೌರೀಶ ಕಾಯ್ಕಿಣಿಯವರ ' ವಿಚಾರವಾದ ' ವನ್ನು ಮೆಚ್ಚಿ ಹೀಗೆ ವಿಮರ್ಶಿಸಿದ್ದಾರೆ .

" ಶ್ರೀ. ಗೌರೀಶ ಕಾಯ್ಕಿಣಿಯವರು ಬರೆದ ' ವಿಚಾರವಾದ ' ಎಂಬ ಚಿಕ್ಕ ಹೊತ್ತಿಗೆಯನ್ನು ಅರ್ಧದಷ್ಟು ಓದಿದೆ. ವಿಷಯವನ್ನು ಅಚ್ಚುಕಟ್ಟಾಗಿ ಸುಂದರವಾದಿ ಸರಳವಾಗಿ ಅರಳಿಸಿದ್ದಾರೆ. ವಿಷಯ ತುಸು ಗಹನವೂ ಗೂಢವೂ ಆಗಿರುವದರಿಂದ ಭಾಷೆಯ ಬಿಗುವು ತುಸು ಹೆಚ್ಚಾಗಿದೆ. ಕಾವ್ಯಮಯವಾಗಿದೆ. ವಿಚಾರಸರಳತೆಯೂ ನುಡಿಗಳ ಬೆಡಗಿನಲ್ಲಿ ತುಸು ಗೂಢವಾದಂತೆ ಭಾಸವಾಯಿತು. ಆದರೂ ಇದೊಂದು ಉತ್ತಮ ಕೃತಿ." (೧೮-೧-೧೯೭೦)

ಒಂದು ಗ್ರಂಥವನ್ನು ಓದಲು ಪ್ರಾರಂಭಿಸಿದರೆ ಅದನ್ನು ಅವರು ಮುಗಿಸಿಯೇ ತೀರಬೇಕು. ' ವಿಚಾರವಾದ ' ಪುಸ್ತಕವನ್ನು ಕುರಿತು ಇಂಚಲರು ಪುನಃ ಹೀಗೆ ಟಿಪ್ಪಣಿ ಇಟ್ಟಿದ್ದಾರೆ :

' ವಿಚಾರವಾದ ಪುಸ್ತಿಕೆಯು ಕೊನೆಯರ್ಧವನ್ನು ಓದಿ ಮುಗಿಸಿದೆ, ' ವಿಚಾರವಾದ ' ಅದೆಷ್ಟು ಬೃಹತ್ತು ಮಹತ್ತುಗಳಿಂದ ಕೂಡಿದೆಯೆಂಬ .... ಅರಿವುಗಳು ಏಕಕಾಲಕ್ಕೆ ಮೂಡಿದವು. ವಿಚಾರ— ಶುದ್ಧ ವಿಚಾರ ಪರಿಶುದ್ಧ ಜೀವನದ ದಾರಿದೀಪ. ಈ ಶುದ್ಧ ಬುದ್ಧಿಗೆ ಇಂದು ಮಂಕು ಕವಿದಿದೆ. ಅದಕ್ಕೆ ಕಾರಣಗಳು. (೧) ಭಯ : ಸಾರ್ವಜನಿಕ ಅಭಿಪ್ರಾಯ ಭಯ, ಪರಂಪರೆಯ ಭಯ: ಪ್ರಜಾಸತ್ತೆಯ ರೋಗವಾದ ಬಹುಮತದ ವಜ್ರ ಮುಷ್ಟಿಯಿಂದ ಬುದ್ಧಿ ಮಂಕಾಗಿದೆ. ಉದಾ : ಚೀನ ದೊರೆಯ ಬಟ್ಟೆಯ ಹುಚ್ಚಿನ ಕಥೆಯಂತೆ ಇಂದು ನಾವಾಗಿದ್ದೇವೆ.

೨) ಪೂರ್ವಗ್ರಹಿಕೆ— ಇದು ದಶಮ ಗ್ರಹ. ಇದರ ಹಿಡಿತ ಭೂತದ ಹಿಡಿತ.

೩) ಅಜ್ಞಾನ ಇಲ್ಲವೆ ಅರೆಬರೆ ಜ್ಞಾನ, ಯಾರು ಯಾವ ಕ್ಷೇತ್ರದಲ್ಲಿ ಬಲ್ಲಿದರೆಂಬುವ ವಿಚಾರವಿಲ್ಲದೆ ಒಬ್ಬನೇ ಎಲ್ಲದರಲ್ಲಿ ತಜ್ಞನೆಂದು ನಂಬುವ ವಿಪರೀತ ಈಗ ನಡೆದಿದೆ. ರಾಜಕಾರಣಿಯು ಇಂದು ಬೇಕಾದ ಕ್ಷೇತ್ರದಲ್ಲಿ ಮಾರ್ಗದರ್ಶನವೀಯಬಲ್ಲನೆಂಬ ನಂಬಿಗೆ.

೪) ಸ್ವಾರ್ಥ— ಇದು ಇಂದು ಲೋಕವನ್ನೇ ಆಳುತ್ತಿದೆ. ಅಳೆಯುತ್ತಿದೆ.

೫) ' ನಮ್ಮ ಜಗತ್ತಿನ ಅಭಿನಿವೇಶನ '— ನಮ್ಮ ವಿಚಾರಗಳನ್ನೇ ಆದರಿಸುವವರನ್ನು ಕೂಡಿಸಿಕೊಂಡ ನಮ್ಮದೇ ಲೋಕದ ಅಭಿಪ್ರಾಯದಲ್ಲಿ ಮುಳುಗೇಳುವದು.

೬) ಆತ್ಮವಂಚನೆಯ ವಿತರ್ಕ.

೭) ಮನೋದೌರ್ಬಲ್ಯ— ಇದರಿಂದ ನಮ್ಮ ಮನಸ್ಸು ನಮ್ಮದಾಗಿರುವದಿಲ್ಲ. ಪರರ ವಸ್ತುಗಳಿಂದ ತಮ್ಮ ಕೋಣೆಯನ್ನು ಸಿಂಗರಿಸಿಕೊಂಡಂತೆ. ನಾಟಕದ ಭರ್ಜರಿ ಬಣ್ಣಬಟ್ಟೆಗಳಂತೆ ಕ್ಷಣಿಕ.

೮) ಭಾವೋದ್ರೇಕ— ಇದರಿಂದ ನಾವು ವಿಚಾರ ಆಚಾರಗಳಲ್ಲಿ ತೂಕ ತಪ್ಪಿ ನಡೆಯುತ್ತೇವೆ. ನೆಹರೂರು ನಾಸ್ತಿಕ ವಾದವನ್ನು ಹೇಳಿದರೆ ನಾವೇಕೆ

ಹೇಳಬಾರದು ಎನ್ನುವ ರೀತಿಯಿದು. ಶಾಖಾಹಾರಿ ಯುರೋಪಿನವನು ನಮ್ಮವರಿಗೆ ಹುಲ್ಲು ತಿನ್ನುವ ಹುಲಿಯಂತೆ ಸೋಜಿಗವಾಗಿ ಕಾಣುತ್ತಾನೆ. ಹಕ್ಕಿಯನ್ನು ಗುಂಡಿಕ್ಕಿ ಕೊಲ್ಲುವ ಮನುಷ್ಯ ಅದರ ರೆಕ್ಕೆಗೆ ಹತ್ತಿದ ರಕ್ತವನ್ನು ಕಂಡು ಕರುಣೆಯನ್ನು ಕರೆಯುವಂತಿದೆ ಇದು.

೯) (Wish full Thanking) ಆಕ್ಷೇಪಾರ್ಹ ಕೃತಿಯಾಗಿದೆ."
(೧೯-೧-೧೯೭೦)

ಶ್ರೀ. ಜಿ. ಪಿ ರಾಜರತ್ನಂ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕೊಟ್ಟ 'ಧರ್ಮ' ಪದದ ಭಾಷಣದಿಂದ ಇಂಚಲರು ಕೆಳಗಿನಂತೆ ಟಿಪ್ಪಣಿ ಇಟ್ಟುಕೊಂಡಿದ್ದಾರೆ.

**"ಸುಖವೆಂದರೇನು ?** ಯಾವುದನ್ನು ಪಡೆಯುವದರಿಂದ ತೃಪ್ತಿ ಸಿಕ್ಕುತ್ತದೆಯೊ. ಅದೇ ಸುಖ.

**'ಪಾಪ'?** ಯಾವ ಕರ್ಮವನ್ನು ಮಾಡುವದರಿಂದ ಅದರ ಫಲವನ್ನು ಅನುಭವಿಸುವಾಗ ನೀನು ಕಷ್ಟಪರಂಪರೆಯನ್ನು ಅನುಭವಿಸಬೇಕಾಗುತ್ತದೆಯೋ, ಆ ಕರ್ಮಕ್ಕೇನೇ 'ಪಾಪ' ವೆಂದು ಭಗವಾನ್ ಬುದ್ಧನು ಹೇಳಿದ್ದಾನೆ.

**'ಪುಣ್ಯ'** ಯಾವ ಕರ್ಮವನ್ನು ಮಾಡುವಿಯೋ, ಅದನ್ನು ಅನಂತರದಲ್ಲಿ, ಅದರ ಫಲವನ್ನು ಅನುಭೋಗಿಸುವಾಗ ತೃಪ್ತಿ ಅಥವಾ ಆನಂದವಾಗುತ್ತದೆಯೋ ಆ ಕರ್ಮವೇ ಸತ್‌ಕರ್ಮ ಅಥವಾ ಪುಣ್ಯವೆನ್ನುವರು.

ಸುಖದ ಹಂತಗಳು ಅನಂತ, ಅಂತಹುಗಳಲ್ಲಿ ಹೆಚ್ಚಿನ ಮಟ್ಟದ ಸುಖವೇ ಆತ್ಮಸುಖ, ಮೋಕ್ಷವೆಂದರೂ ಸಲ್ಲುವದು. ದುಃಖಗಳನ್ನು ತರುವಂತಹ ಕರ್ಮವನ್ನು ಮಾಡದಿರುವುದು ಒಂದು ಬಗೆಯಾದ ತೃಪ್ತಿ ಅರ್ಥಾತ್ ಸುಖ. ಇದು 'negative happiness' ಎಂದು ಅನ್ನುತ್ತಾರೆ. ಮುಂದಿನ ರವಿವಾರ ೯-೧೫ ಕ್ಕೆ ಮತ್ತೆ ಅವರ ಭಾಷಣವನ್ನು ಕೇಳಬಹುದು." (೧೮-೧-೧೯೭೦)

ಒಮ್ಮೆ ಡಾ. ಡಿ. ಎಸ್. ಕರ್ಕಿಯವರು ಬೆಳಗಾವಿಗೆ ಬಂದು ಅವರನ್ನು ಕಂಡಾಗ ಸಂತೋಷವನ್ನು ಅನುಭವಿಸಿ ಈ ಮಾತು ಬರೆದಿದ್ದಾರೆ.

"ಡಾ. ಡಿ. ಎಸ್. ಕರ್ಕಿಯವರು ಆಫೀಸಿನಲ್ಲಿ ಭೆಟ್ಟಿಗಾಗಿ ಕಾದಿದ್ದರು. ಅವರನ್ನು ಕಂಡು ಸಂತೋಷವಾಯಿತು. ಅವರು ಬರುವ ತಿಂಗಳು ವಿಶೇಷ ಆಮಂತ್ರಣದ ಮೇರೆಗೆ ರಶಿಯಾ, ಫ್ರಾನ್ಸ ದೇಶಗಳಿಗೆ ಸಂದರ್ಶನವನ್ನೀಯುವ ವರಿದ್ದಾರೆ. ಸಂತೋಷ. ಜೀವನದಲ್ಲಿ ಇದೊಂದು ಅಪೂರ್ವಯೋಗ ಅವರಿಗೆ ಲಭಿಸಿದೆ." (೨೪-೧-೧೯೭೦)



ಜೀವಿತಾವಧಿಯಲ್ಲಿ ದೇಶಗಳಿಗೆ ಪ್ರಯಾಣ ಬೆಳಸುವ ಯೋಗ ಇಂಚಲರಿಗೆ ಬರಲಿಲ್ಲ. ಆದರೆ ತಮ್ಮ ಸ್ನೇಹಿತರಿಗೆ ಇಂತಹ ಯೋಗ ಲಭಿಸಿದಾಗ ತಮಗೆ ಆ ಯೋಗ ದೊರಕಿದಷ್ಟು ಒಂದು ತರದ ಅಪೂರ್ವ ಆನಂದವನ್ನು ಅನುಭವಿಸುತ್ತಿದ್ದರು,

ಸಾಹಿತಿಗಳೆಂದರೆ ಪಂಚಪ್ರಾಣ. ಭೆಟ್ಟಿಯ ಅವಕಾಶಗಳು ಒದಗಿ ಬಂದಾಗ ಎಂದೆಂದಿಗೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಇಂತಹದೇ ಒಂದು ಪ್ರಸಂಗವನ್ನು ಹೀಗೆ ಟಿಪ್ಪಣಿ ಮಾಡಿಕೊಂಡಿದ್ದಾರೆ :

"... ಇಂದು ೪-೩೦ ಗಂಟೆಗೆ ಶ್ರೀ. ಕೃಷ್ಣಮೂರ್ತಿ ಪುರಾಣಿಕರು ಲಿಂಗರಾಜ ಕಾಲೇಜ ಕರ್ನಾಟಕ ಸಂಘಕ್ಕೆ ಉಪನ್ಯಾಸವೀಯಲು ಬರುವವರಿದ್ದಾರೆ. ಅವರನ್ನು ಕಾಣಬೇಕು." ೫-೧೨-೧೯೭೦)

"ಡಾ. ಸದಾನಂದ ನಾಯಕರವರ ಜೊತೆಯಲ್ಲಿ ಈ ನಮ್ಮ ಪ್ರವಾಸವು ತುಂಬಾ ಉತ್ತೇಜನಕರವಾಗಿ ಸಾಗಿತು. ಬಹಳ ದಿನಗಳಿಂದ ಬಾಕಿ ಉಳಿದಿದ್ದ ಮಾತುಗಳನ್ನು ಯಥೇಚ್ಛವಾಗಿ ಮಾತನಾಡಿದೆವು. ಹರಟೆ ಉದ್ಬೋಧಕವೂ, ಅನುಭವಪೂರ್ಣವೂ ಆಗಿತ್ತು. ಹೀಗೆ ಎರಡು ದಿನಗಳನ್ನು ಎರಡು ನಿಮಿಷಗಳಂತೆ ಕಳೆದೆವು. ಇಂಥ ದಿನಗಳೇ ನಮ್ಮ ಆಯುಷ್ಯದ ಅತಿ ಮುಖ್ಯ ದಿನಗಳೆಂದು ಹೇಳಬಹುದು. ಇಂಥ ಪ್ರಸಂಗಗಳೂ ಸನ್ನಿವೇಶಗಳೂ ನಮ್ಮನ್ನು ಚಿಂತನಶೀಲರನ್ನಾಗಿ ಮಾಡಿ ನಮ್ಮನ್ನು ಉನ್ನತ ವಿಚಾರದತ್ತ ಕೊಂಡೊಯ್ಯುತ್ತವೆ."
(೯-೭-೧೯೭೦)

ಡಾ. ನಾಯಕರೊಂದಿಗೆ ಶ್ರೀ. ವ್ಹಿ. ಎಸ್. ಕುಲಕರ್ಣಿಯವರ 'ಆಧುನಿಕ ಶಿಕ್ಷಣದ ಅರ್ಥವಿಸ್ತಾರ ' ಎಂಬ ಗ್ರಂಥವನ್ನು ಉದ್ಘಾಟಿಸಲು ಶ್ರೀ. ಇಂಚಲರು

ರಾಮದುರ್ಗಕ್ಕೆ ಹೋಗಿದ್ದರು. ಆ ಪ್ರವಾಸದ ವರ್ಣನೆಯಿದು. 'ಸ್ನೇಹಿತರೊಂದಿಗಿನ ಪ್ರವಾಸಗಳು ನಮ್ಮನ್ನು ಚಿಂತನಶೀಲರನ್ನಾಗಿ ಮಾಡಿ ಉನ್ನತವಾದ ವಿಚಾರದತ್ತ ಕೊಂಡೊಯ್ಯುತ್ತವೆ, ಸ್ನೇಹದ ವಲಯವನ್ನು ಸಾಕಷ್ಟು ವಿಸ್ತಾರಗೊಳಿಸುತ್ತವೆ,' ಎಂಬುದು ಅವರ ಅಭಿಪ್ರಾಯವಾಗಿತ್ತು.

ಓರ್ವ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ಕುರಿತು ಈ ರೀತಿ ಬರೆದಿದ್ದಾರೆ :

" ಶ್ರೀ. ರಾಚಣ್ಣವರು ಓರ್ವ ಒಳ್ಳೇ ಶಿಕ್ಷಕರು. ಸೋಲರಿಯದ ಕಾರ್ಯಕರ್ತ......ಇಂಥ ಶಿಕ್ಷಣ ಕಾರ್ಯದಲ್ಲಿ ಅವರು ಸಾಧಿಸಿದ ಕಾರ್ಯಬಾಹುಳ್ಯವನ್ನೂ ಗ್ರಾಮವಾಸಿಗಳ ಮೇಲೆ ಅವರಿಗಿರುವ ಪ್ರಭಾವವನ್ನೂ ನೋಡಿ ಅವರ ಬಗೆಗೆ ಅತ್ಯಂತ ಹೆಮ್ಮೆ ಅನಿಸಿತು......" (೨೨-೨-೧೯೭೦)

ಸಭೆ ಸಮಾರಂಭಗಳಲ್ಲಿ ಪೂಜೆ ಪುನಸ್ಕಾರಗಳಲ್ಲಿ ನೀತಿಬೋಧಕ ಕಥೆಗಳನ್ನು ಹೇಳಿ ರಂಜಿಸುತ್ತಿದ್ದರು. ಇತರರ ಬಾಯಿಂದ ಕೇಳಿದ, ಓದಿದ ಕಥೆಗಳನ್ನವರು ತಮ್ಮ ದಿನಚರಿ ಪುಸ್ತಕದಲ್ಲಿ ಗುರುತು ಹಾಕಿಕೊಂಡು ಇಡುತ್ತಿದ್ದರು. ೧೯೭೦ರ ಅಗಸ್ಟ ೨೧ ರಂದು ಮನೆಯಲ್ಲಿ ಸಂಪತ್ ಶುಕ್ರವಾರದ ಲಕ್ಷ್ಮೀಪೂಜೆ ವಿಜೃಂಭಣೆಯಿಂದ ಜರುಗಿದಾಗ ಇಂಥದೇ ಒಂದು ಕಥೆಯನ್ನು ಅವರು ಹೇಳಿರಬೇಕು. ಅದು ಹೀಗಿದೆ :

" ಮನೆಯಲ್ಲಿ ಇಂದು ಸಂಪತ್ ಶುಕ್ರವಾರದ ಲಕ್ಷ್ಮೀಪೂಜೆ ಒಳ್ಳೇ ವಿಜೃಂಭಣೆಯಿಂದ ನಡೆಯಿತು. ಸ್ಮರಣೆಗಾಗಿ ಶ್ರೀ ನವರತ್ನರಾಮರಾಯರ ಕತೆ.

ಶ್ರೀ ಮನ್ನಾಲ್ಮಡಿ ಕೃಷ್ಣರಾಜ ಒಡೆಯರು ಮೈಸೂರ ಅವರ ಕಾಲದಲ್ಲಿ ರಾಜ್ಯ ಮುಖ್ಯ ಅಧಿಕಾರಿಗಳಾಗಿದ್ದ ನವರತ್ನ ರಾಮರಾಯರು, ಹಳೆ ಮೈಸೂರಿನಲ್ಲಿ ಹಳ್ಳಿಗಾಡಿನ ಜನರಿಗೆ ರಸ್ತೆ, ನೀರು, ನೀರಾವರಿ ಮುಂತಾದ ಪ್ರಗತಿಗೆ ತುಂಬಾ ಮುತುವರ್ಜಿಯಿಂದ ಸೇವೆಸಲ್ಲಿಸಿದ ಮಹನೀಯರು. ಒಂದು ಸಲ ಹಾಸನದಿಂದ ಮೈಸೂರಿಗೆ ಹೋಗುತ್ತಿದ್ದರು. ಅಲ್ಲಿ ದಾರಿಯಲ್ಲಿ ದೋರಗಡ ಎಂಬ ಹಳ್ಳಿಯ ಬದಿಗೆ ಒಂದು ಬಾವಿ. ಹೆಂಗಳೆಯರು. ಅವರ ಕಾರಿಗೆ ನೀರು

ಬೇಕಾಗಿತ್ತು. ಆ ಹೆಂಗಳೆಯರನ್ನು 'ಚೆರಿಗೆ' ಕಡವಾಗಿ ಕೊಡಲು ವಿನಂತಿಸಿಕೊಂಡರು. ಅವರಲ್ಲಿ ಒಬ್ಬರು ಚೆರಿಗೆ ತುಂಬ ನೀರನ್ನು ಸೇದಿಕೊಟ್ಟರು. ಅದರಿಂದ ಉಪಕೃತರಾದ ರಾಯರು ಅವಳಿಗೆ ಒಂದು ಕಾಸು ಕೊಡಹೋದರು. ಅವಳು "ನಾವೇನು ಶಹರದವರೇ, ನೀರು ಮಾರಲಿಕ್ಕೆ" ಎಂದು ನಿರಾಕರಿಸಿದಳು. ಇಷ್ಟು ಕಷ್ಟ ಪಟ್ಟು ಆಳವಾದ ಬಾವಿಯಿಂದ ನೀರು ಸೇದಿ ಕೊಟ್ಟದ್ದಕ್ಕಾಗಿ ಪ್ರತಿಫಲವೆಂದು ಕೊಡಬಯಸಿದೆ ಅಷ್ಟೆ. ಅಂದರು ರಾಯರು. ಆಗ ಒಬ್ಬ ಮುದುಕಿ ಅಂದಳು "ಇದೇನು ಕಷ್ಟಬಂತು ಸ್ವಾಮಿ, ೨೦ ವರ್ಷಗಳ ಹಿಂದೆ ೨ ಹರದಾರಿ ಹೋಗಿ ನೀರು ತರಬೇಕಾದರೆ ನಮಗೆ ಕಣ್ಣೀರು ಬರುತ್ತಿತ್ತು ಆಗ ಉದಾರಿಗಳಾದ ಅಧಿಕಾರಿಗಳೊಬ್ಬರು ಇದ್ದರು, ಅವರ ಹೆಸರು ನವರತ್ನ ರಾಮರಾಯರು. ಅವರ ಪುಣ್ಯದಿಂದ ಈ ಬಾವಿ ಕಡಿಸಿಕೊಟ್ಟರು. ಅವರು ಈಗೆಲ್ಲಿಯೋ ನಮಗೆ ಗೊತ್ತಿಲ್ಲ. ಅವರ ಹೊಟ್ಟೆ ತಣ್ಣಗೆ ಇರಲಿ' ಎಂದು ಹರಸಿದಳು. ಇವರೇ ಆ ನವರತ್ನ ರಾಮರಾಯರೆಂದು ಅಕೆಗೇನು ಗೊತ್ತು!"

(೨೧-೮-೧೯೭೦)

ಶ್ರೀ. ಎಸ್. ಡಿ. ಇಂಚಲರು ಪ್ರತ್ಯಕ್ಷವಾಗಿ ರಾಜಕಾರಣದಲ್ಲಿ ಎಂದೂ ಭಾಗವಹಿಸಿದವರಲ್ಲ. ಅವರು ಸಾಹಿತಿಗಳು, ಎಂತಲೇ ರಾಜಕಾರಣದಲ್ಲಿ ಅವರಿಗೆ ಆಸಕ್ತಿಯೂ ಇತ್ತು. ರಾಜಕೀಯ, ಸಾಹಿತ್ಯ ಇವೆರಡೂ ಸಮಾಜಪುರುಷನ ಎರಡು ಕಣ್ಣುಗಳು ಎಂದು ಅವರು ಬಗೆಯುತ್ತಿದ್ದರು. ಈ ಎರಡೂ ಕಣ್ಣುಗಳ ದೃಷ್ಟಿ ಕೇಂದ್ರೀಕೃತವಾದಾಗ ಅದ್ಭುತವಾದ ಪ್ರಗತಿಸಾಧ್ಯವೆಂದು ಅವರು ನಂಬಿದ್ದರು, ಎಂತಲೇ ಪ್ರಸಕ್ತ ರಾಜಕೀಯದಲ್ಲಿ ತೋರಿಬರುವ ಕೊಳೆಯನ್ನು ಕಂಡಾಗ ಅವರ ಮನಸ್ಸು ಖಿನ್ನವಾಗುತ್ತಿತ್ತು: ಅವರು ಬರೆದಿಟ್ಟ ಕೆಲವು ಉದಾಹರಣೆಗಳು:

"......ಇಂದಿನ ವಿಚಿತ್ರ ರಾಜಕೀಯ ವಾತಾವರಣದಲ್ಲಿ ಏನು ಬೇಕಾದರೂ ನಡೆಯಬಹುದು. ಕನ್ನಡಿಗರ ಕಣ್ಣಾದ ಬೆಳಗಾವಿಯನ್ನು ಭುವನೇಶ್ವರಿಯೆ ಕಾಪಾಡಬೇಕು. 'ಸಿಂಡಿಕೇಟ' ಕಾಂಗ್ರೆಸ್ಸಿನ ಮೇಲಿನ ಸೇಡನ್ನು ಈ ರೀತಿ ತೀರಿಸಿಕೊಳ್ಳುವ ಹೊಂಚು ನಡೆದರೆ ಬೇಲಿಯೆ ಹೊಲವನ್ನು ಹಾಳು ಮಾಡಿದಂತೆ, ಕಾಲಾಯ ತಸ್ಮೈಯ ನಮಃ" (೩೦-೨-೧೯೭೦)

……. ಅಮೇರಿಕಾ ರಶಿಯಾ ಮೊದಲಾದ ದೇಶಗಳಲ್ಲಿ ವಿಜ್ಞಾನ ಸುಖ ಸೌಕರ್ಯಗಳನ್ನು ನಿರ್ಮಿಸಿದೆ. ಅಮೇರಿಕನ್ನನ ವಾರ್ಷಿಕ ಆದಾಯ ೧೦,೦೦೦ ರೂ. ಗಳಾದರೆ, ಇಂಗ್ಲಂಡಿನದು ತಲೆಗೆ ೭೦೦೦, ರಶಿಯಾ ೮೦೦೦ ಬ್ರಹ್ಮದೇಶ ೮೦೦ ರೂ. ಆದರೆ ಭಾರತೀಯನ ವಾರ್ಷಿಕ ಉತ್ಪನ್ನ ಕೇವಲ ೩೭೫ ರೂ. ಅದರಿಂದ ಭಾರತದ ಬಡತನದ ಕಲ್ಪನೆ ಬರುವಂತಿದೆ. ಈ ದೇಶದ ಜನ ಘನ ವಂತರಾಗಬೇಕಾದರೆ ದುಡಿಯಲು ಕಲಿಯಬೇಕು. ದೇಶದ ಸಂಪತ್ತನ್ನು ಹೆಚ್ಚಿ ಸಲು ಕೃಷಿಕೈಗಾರಿಕೆಗಳನ್ನು ಹಾಸು ಹೊಕ್ಕಾಗಿ ಹಬ್ಬಿಸಬೇಕು. ಅಂದರೆ ಮಾತ್ರ ನಮ್ಮ ದೇಶ ದೊಡ್ಡದಾದೀತು. ನಮ್ಮ ಜನ ದೊಡ್ಡವರಾದಾರು ಈ ಕನಸು ನನಸಾಗಬಹುದೇ !'' (೨೪–೨–೧೯೭೦)

“……ಮಹಾರಾಷ್ಟ್ರೀಯರ ಆಕ್ರಮಣ ಧೋರಣೆ ಅನುಕೂಲವಾದ ರಾಜನೀತಿ ಘಾತುಕ ನೀತಿ. ಕನ್ನಡಿಗರ ಕರುಳಿಗೆ ಅದು ಕ್ರೂರವಾದ ಬರೆ ಕೊಟ್ಟಿದೆ. ಕನ್ನಡಿಗರ ತನುಮನಗಳು ತಳಮಳ ಉರಿಯುತ್ತಲಿವೆ. ಅದರ ಝಳ ಯಾರಿಗೆ ಎಂತು ತಾಗುವುದೆಂಬುದನ್ನು ನಿರೀಕ್ಷಿಸಬೇಕಾಗಿದೆ. ಕೇಂದ್ರದ ಹಾಗೂ ಮಹಾರಾಷ್ಟ್ರದ ಈ ವಿಘಾತುಕ ಕೃತಿಯನ್ನು ಕನ್ನಡಿಗರು ಸಕ್ರಿಯವಾಗಿ ಕ್ರೂರವಾಗಿ ಖಂಡಿಸಬೇಕು. ಕೈಮೀರಿ ಹೋಗುವ ಮುನ್ನ ಹಿಡಿದೇಳಬೇಕು, ಕನ್ನಡಿಗರ ಶಕ್ತಿಯನ್ನು ಕೇಂದ್ರದ ವಿರುದ್ಧ ತೋರಿಸಲೇಬೇಕು. ಅದೊಂದೇ ಈಗ ಉಳಿದಿರುವ ದಾರಿ….'' (೧–೩–೧೯೭೦)

‘'……ಭಾಷೆ, ಧರ್ಮ, ಜಾತಿಗಳ ವಿಷಯ ಬಂದಾಗಲೆಲ್ಲ ಈ ಸೂತ್ರ ವನ್ನು ಅನುಸರಿಸಬೇಕು : ಭಾಷೆ ಪ್ರಾದೇಶಿಕವಾಗಬೇಕು. ಧರ್ಮ ವೈಯಕ್ತಿಕ ವಾಗಬೇಕು. ಜಾತಿ ಮಾನವನದಾಗಬೇಕು. ಇದೀಗ ನಮ್ಮ ಆಶೆ. ಈ ಆಶೆ ಹಣ್ಣಿಸುವಂತೆ ಸರ್ವರೂ ಪ್ರಯತ್ನಿಸಿ ಎಲ್ಲರೂ ‘ ಸರ್ವೋದಯ ’ ದತ್ತ ಸಾಗೋಣ. ಅದರಲ್ಲಿ ನಾಡಿನ, ಜನತೆಯ, ರಾಷ್ಟ್ರದ ಉದ್ಧಾರವಿದೆ.

(೧೧–೩–೧೯೭೦)

ಬೆಳಗಾವಿ ತಾಲೂಕಾ ಅಭಿವೃದ್ಧಿ ಮಂಡಳದವರು ‘ ಪಂತ ಬಾಳೇಕುಂದ್ರಿ ಯಲ್ಲಿ ಮಾರ್ಚ ೧೦ ರಂದು ಸಂಘಟಿಸಿದ ಯುವಜನೋತ್ಸವಕ್ಕೆ ಸಂದರ್ಶನ ನೀಡಿ ಅವರು ಆಡಿದ ಮಾತುಗಳನ್ನು ಹೀಗೆ ಟಿಪ್ಪಣಿ ಇಟ್ಟುಕೊಂಡಿದ್ದಾರೆ :

"...ಅಲ್ಲಿ ನೆರೆದ ಸು. ೪೦೦ ತರುಣ ತರುಣಿಯರನ್ನು ಕುರಿತು ಕೆಲವು ಮಾತುಗಳನ್ನು ಹೇಳಿದೆ—ಇಂದು ಇಲ್ಲಿ ಸೇರಿದ ನಾವೆಲ್ಲರೂ ನೆಲದ ಹಾಲನ್ನು ಕುಡಿದು ಬೆಳೆದ ಮಕ್ಕಳು. ಒಬ್ಬ ನಾಡತಾಯಿಯ ಬಂಧು ಬಾಂಧವರು. ಭಾಷೆ, ಜಾತಿ, ಪ್ರಾಂತ, ವ್ಯವಸಾಯ ಮೊದಲಾದ ವಿವಿಧ ವ್ಯತ್ಯಾಸಗಳನ್ನು ಮರೆತು ಭಾರತಮಾತೆಯ ವಿಶ್ವ ಕುಟುಂಬಕ್ಕೆ ಸೇರಿದ ಸದಸ್ಯರೆಂದು ನಡೆದುಕೊಳ್ಳುವಲ್ಲಿ ದೇಶಕ್ಕೆ ಹಿತವಿದೆ. ಭಿನ್ನತೆಗಳನ್ನು ಮರೆತು ನಾಡಿನ ಏಕಮತಕ್ಕಾಗಿ, ಭಾವೈಕ್ಯಕ್ಕಾಗಿ ಪ್ರಯತ್ನಿಸತಕ್ಕದ್ದು." (೧೦-೩-೧೯೭೦)

ಇಂಚಲರು ನಿಸರ್ಗಪ್ರೀತಿಗೆ ಹೆಸರಾದವರು ವರ್ಡ್ಸ್‌ವರ್ಥ್, ಕುವೆಂಪು, ಬೇಂದ್ರೆ ಅವರ ಪ್ರಕೃತಿಪ್ರೇಮಕ್ಕೆ ಹೆಚ್ಚು ಆಕರ್ಷಿತರಾದವರು. ಚೆಲುವನ್ನು ಕಂಡಾಗಲೆಲ್ಲ ಅವರ ಮನಸ್ಸಿನ ನವಿಲು ಗರಿಗೆದರಿ ನರ್ತಿಸುತ್ತದೆ.

ವರ್ಣನೆಗಳನ್ನು ನೋಡಿ—

ವಿನೂತನ ಸೌಂದರ್ಯದ ನೆಲೆವನೆಯಾದ ಜೋಗ ಜಲಪಾತವನ್ನು ಕಂಡು ಕವಿ ಮೂಕವಿಸ್ಮಿತನಾಗಿದ್ದಾನೆ.

"ನಿಸರ್ಗ ಸೌಂದರ್ಯದ ನೆಲೆವನೆಯಾದ ಈ ಜಲಪಾತವು ಜಾಗತಿಕ ಸೌಂದರ್ಯ ಸ್ಥಳಗಳಲ್ಲಿ ಒಂದಾಗಿದೆ. ಎಷ್ಟು ಸಲ ನೋಡಿದರೂ ತೃಪ್ತಿಯಿಲ್ಲ. ಚಿರಂತನವಾದ ಚೆಲುವನ್ನು ಕನ್ನಡನಾಡಿಗೆ ಇತ್ತ ಭುವನೇಶ್ವರಿಯನ್ನು ನಾವು ಎಷ್ಟು ಸ್ಮರಿಸಿಕೊಂಡರೂ ಕಡಿಮೆಯೇ. ಚೆಲುವು ಚಿರಂತನವಾಗಿದೆ, ಮಾನವನ ಆಯುಷ್ಯವು ಮಾತ್ರ ಸಾಲದಾಗಿದೆ. ಶರಾವತಿಗೆ ನನ್ನ ಅನಂತ ವಂದನೆಗಳು. ಅವಳು ಕನ್ನಡದ ಬೆಳಕಿನ ಸೆಳಕು ..."

ಸೊಗಲ ಸೋಮೇಶ್ವರ ಕ್ಷೇತ್ರಕ್ಕೆ ಸ್ನೇಹಿತರೊಡಗೂಡಿ ಹೋದದ್ದು ಚಿರ ಸ್ಮರಣೀಯವಾದ ಅನುಭವವು. ತಮ್ಮ ಮಂಗಲ ವಿವಾಹದ ನೆನವು ಮರುಕಳಿಸಿ ಬಂದು ಹೀಗೆ ಲಿಖಿಸಿದ್ದಾರೆ :

"ಮೇ ದಿ. ೧೧ ರಂದು (೧೯೪೨) ಇದೇ ಕಲ್ಯಾಣ ಮಂಟಪದಲ್ಲಿ ನಡೆದ ನಮ್ಮ ವಿವಾಹದ ಸವಿನೆನಹು ಆನಂದದ ಅಕ್ಷಯ ಪಾತ್ರೆಯಾಗಿ ಪರಿಣಮಿಸಿತು." (೧೪-೧-೧೯೭೦)

ಸೊಗಲ ಸೋಮೇಶ್ವರ ಪುಣ್ಯಕ್ಷೇತ್ರವನ್ನು ಕಂಡು–

" ಸುತ್ತಲೂ ಹಸಿರು ಮುರಿಯುವ ವಸನದೊಂದಿಗೆ ನಮ್ಮ ಸ್ವಾಗತಕ್ಕಾಗಿ ನಿಂತ ನಿಸರ್ಗ ಸುಂದರಿಯು ದೃಶ್ಯ ಮೈಮನಗಳನ್ನು ಪುಳಕಿತಗೊಳಿಸುತ್ತದೆ. ಅಲ್ಲಿ ಚಿರಂತನ ಲಗ್ನಮಂಟಪದಲ್ಲಿ ನವದಂಪತಿಗಳಾಗಿ ನಿಂತ ಶಿವಶಿವೆಯರ ದರ್ಶನ ಬಾಳಿದು ಬಂಗಾರವೆಂದೂ, ಸಂಸಾರವು ಸುಂದರವಾದುದೆಂದೂ ಸಾರಿಸಾರಿ ಹೇಳುವಂತಿದೆ."

ಹೊಲದ ವರ್ಣನೆ :

"......ನಾನಾ ಬಗೆಯಾದ ಬೆಳೆಗಳ ಕುಣಿತವಣಿತಗಳನ್ನು ನೋಡುತ್ತ ಹೊಲದ ತುಂಬಾ ಹರುಷದಿಂದ ತಿರುಗಾಡಿದೆವು ....ಸಂಜೆಯ ಹೊಂಬಿಸಿಲಲ್ಲಿ ಬೆಳೆಯ ನಡುವೇ ಕುಳಿತುಕೊಂಡು ಊಟ ಮಾಡಿದೆವು ಅದೆಷ್ಟು ರುಚಿಕರ ವಾದಿತ್ತು ಆ ಹಳ್ಳಿಯ ಊಟ !" ಅಷ್ಟರಲ್ಲಿ ಮಳೆಬಂತು.

" ಮಳೆಯ ಹನಿಗಳು ತಲೆಯನ್ನು ಅಲುಗಾಡಿಸುವ ಬೆಳೆಯ ಗರಿಗಳ ಮೇಲೇರಿ ಮುತ್ತಿನ ಮಾಲೆಗಳನ್ನು ಇರಿಸಿದಂತೆ ಕಂಗೊಳಿಸುತ್ತಿದ್ದವು. ಅಷ್ಟ ರಲ್ಲಿ ಸಂಜೆಯ ತಂಗಾಳಿ ಬೀಸಲು ಮೈ ಜುಮ್ಮೆಂದು ನಡುಗಲು ನಾವೆಲ್ಲರೂ ಮನೆಯತ್ತ ಹೆಜ್ಜೆ ಹಾಕಿದೆವು." (೧೬–೭–೧೯೭೦)

ಇಂಥದೇ ಇನ್ನೊಂದು ವರ್ಣನೆ—

" ಇಂದು ಮಳೆಯಿರಲಿಲ್ಲ. ಆಗಾಗ ಹೊಂಬಿಸಿಲು ಬೀಳುತ್ತಿತ್ತು. ಹಸಿರು ಹುಲ್ಲಿನ ಮೇಲೆ ಎಸೆದ ಬಿಸಿಲಿನ ಲೀಲೆ ನೋಡುತ್ತ ಕಣ್ಮನಗಳನ್ನು ತಣಿಸುವಂತಿತ್ತು. ನೀಲಗಗನದಲ್ಲಿ ತುಂಡುಮೋಡಗಳು ಹಿಂಡುಹಿಂಡಾಗಿ ಯಾತ್ರೆಗೆ ಹೊರಟಂತೆ ಶೀಘ್ರಗತಿಯಿಂದ ಸಾಗಿದ್ದುದು ರಮಣೀಯತೆಯನ್ನು ಬೀರುತ್ತಿತ್ತು." (೩೦–೭–೧೯೭೦)

ಬೆಳಗಾವಿಯ ದೀಪಾವಳಿ ಹಬ್ಬ—

"ಅಮಾವಾಸಿಯ ನಿಬಿಡ ಕತ್ತಲೆಯಲ್ಲಿ ಈ ಆಕಾಶಬುಟ್ಟಿಗಳ ಥಳಕು ದೀಪಗಳು ಗಗನದಲ್ಲಿ ಮಿಣುಗುವ ನಕ್ಷತ್ರಗಳು ಗಗನದಿಂದ ಕೆಳಗೆ ಇಳಿದಂತೆ ಮಾಯಾಲೋಕವನ್ನೇ ನಿರ್ಮಿಸಿದ್ದವು. ದಾರಿಹೋಕರ ಕಣ್ಣು ಕುಕ್ಕಿಸುವಂತಿದ್ದ ಈ ಬೆಳಕಿನ ಬುಟ್ಟಿಗಳು ನಾನಾ ಬಣ್ಣದ ಬೆಳಕನ್ನು ಬೀದಿಯಲ್ಲಿ ಚೆಲ್ಲಿ ಇಡಿಯ ಬೀದಿಗೆ ಹೊಸ ಮೆರುಗನ್ನು ಕೊಟ್ಟಿದ್ದವು. ಅಲೆದಾಡುವ ದಾರಿಹೋಕರು ಬಣ್ಣದ ಉಡುಪುಗಳಿಂದ ಶೋಭಿಸುತ್ತಿದ್ದುದರಿಂದ ಅದೊಂದು ಯಕ್ಷಲೋಕ ದಂತೆ ಭಾಸವಾಗುತ್ತಿತ್ತು. ಜೊತೆಯಲ್ಲಿ ಮಕ್ಕಳು ಬಿರುಸು ಬಾಣಗಳನ್ನು ಹಚ್ಚಿ ಅವುಗಳ ಬೆಳಕನ್ನು ನೋಡಿ ನಲಿಯುತ್ತಿದ್ದರು. ಇದೊಂದು ಬೆಳಕಿನ ಹಬ್ಬ." (೩೦-೧೦-೧೯೭೦)

ಲೋಕವಾಣಿಗಳಿಂದ ದಿನಚರಿಯ ಸ್ವಾರಸ್ಯವು ಹೆಚ್ಚುತ್ತದೆಂಬ ಮಾತು ಸುಳ್ಳಲ್ಲ. ಅವರ ಹೃದಯದಿಂದ ಅರಳಿಬಂದ ಸ್ವಂತ ನುಡಿಮುತ್ತುಗಳಲ್ಲಿ ಕೆಲವುಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಕವಿಯ ಹೃದಯ ಕಾಸಾರದಲ್ಲಿ ಅರಳಿದ ಸುಂದರ ಪುಷ್ಪಗಳಂತಿವೆ ಈ ನುಡಿಮುತ್ತುಗಳು :

೧. ಪ್ರ : ಹುಡುಗಿ ಮುದುಕನನ್ನು ಪ್ರೀತಿಸಿದರೆ... ಏನಾಗುತ್ತದೆ ?

ಉ ; ಆಕೆ ಮುದುವೆಯಾಗುತ್ತಾಳೆ, ಆದರೆ ಮುದುಕ ಹುಡುಗನಾಗ ಲಾರ !

೨. ಕವಿಯ ಹೃದ್ಗತವಾದ ಅನುಭವದ ರಸವಾಣಿಯೇ ಕಾವ್ಯ.

೩. 'ಕುಣಿಯದೇ ನೃತ್ಯ ಬರುವದಿಲ್ಲ; ದುಡಿಯದೇ ಒಡತನ ತೊಲಗುವ ದಿಲ್ಲ' ಲೋಕವಾಣಿ.

೪. ನಿರ್ವ್ಯಾಜ್ಯ ಪ್ರೇಮಭಾವವೇ ಈ ಮಾನವಜೀವನದ ನಿಜವಾದ ಸಂಜೀವಿನಿ ಯಲ್ಲದೆ ಮತ್ತೇನು ?

೫. ವಿದ್ಯಾರ್ಥಿಗಳು ಮಾನವೀಯತೆಯನ್ನು ಅಳವಡಿಸಿಕೊಂಡು ಶೀಲಸಂಪ ನ್ನರೂ ದೇಶಾಭಿಮಾನಿಗಳೂ ಆಗಿ ಉತ್ತಮ ನಾಗರಿಕರಾಗಿ ಬೆಳೆಯ ಬೇಕು.

೭. ಭಾಷೆಯು ದ್ವೇಷವೆಂಬ ಭಸ್ಮಾಸುರನ ಭೂತನೃತ್ಯ ನಡೆದಿದೆ ಇಂದು.

೮. ನಾಡಿನ ಹುಲಿಗಿಂತ ಕಾಡಿನ ಹುಲಿಯೇ ಲೇಸು—ಏಕೆ ಗೊತ್ತೇ? ಕಾಡಿನ ಹುಲಿ ಮನುಷ್ಯರನ್ನು ಮುಟ್ಟುವುದಿಲ್ಲ. ಆದರೆ ನಾಡಿನ ಹುಲಿ ಮನುಷ್ಯರನ್ನು ಬಿಟ್ಟು ಯಾವ ಪ್ರಾಣಿಯನ್ನೂ ಮುಟ್ಟುವುದಿಲ್ಲ.

೯. ನಿಜ ವೈರಾಗ್ಯವಾವುದು? ಅಭಾವವಿದ್ದರೂ ತ್ಯಾಗ ಮಾಡುವುದೇ ವೈರಾಗ್ಯ.

೯. "ನಿರ್ಗಂಧ ಕುಸುಮ—ನಿರ್ಲಜ್ಜ ನಾರಿ" ನಿರ್ಗಂಧ ಕುಸುಮ ಅಲಂಕಾರಕ್ಕೆ ಆಗಬಹುದು. ಆದರೆ ನಿರ್ಲಜ್ಜ ನಾರಿಯಿಂದ ಯಾರಿಗೂ ಸುಖವಿಲ್ಲ.

೧೦. ಸ್ನೇಹವೆ ಸಂಜೀವಿನಿ ಬಾಳಿಗೆ ರಸವಾಹಿನಿ.

೧೧. ಕೇತಕಿಯು ಬನಸಿರಿಯು ಸರ್ಪಮಂದಿರವಂತೆ
ಮೋಹದರಮನೆ ತಾನು ಮೃತ್ಯುದಾಗರವಂತೆ.

೧೨. ಮಾನವನ ಅಂತರಂಗದ ಅಭಿವ್ಯಕ್ತಿಯ ದಿವ್ಯ ಸಾಧನವೆ ಕಲೆ. ಮಾನವ ಜೀವನದ ಆಗುಹೋಗುಗಳ ಆವಿಷ್ಕಾರದ ವಿವಿಧ ಸನ್ನಿವೇಶಗಳಲ್ಲಿ ಆವಿರ್ಭವಿಸುವ ದಿವ್ಯಾನುಭವರಂಜಿತ ಸೌಂದರ್ಯದ ನೆಲೆಕಲೆಗಳನ್ನು ಗುರುತಿಸಿ ಅವುಗಳ ಅಂತರಾಳದಲ್ಲಿ ವಿರಾಜಿಸುವ ಸತ್ಯ ಸೌಂದರ್ಯಗಳ ರಹಸ್ಯವನ್ನು ರಸವತ್ತಾಗಿ ನಿರೂಪಿಸುವ ಸಾಧನವೆ ಕಲೆಯು...ಕಲೆಯು ಭೂಲೋಕದ ಕಾಮಧೇನು! ಅದರ ಕೆಚ್ಚಲಿನ ನಾಲ್ಕು ಮೊಲೆಗಳಿಂದ ನಿರಂತರ ಹರಿದು ಬರುವ ಅಮೃತ ನಾಲ್ಕು ಬಗೆಯಾಗಿದೆ.
ಅನುಭವ, ಆನಂದ, ಆತ್ಮತುಷ್ಟಿ. ಅಂತರ್ಯದ ವಿಕಾಸ.

೧೩. 'ನಾಡಿಗಾಗಿ ನಡಿ, ನಾಡಿಗಾಗಿ ದುಡಿ, ನಾಡಿಗಾಗಿ ಮಡಿ' ಎಂಬ ಉನ್ನತ ಆದರ್ಶ ಇಂದಿನ ಬಾಲಕರಲ್ಲಿ ರಕ್ತಗತವಾಗಿ ಬರಬೇಕು. ಇಂಥ ಶಿಕ್ಷಣ ನಮಗೆ ಇಂದು ಬೇಕಾಗಿದೆ.

೧೪. ಬಾಳಿನ ಬಿಸಿಲನ್ನು ಅನುಭವಿಸಿದಾಗಲೇ ಬದುಕಿನ ನೆರಳಿಗೆ ಅರ್ಥ.

೧೫. ಬಿಡುವು ಬರಲಿರುವ ಕರ್ತವ್ಯನಿರ್ವಹಣೆಯ ಸಾಧನೆಗೆ ಬೇಕಾಗಿ ಶಕ್ತಿಯನ್ನು ಸಂಗ್ರಹಿಸುವ ಸಾಧನೆಯಾಗಬೇಕು.

೧೬. ಗೆಲುವು ಜನಪ್ರಿಯತೆಯ ಪ್ರತೀಕ.

೧೭. ಹೆತ್ತು ಹೊತ್ತು ಸಾಕಿ ಸಲಹಿದವರ ಋಣವನ್ನು ತೀರಿಸುವದರಲ್ಲಿ ಮಾನವನ ನಿಜವಾದ ಆನಂದವಿದೆ, ನೀತಿಯಿದೆ, ಧರ್ಮವಿದೆ. ಇದುವೇ ಬಾಳಿನ ನಿಜವಾದ ದಾರಿ.

೧೮. ಪ್ರಶಂಸೆ ಎನ್ನುವುದು ಸುಗಂಧ ದ್ರವ್ಯವಿದ್ದಂತೆ, ಅದನ್ನು ಮೂಸಿ ನೋಡಬೇಕೇ ವಿನಃ ಕುಡಿದು ನೋಡಬಾರದು.

೧೯. ಹತಾಶನಾಗದೆ ಮತ್ತೆ ಪ್ರಯತ್ನ ಮಾಡುವಲ್ಲಿಯೇ ಮಾನವನ ಪೌರುಷ ಸಾರ್ಥಕತೆಯನ್ನು ಕಾಣುತ್ತದೆ.

೨೦. ಶಿಕ್ಷಕನ ಬಾಳಿನಲ್ಲಿ ಶಿಷ್ಯರಿಂದ ಸಿಕ್ಕುವ ಮಾನಮರ್ಯಾದೆಗಳೇ ಅವನ ಸಾರ್ಥಕತೆಗೆ ಸಾಕ್ಷಿ ನುಡಿಯುತ್ತವೆ.

೨೧. ತನ್ನ ವೃತ್ತಿಯಲ್ಲಿ ತುಂಬಾ ಆಸಕ್ತಿ ಅಭಿಮಾನಗಳನ್ನು ತಳೆದು ಕಾಯಕವೇ ಕೈಲಾಸವೆಂದು ಕಾರ್ಯ ನಿರ್ವಹಿಸುವ ಮಾನವನ ಬಾಳು ಬಂಗಾರವಾಗುವದರಲ್ಲಿ ಸಂದೇಹವೇ ಇಲ್ಲ.

೨೨. ಬಾಳಬಟ್ಟೆಯ ಪರಮಾಗಮವಾಗಬೇಕಾದ ತಿಳಿವನ್ನು ಅದು ಯಾವ ಕಡೆಯಿಂದ ಬಂದರೂ ಬರುವಂತಿದ್ದರೂ ಅದನ್ನು ಸೇಖರಿಸಿ ಸ್ವೀಕರಿಸಿ ಸ್ವಯಂಸ್ಫೂರ್ತಿಯಿಂದ ಬಾಳಗರಡಿಯಲ್ಲಿ ಎದ್ದು ನಿಲ್ಲಬೇಕು.

೨೩. ಎಲ್ಲ ಸಂಕಷ್ಟಗಳ ಅಗ್ನಿಕುಂಡದಲ್ಲಿ ಬಿದ್ದು ಬೆಂದು ಕಂದಿದಾಗಲೇ ಆತನು ಒರೆಗೆ ಬಂದ ಬಂಗಾರದಂತೆ ಕಾಂತಿಪೂರ್ಣನಾಗಿ ಪ್ರಜ್ವಲಿಸುತ್ತಾನೆ.

೨೪. ಹೆಸರಿಗಾಗಿ ಹೋರಾಡುವ ವಚನವೀರರು ಏನು ಕಾರ್ಯ ಮಾಡ ಬಲ್ಲರು ?

೨೫. ತನುವಿನ ಕೊರಗು ಮನದ ಮೇಲೆ, ಇದು ಸಹಜ ಆದರೆ ಆತ್ಮಬಲ ವಿದ್ದರೆ ಈ ಕೊರಗು ತನ್ನತಾನೆ ಏನು ಮಾಡಬಲ್ಲದು ?

೨೬. ಸ್ವಾವಲಂಬಿ ಸ್ವಾಭಿಮಾನಿ ಸುಸಂಸ್ಕೃತ ತರುಣರನ್ನು ತರಬೇತುಗೊಳಿ ಸುವ ಶಿಕ್ಷಣವು ಇಂದು ಬೇಕಾಗಿದೆ.

೨೭. ನೋವು ನಮ್ಮ ಹೃದಯಗಳನ್ನು ದಹಿಸಿ ಕರಗಿಸಿ ಕಾಳಿಕೆಯನ್ನು ಕಳೆದು ತೊಳೆದು ಅದನ್ನು ಬಂಗಾರದಂತೆ ಪರಿಶುದ್ಧಗೊಳಿಸುತ್ತದೆ.

ಇಂಚಲರ ಶಿಷ್ಯನೊಬ್ಬನು ಅವರ ಪ್ರೀತಿ ವಿಶ್ವಾಸಗಳನ್ನು ಕಳೆದು ಕೊಂಡರೂ ಆತನ ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿದರು. ಇದು ಅವರ ಹೃದಯದ ಔದಾರ್ಯವನ್ನು ಎತ್ತಿ ತೋರಿಸುತ್ತದೆ. ಈ ಪ್ರಸಂಗವನ್ನು ಹೀಗೆ ಲಿಖಿಸಿದ್ದಾರೆ.

" ........ಶ್ರೀ ....ನನ್ನ ಪ್ರೀತಿ ವಿಶ್ವಾಸಗಳನ್ನು ಕಳೆದುಕೊಂಡಿದ್ದಾನೆ, ಅವನ ಇತ್ತೀಚಿನ ವರ್ತನೆ ನನ್ನ ಮನವನ್ನು ನೋಯಿಸಿದೆ. ಆಗದವರು ಏನಾ ದರೇನು ? ಎಂತಿದ್ದರೇನು ? ಆದರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸ ಬೇಕಾಯಿತು." (೮-೬-೧೯೭೦)

ಮಾಡಿದ ಯಾವುದೇ ಅಲ್ಪ ತ್ಯಾಗವಾದರೂ ಮುಂದಿನ ಜೀವನ ಸುಖಕ್ಕೆ ಸೋಪಾನವಾಗುವದೆಂದು ಅವರ ಅಭಿಪ್ರಾಯವಾಗಿತ್ತು.

" ನಮ್ಮ ಸೊಸಾಯಟಿಯಲ್ಲಿ ಮಾಡಿದ ಅಲ್ಪತ್ಯಾಗ ಮುಂದಿನ ಸುಖಕ್ಕೆ ಸೋಪಾನವಾಗುವಲ್ಲಿ ಸಂದೇಹವಿಲ್ಲವೆಂಬ ವಿಶ್ವಾಸವಿದೆ. ಇಷ್ಟು ಸಣ್ಣ ತ್ಯಾಗ ವನ್ನೂ ನಾವು ಮಾಡಲು ಸಾಧ್ಯವಿಲ್ಲದಿದ್ದರೆ ಹೇಗೆ ? ಹಿಂದಿನ ಹಿರಿಯರು ಈ ಸಂಸ್ಥೆಯನ್ನು ಕಟ್ಟುವಾಗ ಎಂಥೆಂಥ ತ್ಯಾಗ ಮಾಡಿದರೆಂಬುದನ್ನು ನೆನೆದು ಕೊಂಡರೆ ಅದರ ಮುಂದೆ ಇದೇನೂ ಅಲ್ಲ ಅನ್ನಿಸುತ್ತದೆ.........."

(೧೩-೬-೧೯೭೦)

ನಮ್ಮ ಚಿರಂಜೀವ ಮಲ್ಲಿಕಾರ್ಜುನನು ಅಥಣಿ ಕಾಲೇಜಿನಲ್ಲಿ ಅರ್ಧಾವಧಿ ಕೆಲಸ ಮಾಡಬೇಕಾಗಿ ಬಂದ ಪ್ರಸಂಗದಲ್ಲಿ, ಅದನ್ನು ಸ್ವೀಕರಿಸಿ ತ್ಯಾಗ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂದು ನಿರ್ಧಾರವಾಗಿ ಮೇಲಿನಂತೆ ತಿಳಿಸಿದರು.

'ಕಾರ್ಯೇಷು ಮಂತ್ರಿ, ಕರಣೇಷು ದಾಸಿ, ಶಯನೇಷು ರಂಭಾ, ಧರ್ಮಾನುಕೂಲಾ, ಕ್ಷಮಯಾ ಧರಿತ್ರೀ, ಪ್ರೇಮಾಯು ಗಂಗಾ' ಎಂಬ ಸಂಸ್ಕೃತ ಸುಭಾಷಿತದ ಸವಿದನಿ ಇಂಚಲರ ಕಿವಿಗಳಲ್ಲಿ ನಿನದಿಸುತ್ತದೆ. ಈ ಆದರ್ಶವನ್ನು ಬಾಳಿನಲ್ಲಿ ಅವರ ಧರ್ಮಪತ್ನಿ ಸೌ. ಕಮಲಮ್ಮನವರು ಅಳವಡಿಸಿಕೊಂಡು ಬಂದಿದ್ದಾರೆ. ಅವರ ಜೀವನದಲ್ಲಿ ದೊರೆತ ಸ್ಥಾನಮಾನಗಳಿಗೆಲ್ಲ ಸೌಭಾಗ್ಯವತಿಯ ಅನುಪಮವಾದ ತ್ಯಾಗಜೀವನವೇ ಕಾರಣ. ಶ್ರೀ. ಇಂಚಲರು ಹೀಗೆ ಬರೆದಿದ್ದಾರೆ :

"ಇಂದು ಮನೆಯಲ್ಲಿ ಎಲ್ಲವೂ ಸುಖದಾಯಕವಾಗಿತ್ತು. ಶಾಂತಿ ನೆಲಸಿದ್ದರಿಂದ ಮನೆಯೇ ಸ್ವರ್ಗವಾಗಬಲ್ಲದೆಂಬುದಕ್ಕೆ ಸಾಕ್ಷಿ ನುಡಿಯುವಂತಿತ್ತು. ಇದಕ್ಕೆಲ್ಲಕಲ್ಕ ಸೌಭಾಗ್ಯವತಿಯ ವಾತ್ಸಲ್ಯಪೂರ್ಣವಾದ ನಡೆನುಡಿಗಳ ಅಮೃತ ಫಲವೆಂದು ಹೇಳಬೇಕಾಗುವದು. ಆದರ್ಶ ಗೃಹಿಣಿಯಾದ ಅವಳ ಅಂತಃಕರಣದ ಅನಂತ ಆಳದಿಂದೇಳುವ ಪ್ರೇಮಗಂಗೆಯಲ್ಲಿ ಇಡಿಯ ಕುಟುಂಬದ ಜನ ಮಂಗಲಸ್ನಾನಗೈಯುತ್ತಿರುವದರಿಂದ ಮನೆಯು ಸ್ವರ್ಗದಂತೆ ಸಂತೋಷವನ್ನು ಪ್ರದರ್ಶಿಸುತ್ತಿದೆ. ಇದು ನಮ್ಮೆಲ್ಲರ ಭಾಗ್ಯವೆಂದೇ ಹೇಳಬಹುದು. ಅವಳ ಪುಟ್ಟ ಹೃದಯದಲ್ಲಿ ಅದೆಂಥ ಮಮತೆಯ ಝರಿ ಹರಿಯುತ್ತಿದೆಯೋ ನಾ ಬೇರೆ ಕಾಣೆ. ಹರಿಹರಿದಂತೆ ಅದರ ಪ್ರವಾಹ ಅಧಿಕವಾಗುತ್ತಿದೆ. ಬಂಧು-ಬಳಗ ಆಪ್ತಮಿತ್ರರ ಸಮೂಹವೇ ಅವಳ ಸತ್‌ಸಂಗದ ಸುಧೆಯನ್ನು ಅನುಭವಿಸಿ ಆನಂದರಸವನ್ನು ಹೊರಹೊಮ್ಮಿಸುತ್ತದೆ. ಅವಳ ಬಾಳಿನ ರೀತಿನೀತಿಗಳನ್ನು ಒಂದು ಕ್ಷಣ ನೆನೆದುಕೊಂಡಾಗ ನನಗಂತೂ ಆದರ್ಶ ಸತಿಯ ನಲ್ಮೆಯುಂಟಾಗುತ್ತದೆ. ...." (೨೧-೬-೧೯೭೦)

ಸಾಮಾನ್ಯ ಮನುಷ್ಯನು ಹೊಗಳಿಕೆಗೆ ಮನಸೋತು ತನ್ನ ಅಂತಃಸತ್ವವನ್ನು ಮರೆತು ತತ್ವಗಳನ್ನು ಗಾಳಿಗೆ ತೂರಿ ಹೊಗಳುವವನಿಗೆ ಮಾರುಹೋಗುತ್ತಾನೆ, ಆದರೆ ಇಂಚಲರು ಸಾತ್ವಿಕ ಸ್ವಭಾವದವರಿದ್ದು ಆತ್ಮೋನ್ನತಿಯನ್ನು ಸಾಧಿಸುವ ಹವಣಿಕೆಯಲ್ಲಿದ್ದದ್ದರಿಂದ ಮೇಲಿಂದಮೇಲೆ ಆತ್ಮನಿರೀಕ್ಷಣೆ ಮಾಡಿಕೊಂಡು

ತಮ್ಮನ್ನು ತಾವೇ ಪರೀಕ್ಷೆಗೆ ಗುರಿಪಡಿಸಿಕೊಳ್ಳುತ್ತಿದ್ದರೆಂಬುದು ಕೆಳಗಿನ ಅವತರಣಿಕೆಯಿಂದ ಕಂಡುಬರುತ್ತದೆ. ಆತ್ಮನಿರೀಕ್ಷಣೆಯಿಂದಲೇ ಮನುಷ್ಯ ಮೇಲಿನ ಮಟ್ಟಕ್ಕೆ ಸಾಗುತ್ತಾನೆ, ದಿವ್ಯಮಾನವನಾಗುತ್ತಾನೆ.

"......'ಪ್ರಶಂಸೆ ಎನ್ನುವದು ಸುಗಂಧ ದ್ರವ್ಯವಿದ್ದಂತೆ. ಅದನ್ನು ಮೂಸಿ ನೋಡಬೇಕೇ ವಿನಃ ಕುಡಿದು ನೋಡಬಾರದು.' ಇದೊಂದು ಅನುಭವದ ನುಡಿ. ಇದನ್ನೇ ಅಣ್ಣ ಬಸವಣ್ಣನವರು 'ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕ್ಕೆ ಇಕ್ಕಿದರಯ್ಯಾ.. ಎನ್ನ ಹೊಗಳಿಕೆಗೆ ಅಡ್ಡ ಬಾರಾ ಧರ್ಮ' ಎಂದು ಕೂಡಲಸಂಗಯ್ಯನನ್ನು ಕೇಳಿಕೊಂಡಿದ್ದಾರೆ.

ಇದೇ ಬಗೆಯಾಗಿ ಇಂದು ತಮ್ಮ ಕಾರ್ಯಸಾಧನೆಯನ್ನು ಮುಂದಿಟ್ಟು ಕೊಂಡು ಕೆಲವರು ನನ್ನನ್ನು ಹೊಗಳಲು ಬಂದರು. ನಮ್ಮ ಶಾಲೆಯಲ್ಲಿ ತುಂಬುವ ಒಂದು ಶಿಕ್ಷಕನ ಜಾಗೆಯಿದ್ದು ಅದನ್ನು ಗಿಟ್ಟಿಸಿಕೊಳ್ಳಬೇಕೆಂದು ಅವರ ಹವಣಿಕೆ, ಅದಕ್ಕಾಗಿ ನನ್ನ ಹೊಗಳಿಕೆ, ಆದರೆ ನಾನು ಮೇಲಿನ ಅಣ್ಣನ ನುಡಿಯ ಬೆಳಕಿನಲ್ಲಿ ನಡೆಯುತ್ತಿರುವದರಿಂದ ಅವರು ನನ್ನನ್ನು ಮೋಸಗೊಳಿಸಲಾರರು. ನನ್ನದು ನ್ಯಾಯವಾದ ದಾರಿ. ಅದನ್ನು ತುಳಿಯಲು ಶಕ್ತಿಯನ್ನು ನೀಡೆಂದು ದೇವರನ್ನು ಪ್ರಾರ್ಥಿಸುವೆ." (೨೬-೧-೧೯೭೦)

ನಿರ್ಬಲವಾದ ಮನಸ್ಸು ಅವರದಲ್ಲ. ಪ್ರಾರಂಭದಿಂದಲೂ ಅವರದು ಹೋರಾಟದ ಜೀವನ. ತಿಳಿವನ್ನು ಪಡೆದುಕೊಂಡು ಜೀವನದ ಗರಡಿಯಲ್ಲಿ ಪುರುಷಾರ್ಥ ಪ್ರಕಟಿಸಬೇಕೆಂಬುದೇ ಅವರ ಇಚ್ಛೆಯಾಗಿದ್ದು, ಅದು ಇಲ್ಲಿ ಈ ರೀತಿ ವ್ಯಕ್ತವಾಗಿದೆ.

> " ತಿಳಿವು ಎಲ್ಲರಿಗೂ ಬೇಕು;
> ಆದರೆ ಅದರ ಬೆಲೆತೆರಲು
> ಸಿದ್ಧವಿರುವವರು ಮಾತ್ರ ವಿರಳ !

ಇದು ಇಂದಿನ ಮನನಾರ್ಹ ಮಾತು. ತಿಳಿವಿಲ್ಲದ ಮಾನವನು ಗಳಿಗೆ ಮಾತ್ರದಲ್ಲಿ ಹಾಳಾಗುತ್ತಾನೆ. ಆದ್ದರಿಂದ ತಿಳಿವಿನ ಬೆಲೆಯನ್ನು ಅದು ಎಷ್ಟು ಬೇಕಾದಷ್ಟು ಇದ್ದರೂ ಅದನ್ನು ಕೊಡಬೇಕು, ಮತ್ತು ಪಡೆಯಬೇಕು. ಈ

ತಿಳಿವು ಜೀವನದ ತಿರುಳು ಎಂದೇ ಹೇಳಬೇಕು. ಈ ತಿರುಳರಿಯದ ಬಾಳು ಕಾಡು. ಅದು ಸುಖಕ್ಕೆ ಎರವಾಗಬೇಕಾಗುತ್ತದೆ. ಆದುದರಿಂದ ಬಾಳ ಒಟ್ಟೆಯ ಪರಮಾಗಮವಾಗಬೇಕಾದ ತಿಳಿವನ್ನು ಅದು ಯಾವ ಕಡೆಯಿಂದ ಬಂದರೂ ಬರುವಂತಿದ್ದರೂ ಅದನ್ನು ಶೇಖರಿಸಿ, ಸ್ವೀಕರಿಸಿ ಸ್ವಯಂಸ್ಫೂರ್ತಿಯಿಂದ ಬಾಳಗರಡಿಯಲ್ಲಿ ಎದ್ದು ನಿಲ್ಲಬೇಕು." (೧೫-೧-೧೯೬೧)

ಸತ್ಯಾನ್ವೇಷಣೆ ಕುರಿತು ಹೀಗೆ ಬರೆದಿಟ್ಟಿದ್ದಾರೆ :

" Nature has planted in our minds an insatiable Longing to see Truth."

—cicero

" ಸತ್ಯಾನ್ವೇಷಣೆಗಾಗಿ ಮಾನವನು ನೈಸರ್ಗಿಕವಾಗಿ ಹಂಬಲಿಸುತ್ತಾನೆ. ಸತ್ಯಸ್ವರೂಪಿಯಾದ ಶಿವಶಕ್ತಿಯತ್ತ ಮುನ್ನಡೆಯುತ್ತಿರುವ ಆತ್ಮನು ಈ ಪ್ರಯತ್ನವನ್ನು ಎಂದೆಂದಿಗೂ ಕೈಕೊಂಡಿರುತ್ತಾನೆ. ಆದರೆ ಈ ಸತ್ಯಾನ್ವೇಷಣೆಯ ದುರ್ಗಮ ಮಾರ್ಗದಲ್ಲಿ ಅನೇಕ ಏರುಪೇರುಗಳೂ, ಕಷ್ಟಸಂಕಷ್ಟಗಳೂ, ಮುಳ್ಳುಕೊಂಪೆಗಳೂ ಬರುವದುಂಟು. ಅದಕ್ಕಾಗಿ ಆತ್ಮನು ಕೆಲಕಾಲ ಹಿಂದೇಟವನ್ನೂ ಅನುಭವಿಸಬೇಕಾಗುತ್ತದೆ. ಕಷ್ಟಗಳನ್ನು ಸಹಿಸಬೇಕಾಗುತ್ತದೆ. ಈ ಎಲ್ಲ ಸಂಕಷ್ಟಗಳ ಅಗ್ನಿಕುಂಡದಲ್ಲಿ ಬಿದ್ದು ಬೆಂದು ಕಂದಿದಾಗಲೇ ಆತ್ಮನು ಒರೆಗೆ ಒಂದ ಬಂಗಾರದಂತೆ ಕಾಂತಿಪೂರ್ಣನಾಗಿ ಪ್ರಜ್ವಲಿಸುತ್ತಾನೆ. ಆದುದರಿಂದ ನಿಸರ್ಗವು ನಮ್ಮ ಮನಸ್ಸಿನಲ್ಲಿ ಈ ಸತ್ಯಾನ್ವೇಷಣೆಯ ಕಿಡಿಯನ್ನೂ ಹಂಬಲವನ್ನೂ ಜಾಗೃತವಾಗಿ ಇಟ್ಟಿದೆಯೆಂಬುದು ಸತ್ಯವು." (೧೬-೧-೧೯೬೧)

ಪ್ರಪಂಚದ ದುಃಖದುಮ್ಮಾನಗಳನ್ನು ಮರೆಯಬೇಕಾದರೆ ಮಾನವನು ಪ್ರಕೃತಿಯ ಮಡಿಲಲ್ಲಿ. ಆಶ್ರಯವನ್ನು ಪಡೆಯಬೇಕು. ಆಗ ಅವನಿಗೆ ಶಾಂತಿ ಲಭಿಸುತ್ತದೆ. ಇಂಚಲರ ದೃಷ್ಟಿಯಲ್ಲಿ ಪ್ರಕೃತಿಮಾತೆಯ ಪೂಜೆಯೇ ಪರಮಾತ್ಮನ ಪೂಜೆ. ಅದನ್ನು ಹೀಗೆ ಲಿಖಿಸಿದ್ದಾರೆ :

" One is nearer Gods' heart in a garden than anywhere else on earth.—

ನಳನಳಿಸುವ ಹೂದೋಟದಲ್ಲಿ ವಿಹರಿಸುವ ಮಾನವನು ದೇವದೇವನ ಹೃದಯದ ತೀರ ಹತ್ತಿರವಾಗಿರುತ್ತಾನಂತೆ. ಈ ಉಕ್ತಿ ತುಂಬಾ ಯೋಗ್ಯವಾದು ದಾಗಿದೆ. ಯಾಕೆಂದರೆ ಹೂದೋಟವು ಕಣ್ಮನಗಳನ್ನು ತಣಿಸಿ ತನ್ನೆಡೆಗೆ ಸೆಳೆ ಯುವ ಸೌಂದರ್ಯವನ್ನು ಸೂರೆಗೊಂಡಿರುತ್ತದೆ. ಈ ಸೌಂದರ್ಯದ ಅಂತ ರಾಳದಲ್ಲಿ ಸತ್ಯವೂ, ಈ ಸತ್ಯದ ಹೃದಯದಲ್ಲಿ ಶಿವಶಕ್ತಿಯೂ ನೆಲಸಿರುತ್ತದೆ. ಆದುದರಿಂದಲೇ ನಿಸರ್ಗರಮಣೀಯವಾದ ಚೆಲುವಿನ ತಾಣಗಳನ್ನು ಕಂಡಾಗ ಮನಸ್ಸು ನೆಮ್ಮದಿಯನ್ನು ಪಡೆಯುತ್ತದೆ. ಆದುದರಿಂದ ನನ್ನ ಮನಸ್ಸು ಯಾವಾಗಲೂ ನಿಸರ್ಗಸೌಂದರ್ಯದ ಆಗರವಾದ ನೆಲಜಲಗಳುಳ್ಳ, ನೀರು ನೆಳಲುಗಳುಳ್ಳ ಪತ್ರಪುಷ್ಪಗಳಿಂದ ನಿಬಿಡೀಕೃತವಾದ ರಮ್ಯಾರಣ್ಯಗಳಲ್ಲಿ ಸದಾವ ಕಾಲವೂ ವಾಸವಾಗಿರಲು ಹಂಬಲಿಸುತ್ತದೆ. ಇಂಥ ಸುಂದರವಾದ ಪ್ರಕೃತಿಯಲ್ಲಿ ಪರಮಾತ್ಮನ ಚೇತನ ಸದಾ ಲಾಸ್ಯವಾಡುತ್ತಿರುತ್ತದೆಂಬ ತಿಳವಳಿಕೆ ಸಹಜವಾಗು ತ್ತದೆ. ಅದು ಕಾರಣ, ಪ್ರಕೃತಿಯ ಸಾನಿಧ್ಯದಲ್ಲಿರಲು ಮನಸ್ಸು ಹಾತೊರೆ ಯುತ್ತದೆ. ಪ್ರಕೃತಿ ಮಾತೆಯ ಪೂಜೆಯೇ ಪರಮಾತ್ಮನ ಪೂಜೆಯೆಂದು ಹೇಳಿ ದ್ದಾರೆ. 'ಪ್ರಕೃತಿಯಾರಾಧನೆಯೇ ಪರಮನಾರಾಧನೆಯು' ಎಂದು ನಿಸರ್ಗ ಕವಿ ಕುವೆಂಪು ನುಡಿದಿದ್ದಾರೆ. ತಮ್ಮ ಕಾವ್ಯದ ಕನ್ನಡಿಯಲ್ಲಿ ಪ್ರಕೃತಿಯ ನಿತ್ಯ ನೂತನವಾದ ಚೆಲುವನ್ನು ಹಿಡಿದಿಡಲು ಹವಣಿಸಿದ್ದಾರೆ.'' (೧೭-೧-೧೯೭೧)

'' 'character is destiny' ಅಂದರೆ ಮಾನವನು ದೈವದ ಕೈಗೂಸು. ಎಂಬ ನುಡಿಯನ್ನು ಬಿಡಿ ಬಿಡಿಸಿ ಬೆದಕಿ ಹಿಕ್ಕಿ ಹಿಂಜಿ ನೋಡಿದಾಗ ಅದರ ರಹಸ್ಯ ನಮಗೆ ಹೊಳೆಯದಿರದು. ಇದ್ದಕ್ಕಿದ್ದಂತೆ ಮಾನವನ ಹಾಯಾಗಿ ಹರಿಯುವ ಜೀವನದಿ ತನ್ನ ದಿಕ್ಕನ್ನು ಬದಲಿಸಿ ಮನಬಂದಂತೆ ಹರಿಯತೊಡ ಗುತ್ತದೆ, ಕನಸುಮನಸುಗಳಲ್ಲಿಯೂ ಸುಳಿಯದ ಒಂದು ಅನಿವಾರ್ಯವಾದ ದುರಂತದ ವಿಷಬೀಜ ಎಲ್ಲಿಂದಲೋ ತೂರಿ ಬಂದು ಮೊಳಕೆಯೊಡೆಯಲು ಪ್ರಾರಂಭಿಸುತ್ತದೆ. ವಿಶ್ವಾಮಿತ್ರನಂತಹ ಉಗ್ರತಪಸ್ವಿಯೂಸಹ ಕಾಮದ ಕೈಗೊಂಬೆಯಾಗಿ ಕುಣಿಯುತ್ತಾನೆ. ತನ್ನ ಯಾವ ತಪ್ಪೂ ಇಲ್ಲದ ಕರ್ಣ ಜನ್ಮ ದಾರಭ್ಯದಿಂದಲೂ ಪರದೇಶಿಯಾಗಿ ಪರಪುಟ್ಟನಾಗಿ ಬೆಳೆಯಬೇಕಾಗುತ್ತದೆ. ಸುಖ, ಶಾಂತಿ, ಸಮಾಧಾನಗಳಿಂದ ತುಂಬಿ ತುಳುಕುತ್ತಿದ್ದ ಸಂಸಾರದಲ್ಲಿ ಬೆಂಕಿಯು ಬೀಳುತ್ತದೆ. ಆ ಸುಖಶಾಂತಿಗಳು ಕೂಡಲೆ ದಹಿಸಿಹೋಗಿ ಕರಾಳ ದುಃಖಕ್ಕೆ ಬಲಿಯಾಗುತ್ತದೆ. ಇದೇನು ವಿಚಿತ್ರ ? ಇದೇ ಬಾಳಿನ ರಹಸ್ಯ ! ಈ

ರಹಸ್ಯದಲ್ಲಿಯೇ ಇಹದ ಸ್ವಾರಸ್ಯವಿದೆ. ಎಂದ ಹಾಗಾಯಿತು. ಆದಕ್ಕೆ ಸೊಪ್ಪು ಹಾಕದೆ ಮಾನವನು ಎಲ್ಲವನ್ನೂ ಯೋಧನಂತೆ ಎಲ್ಲ ಕಷ್ಟಗಳನ್ನೂ ಎದುರಿಸಿ ಮುಂದೆ ನಡೆಯುವದರಲ್ಲಿಯೇ, ಅಂಥ ಚಿರಂತನ ಹೋರಾಟದಲ್ಲಿಯೇ ಬಾಳಿನ ಗೆಲುವಿದೆ. ವಿಧಿಯ ವಿರೋಧವಾಗಿ ಹೋರಾಟ ನಡೆಸುವ ನೈತಿಕ ಧೈರ್ಯದಲ್ಲಿಯೇ ಜೀವಜೀವನದ ಸತ್ವವಡಗಿದೆಯೆಂದು ನಿರ್ವಿವಾದವಾಗಿ ಹೇಳಬಹುದು. ಇಂಥ ಹೋರಾಟಗಾರನೇ ಮಹಾತೇಜಸ್ವಿಯಾಗಿ ಬಾಳಬಲ್ಲನು. ಅಂಥ ಬಾಳನ್ನು ಕರುಣಿಸು ದೇವಾ ಎಂದು ಹಂಬಲಿಸುತ್ತದೆ ನನ್ನ ಜೀವ...."

(೩-೭-೧೯೭೦)

ಶ್ರೀ. ಇಂಚಲರ ಜೀವನದೃಷ್ಟಿ ಇದು.

—ಹೀಗೆ ದಿನಚರಿಯನ್ನು ಇಂಚಲರು ಸ್ವಲ್ಪ ಬರೆದರೂ ಕೂಡ, ಪುಟ ಪುಟಗಳಲ್ಲಿ ಅವರ ಅಭಿರುಚಿ ಮನೋಭಾವಗಳು ಸುವ್ಯಕ್ತಗೊಂಡುದನ್ನು ಸಹೃದಯರು ಕಾಣಬಹುದು.

# ಕಾವ್ಯ ಪರಿಚಯ

ಶ್ರೀ. ಎಸ್. ಡಿ. ಇಂಚಲ ಅವರ ಪ್ರಥಮ ಕೃತಿ 'ತರಂಗಿಣಿ'ಯು ೧೯೪೫ ರಲ್ಲಿ ಪ್ರಕಟವಾಯಿತು. ಆ ನಂತರ 'ಸ್ನೇಹಸೌರಭ' 'ಡಿಂಡಿಮ' ಮೊದಲಾದ ಕೃತಿಗಳು ಪ್ರಕಟವಾಗಿ ಆಧುನಿಕ ಸಾಹಿತ್ಯ ಚರಿತ್ರೆಯಲ್ಲಿ ಇಂಚಲರ ಹೆಸರನ್ನು ಅಮರಗೊಳಿಸಿದವು. ಈ ಪರಿಚಯ ಲೇಖನದಲ್ಲಿ ಅವರ ಪ್ರಕಟಿತ ಕೃತಿಗಳ ಸ್ಥೂಲ ನಿರ್ದೇಶನವನ್ನು ಕಾಣಬಹುದು.

## ತರಂಗಿಣಿ

ಧಾರವಾಡ ಮನೋಹರ ಗ್ರಂಥ ಭಾಂಡಾರ, ೧೯೪೫ ಪುಟಸಂಖ್ಯೆ ೧೦+೮೮ 'ತರಂಗಿಣಿ'ಯು ಇಂಚಲರ ಪ್ರಥಮ ಕವನ ಸಂಕಲನ. ಕವನಗಳ ರಚನೆಯ ಕಾಲವು ೧೯೩೦ರಕ್ಕಿಂತಲೂ ಮೊದಲಿನದಿರುವದರಿಂದ ಇಲ್ಲಿಯ ಕವನಗಳಲ್ಲೆಲ್ಲ 'ನವೋದಯ ದೃಷ್ಟಿ' ಸ್ಪಷ್ಟವಾಗಿ ಎದ್ದು ಕಾಣುತ್ತದೆ. ರಾಷ್ಟ್ರದ ಬಿಡುಗಡೆಯ ಮುನ್ನಡೆಯಲ್ಲಿ ಮಿಂಚಿನ ವೇಗದಿಂದ ಐತಿಹಾಸಿಕ ಘಟನೆಗಳು ನಡೆದು ಇತಿಹಾಸ ರೂಪುಗೊಳ್ಳುತ್ತಿರುವ ಸಮಯದಲ್ಲಿ ಹಾಡಿಕೊಂಡ ಇಪ್ಪತ್ತೈದು ಕವನಗಳು ಈ ಸಂಗ್ರಹದಲ್ಲಿವೆ. ಸೃಷ್ಟಿಯ ಚೆಲುವು, ರಾಷ್ಟ್ರಪ್ರೇಮ, ಸಂಸಾರ, ವಾತ್ಸಲ್ಯ ಇಲ್ಲಿಯ ಕವನಗಳಿಗೆ ಮುಖ್ಯ ಪ್ರೇರಣಾಶಕ್ತಿಗಳಾಗಿವೆ. ಹೊಳೆಯು ಯಾವ ಕಟ್ಟುನಿಟ್ಟುಗಳಿಲ್ಲದೆ ತನ್ನಿಷ್ಟ ಬಂದಂತೆ ಸ್ವಾಭಾವಿಕವಾಗಿ ಹರಿಯಬಲ್ಲದೆಂಬುದನ್ನು ಸೂಚಿಸುವದಕ್ಕಾಗಿ ಇಂಚಲರು ತಮ್ಮ ಪ್ರಥಮ ಕವನಸಂಕಲನಕ್ಕೆ 'ತರಂಗಿಣಿ' ಯೆಂದು ಹೆಸರು ಕೊಟ್ಟಿರಬೇಕು. ಜಾನಪದ ಸಾಹಿತ್ಯದಿಂದ ಪ್ರಭಾವಿತರಾದ ಅವರು ಈ ಸಂಕಲನದ ಕೆಲವು ಕವನಗಳಲ್ಲಿ ಅಂತ್ಯಪ್ರಾಸವನ್ನುಳಿಸಿಕೊಂಡು ಬಂದರು. ಹೀಗೆ ಮಾಡಿದರೂ ಕೂಡ ಪ್ರಾಸರಹಿತ ಕವಿತೆಗಳನ್ನು ಧೈರ್ಯದಿಂದ ಪ್ರಕಟಿ

ಸುವಲ್ಲಿ ಎದೆಗಾರಿಕೆಯನ್ನು ತೋರಿದ್ದಾರೆ. "ಎಲ್ಲ ಮಾತುಗಳಲ್ಲಿಯೂ ಈಗಿನದು ಪ್ರಯೋಗಕಾಲ. ಆ ರೀತಿಯಿಂದ ಇಲ್ಲೊಂದು ಹೊಸ ಪ್ರಯೋಗವನ್ನು ನಾಡಿನ ಇದುರಿಗೆ ಇಡಲಾಗಿದೆ." ಎಂದು ಕಾವ್ಯರ್ಷಿ ಮಧುರಚೆನ್ನರು ತಮ್ಮ ಮುನ್ನುಡಿಯಲ್ಲಿ ಬರೆದುದನ್ನು ನೋಡಿದಾಗ ಇಂಚಲರು ಸುಮಾರು ಮೂರು ದಶಕಗಳ ಹಿಂದೆಯೇ ಕಾವ್ಯದಲ್ಲಿ ಹೊಸ ಪ್ರಯೋಗವನ್ನು ಮಾಡಿದರೆಂಬುದು ಸ್ಪಷ್ಟವಾಗುತ್ತದೆ.

'ನಿನ್ನೊಲವೇ ನನ್ನ ಹಾಡು
ಬೇರೆ ಏನು ಹಾಡಲಿ
ನನ್ನ ವಾಣಿಗೆ ನಿನ್ನ ಪ್ರೇರಣೆ
ಬೇರೆ ಏನು ಬೇಡಲಿ ?' (ಮುಡಿಪು)

ಎಂದು ತರಂಗಿಣಿಯ ನಾಂದಿ ಪದ್ಯದಲ್ಲಿಯೇ ಹಾಡಿ ತಮ್ಮ ಕಾವ್ಯವನ್ನು ತಾಯಿಗೆ ಮುಡಿಪಾಗಿಟ್ಟಿದ್ದಾರೆ, 'ಜೀವವನ್ನೇ ದಹಿಸಿ ಸಹಿಸಿ, ನೋವನೆಲ್ಲ ನುಂಗಿ ನಲಿದು, ಭಾವದೇವಿಯಾಗಿ ಬಂದು ನನ್ನ ಬಾಳನೆತ್ತಿಹೆ' ಎಂದು ಹೇಳುವಲ್ಲಿ ತಾಯಿಯ ಬಗೆಗೆ ಅವರ ಹೃದಯದಲ್ಲಿ ಅದೆಂತಹ ಗೌರವ ಭಾವನೆ ಇತ್ತೆಂಬುದು ವ್ಯಕ್ತವಾಗುತ್ತದೆ. ಇಂಚಲರು ಹಾಡಿದ್ದು ತಾಯಿಯ ಹಾಲಿನ ಸವಿಯನ್ನುಂಡಾಗ ಹೊರಹೊಮ್ಮಿದ ಆನಂದದ ಉದ್ಗಾರಗಳನ್ನು, ತಾಯಿಯ ವಾತ್ಸಲ್ಯದ ಸವಿನೆನಹು ಕವಿಯ ಜೀವನದ ಜೀವಾಳವಾಗಿದೆ, ಸ್ಫೂರ್ತಿಯ ಸೆಲೆಯಾಗಿದೆ. ಅಂತಃಕರಣದ ಅಮೃತಕಲಶವಾಗಿದೆ. ಅಂತೆಯೇ ತಮ್ಮ ಮೊದಲ ಕೃತಿಯನ್ನು ಆ ಮಹಾಮಾತೆಯ ಪಾದಪದ್ಮಗಳಲ್ಲಿ ಅರ್ಪಿಸಿ ಸಾರ್ಥಕರಾಗಿದ್ದಾರೆ.

'ತರಂಗಿಣಿ' 'ಬೆಳಗು' 'ಮುಗುವಿನ ಹಂಬಲ' 'ವೈಜನಾಥನ ಬೆಟ್ಟದ ಮೇಲೆ' ಇವು ಕವಿಯ ಪ್ರಕೃತಿ ಪ್ರೇಮದ ನಿದರ್ಶನಗಳಾಗಿವೆ. "ತೇಲ್ವುದೆಲ್ಲವು ತಾನೆ ರಸತರಂಗಗಳೆಂಬ ಹೆಮ್ಮೆಯೆನಗಿಲ್ಲ." ಎಂದು ಮೊದಲ ಪದ್ಯದಲ್ಲಿಯೇ ಹೇಳಿ ಸೌಜನ್ಯವನ್ನು ಪ್ರಕಟಿಸಿದ್ದಾರೆ. 'ಕಿತ್ತೂರ ರಾಣಿ' 'ಶ್ರೀಯುವರಿಗೆ' 'ಮಹಾತ್ಮರ ಭಸ್ಮವಿತರಣ' ಎಂಬ ಕವಿತೆಗಳಲ್ಲಿ ಆದರಾಂಜಲಿಯನ್ನು ಸಲ್ಲಿಸಿದ್ದಾರೆ.

‘ ಕಣ್ಣಿನಿಂದ ಕಿಡಿಯು ಬೀರುತ
ಟಣ್ಣನೇ ಜಿಗಿದೆದ್ದು ಗುಡುಗುತ
ಗಡನೆ ಖಡ್ಗವನ್ನು ಹಿರಿದಳು ’

ಎಂಬುವಲ್ಲಿ ವೀರಶ್ರೀಯೂ,

‘ ಕನ್ನಡಮ್ಮನ ಸಿರಿಯು ಬೆಳೆಸಿ
ಕನ್ನಡಮ್ಮನ ಹಿರಿಮೆಯುಳಿಸಿ
ನಮ್ಮ ಬಾಳಿಗೆ ಬಣ್ಣವೇರಿಸಿ
ಬರಡು ನುಡಿಗೆ ಕಳೆಯು ಬೆರಸಿ
ಮಾಯವಾದನು ! ’

ಎಂಬುವಲ್ಲಿ ಶ್ರೀ. ಬಿ. ಎಂ. ಶ್ರೀಯವರ ಸೇವೆಯ ಸ್ಮರಣೆಯೂ,

‘ ಕಾರಣಿಕ ಸೀಮಾಪುರುಷನ ನವ
ನಮ್ಮ ವಿಶ್ವದ ಜನಕನೆ !
ಸೇವೆಯಲಿ ಹಣ್ಣಾಗಿ ಮಾಗಿ
ಮಧುರನಾಗಿಹ ಯೋಗಿಯೆ ’

ಎಂಬುವಲ್ಲಿ ಗಾಂಧೀಜಿಯವರ ಘನವ್ಯಕ್ತಿತ್ವವೂ ಸುವ್ಯಕ್ತಗೊಂಡಿವೆ. ರಾಷ್ಟ್ರೀಯ ಆಂದೋಲನಗಳ ಪ್ರೇರಣೆಯಿಂದ ಸಾಂಸ್ಕೃತಿಕ ಚೈತನ್ಯ ಮಿಡಿಯುವಂಥ ಕಾಲದಲ್ಲಿ ಇಲ್ಲಿಯ ಕವನಗಳು ರೂಪಗೊಂಡಿರುವದರಿಂದ ಆಗಿನ ಆ ಸತ್ವವು ಕವನಗಳಲ್ಲಿ ಕಂಡುಬರುತ್ತದೆ.

ಬಾಳಿಗೆ ಹಲವಾರು ಮುಖಗಳು. ಕವಿ ಅವುಗಳನ್ನು ಕಂಡು ಹಾಡಿಕೊಳ್ಳುತ್ತಾನೆ. ‘ ಬಾಳಬಳ್ಳಿ ’ ಯಲ್ಲಿ ತನ್ನ ಬಾಳಿನ ಸುಖದುಃಖಗಳನ್ನು ಸುಂದರವಾಗಿ ಅಭಿವ್ಯಕ್ತಗೊಳಿಸುತ್ತಾನೆ.

‘ ದಿನಕೊಂದು ಚೆಂದಾಗಿ ದಿನಕೊಂದು ಬಗೆಯಾಗಿ
ಬಾಳ್ವಳ್ಳಿ ಹಬ್ಬೇದ, ನನ್ನ ಬಾಳ್ವಳ್ಳಿ ಹಬ್ಬೇದ
ದಾಂಗುಡಿಗಳ ಬಿಡುತ ನನೆಕೊನೆ ಹೋಗುತ

ಹಂದರವ ತಬ್ಬೇದ, ಬಾಳ ಹಂದರವ ತಬ್ಬೇದ !
ಬುವಿಯ ಬಾಂದಳದಲ್ಲಿ ಬಾಳಿನ ಬಿಸಿಲಿಗೆ
ಹಿಂದೊಮ್ಮೆ ಕಂದಿತ್ತs
ಬಳುಕಿ, ಬರಡಾಗಿ ನಿಂದಿತ್ತ ।

.... .... ....

ಬಾಳಿನ ಬಿಸಿಲಳಿದು ಹೊಳೆವ ಬೆಳದಿಂಗಳಕೆ
ಹೂಗಳ ತಳೆದ್ವದ
ಮುತ್ತಿನ ಗೊನೆಗಳ ಮುಡಿದ್ವದ !

ಎಂದು ಹೇಳುತ್ತಾನೆ ಕವಿ ಅಳುನಗೆಗಳ ಹೋರಾಟವೇ ಜೀವನದ ಹಿನ್ನೆಲೆಯಲ್ಲವೆ ?

ಬಾಳಿನ ಕ್ರೌರ್ಯವನ್ನು ಕಂಡು ಸಿಡಿಮಿಡಿಗೊಳ್ಳುತ್ತದೆ ಕವಿಹೃದಯ. ಆಗ ಕವಿ— ' ಹೀನವಾಗುತಿಹುದು ಬಾಳು, ಏನು ಕ್ರೌರ್ಯ ಎನಿತು ಕರ್ಮ, ತನ್ನ ತಾನೆ ಇರಿವ ಧರ್ಮ ಏನುದೇನಿದು ! ... .... .... ಎಲ್ಲಿ ನೋಡಿದಲ್ಲಿ ಲೋಕ ಕ್ರೋಧದಲ್ಲಿ ಕುದಿಯುತಿಹುದು ಎಂಥ ಕಾಲವೊ !' ಎಂದು ' ವಿಶ್ವಮೇಧ ' ದಲ್ಲಿ ಉಸಿರುಗರೆಯುತ್ತಾನೆ. ಯಾವ ದಯೆಯೂ ಅಶ್ವಮೇಧವನ್ನು ತಡೆಯದಾದಾಗ ಕವಿ— ' ಮನುಜನೆದೆಯ ಶೂನ್ಯವನ್ನು ತುಂಬೊ ದೇವನೆ !' ಎಂದು ದೇವನನ್ನೇ ಮೊರೆಯಿಡುತ್ತಾನೆ.

ವಿಶ್ವಜೀವನದಂತೆ ವ್ಯಕ್ತಿಜೀವನದಲ್ಲಿಯೂ ರೋಮಾಂಚಕಾರಕವಾದ ವಿಷಮಯ ಘಟನೆಗಳು ಜರುಗುವದು ಸ್ವಾಭಾವಿಕ. ದಾರುಣವಾದ ನೂರಾರು ಕಹಿಗಳು ಬಾಳನ್ನು ಹಿಂಡಿ ಹಿಪ್ಪಿ ಮಾಡುತ್ತವೆ. ಅಂಥದೇ ಒಂದು ಪ್ರಸಂಗ. ' ಜೀವಕ್ಕೆ ಜೀವಾಗಿ ಭಾವಕ್ಕೆ ಬೆಳಕಾಗಿ ಬಾಳ ಬೆಳಗಿದ ರನ್ನೆ ' ಮೊದಲನೆಯ ಹೆಂಡತಿ ಪಾರ್ವತೆವ್ವನವರು ಮಡಿದಾಗ : ' ದೇವನಿಲ್ಲದ ಜಗವ ದೇವಿಯಿಲ್ಲದ ಮನೆಯ ನೇಹವಿಲ್ಲದ ನೆಲೆಯ ಸೇರಲೆಂತು ?' ಎಂದು ಕೇಳುತ್ತಾರೆ. ಬಾಳ ನೋವಿನ ಆತ್ರಕೆ ಆಸರಾಗಿಹ ರನ್ನೆ ಬಾಳಿನಿಂದ ಅಗಲಿದಾಗ ಕವಿಗೆ ಜೀವವಿಲ್ಲದ ದೇಹ ಧರಿಸಿದ ಅನುಭವವುಂಟಾಗುತ್ತದೆ. ಮೊದಲ ಮಗಳು (ಶಾಂತಾ) ಜನಿಸಿದಾಗ, ' ಎದೆಯ ಹಾಲನು ಉಣಿಸಿ ಕಣ್ಣ ಬೆಳಕನು ತುಂಬಿ ಸಣ್ಣ ಜೀವಕೆ

ಚೆಲುವ ಬಣ್ಣ ಇಳಿಸಿ ' ಮೊದಲನೆಯ ಧರ್ಮಪತ್ನಿ ಇಹದಿಂದ ಅಗಲಿದಳು. ಮಕ್ಕಳೆಂದರೆ ಕವಿಗೆ ಬಲು ಪ್ರೀತಿ. ಅದೆಷ್ಟು ಹಾಡಿ ಮುದ್ದಾಡಿದರೂ ತೃಪ್ತಿಯಿಲ್ಲ. ತಬ್ಬಲಿಗಳನ್ನು ಕಂಡರಂತೂ ಕಣ್ಣೀರು ಹೊನಲಾಗಿ ಹರಿಯುತ್ತದೆ. ತಬ್ಬಲಿ ಮಗುವನ್ನು ಕುರಿತು—

" ಅವರೆ ಹೂವಿನ ಬಣ್ಣದರಳಿದ ಮೊಗವನ್ನು
ಮನದುಂಬಿ ಮುದದಿಂದ ಮುದ್ದಿಸುವೆನು
ಮಾತೆಯ ಮುತ್ತಿನ ಭಾಗ್ಯವ ಕಳಕೊಂಡ
ತಬ್ಬಲಿ ನಿನಗಾಗಿ ರೋದಿಸುವೆನು " (ಎರಡು ಸ್ಮೃತಿಗಳು)

ಎಂದು ಕೊರಗುತ್ತಾರೆ. ಹಾಲ್ಜೇನಿನಂತಹ ಕೌಟುಂಬಿಕ ಜೀವನವನ್ನು ವಿಷನಿಮಿಷಗಳು ಕಲಕಿದಾಗ ಮನಸ್ಸು ನೊಂದುಕೊಂಡು ಇಂತಹ ಹಲವಾರು ಹಾಡುಗಳನ್ನು ಹಾಡಿದೆ. ಕರುಣೆ ಇಂಚಲರ ಕಾವ್ಯದ ಪ್ರಧಾನ ಗುಣವೆಂಬುವ ಮಟ್ಟಿಗೆ ' ತರಂಗಿಣಿ ' ಯಲ್ಲಿ ಹರಿದಿದೆ.

ಇಂಚಲರ ಜೀವನದ ಹಂತಹಂತದಲ್ಲೂ ರಾಷ್ಟ್ರಭಕ್ತಿಯ ಆವಿಷ್ಕಾರವನ್ನು ಕಾಣುತ್ತೇವೆ. ಭಾರತೀಯ ಮುಕ್ತಿಗಾಗಿ ಹೋರಾಡಿ ' ಸಾಯುವದೆ ಕಲಿಗೆ ಸೌಭಾಗ್ಯವೆಂದು ತಿಳಿದು ಹುತಾತ್ಮರಾದವರನ್ನು ಕವಿ ಹೀಗೆ ಕಂಡಿದ್ದಾನೆ :

' ಹುತಾತ್ಮರವರು ಸಲೆ ವೀರಸ್ವರ್ಗದಿ ಹೊಳೆಯುತಿರುವರೇನು !
ನಿತ್ಯ ಜೀವಮಯ ಮರಣದಲ್ಲಿ ಮರೆಯಾದ ವೀರರೇನು
ಅವರ ಪುಣ್ಯಬಲದಿಂದ ಭಾರತಿಯು ಹರಸಿ ನಗುತ ನಿಂದು
ಸ್ವಾತಂತ್ರ್ಯ ದಿವ್ಯ ಸಂದೇಶವನ್ನು ಕೊ ! ಬೀರುತಿರುವಳಿಂದು !'

ನಮ್ಮ ಸ್ವಾತಂತ್ರ್ಯ ಧ್ವಜವು ಕವಿಗೆ—

' ಭಾರತದ ಘೋರ ಸ್ವಾತಂತ್ರ್ಯ ಸಮರದಲಿ
ಮಡಿದ ವೀರರೆದೆಯ ರಕ್ತರಂಗದಲಿ ಮೊಳೆತು
ಮೆರೆವ ಮಂಗಳದ ಮುದ್ರೆ ' ಯಾಗಿದೆ.

ಪಡೆದ ಸ್ವಾತಂತ್ರ್ಯವನ್ನು ಅಭಿಮಾನ ಆತ್ಮಶ್ರೀಗಳನ್ನು ಮೆರೆದು ರಕ್ಷಿಸಬೇಕೆಂದು ಜನತೆಗೆ ಹೀಗೆ ಕರೆ ಕೊಡುತ್ತಾರೆ.

'ಸಂದಿರುವ ಸ್ವಾತಂತ್ರ್ಯ ಹಿಂದಿಯರ ಅಭಿಮಾನ
ಆತ್ಮಶ್ರೀಯಿಂದದನೆ ರಕ್ಷಿಪುದೆ ಸನ್ಮಾನ
ಬೀಳುವಿರೊ ? ಬಾಳುವಿರೊ ? ಹೇಳಿ ? ಏನ ?
ಎಂಬುದೇ ಇಂದಿರುವ ನಮಗೆ ಆಹ್ವಾನ ।'
(ಎಂಥ ಜೀವನವಿಂದು !)

ದೇಶಪ್ರೇಮದ ಕುದಿಯನ್ನು ಉಕ್ಕಿಸುವ ಇಂತಹ ಹಲವಾರು ಕವಿತೆಗಳನ್ನು ನಾವಿಲ್ಲಿ ಕಾಣುತ್ತೇವೆ. ಭಾರತ ದೇಶದ ಅಂದಿನ ದುರವಸ್ಥೆಯು 'ದುರ್ಭಾಗ್ಯ ಬಂಗಾಲ' ಎಂಬ ಕವಿತೆಯಲ್ಲಿ ತೀವ್ರತರವಾಗಿ ಹೊರಹೊಮ್ಮಿದೆ.

ಇಂಚಲರು ಟೆನಿಸನ್‌ನ "Home they brought her warrior dead" ಹರೀಂದ್ರನಾಥ ಚಟ್ಟೋಪಾಧ್ಯಾಯ ಅವರ "Marriage Hall" ಹಾಗೂ "Thirst" ಕವನಗಳನ್ನು ಸುಂದರವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಗೇಯತೆ ಭಾವಗೀತೆಯ ಒಂದು ಮುಖವಾದರೆ, ಸಂಕ್ಷಿಪ್ತತೆ ಅದರ ಇನ್ನೊಂದು ಮುಖ'[1] ಭಾವಗೀತೆಯ ಈ ಲಕ್ಷಣವನ್ನು ಕುರಿತು ಇಂಚಲರ ಕವಿತೆಗಳಲ್ಲಿ ನಾವು ಮುಖ್ಯವಾಗಿ ಕಾಣಬಹುದಾಗಿದೆ. ಈ ಸಂಕಲನದ ಕವಿತೆಗಳಲ್ಲಿಯ ಭಾಷೆ ಸರಳವೂ ಸ್ಪಷ್ಟವೂ ಆಗಿದೆ.

"ದೇವನೊಬ್ಬ ತಾ ನಾಮ ಹಲವು ಬಗೆ
ದಾರಿ ಬೇರೆ ಬೇರೆ;
ಅವನ ನಂಬಿ ಜನ ಬಾಳ ನೂಕಿದರೆ
ಬೇವು ಬೆಲ್ಲ ತಾನೆ !" (ಧರ್ಮದೃಷ್ಟಿ)
"ದೇವನಡಿಯ ಚಿರಶಾಂತಿಯನ್ನು ಪಡೆ
ಬರಿದೆ ಕೊರಗಬೇಡೈ !" (ಧರ್ಮದೃಷ್ಟಿ)

---
೧ ಎಸ್. ವಿ. ಪರಮೇಶ್ವರಭಟ್

ಇದು ಕವಿಯ ನಂಬಿಕೆ, ಇದು ಮಾನವಕುಲಕ್ಕೆ ಕವಿಯ ಸಂದೇಶ. ಸ್ನೇಹದ ಸೌರಭವು ಸುತ್ತಲೂ ಸೂಸಿ ಜೀವನವು ಶ್ರೀಮಂತಗೊಳ್ಳಲಿ ಯೆಂಬುದೇ ಕವಿಯಾಶೆ. ಇಲ್ಲಿಯ ಕವನಗಳು ನಾದಮಯವಾದವುಗಳು; ಹಾಡಿದಷ್ಟೂ ಅವುಗಳ ಸೊಬಗು ಸೌಂದರ್ಯ ಹೆಚ್ಚುತ್ತದೆಂಬುದರಲ್ಲಿ ಸಂದೇಹವಿಲ್ಲ.

# ಸ್ನೇಹ ಸೌರಭ

ಬೆಳಗಾವಿ, ಚೇತನ ಪ್ರಕಾಶನ, ಜಾಲಗಾರ ಬೀದಿ,

ಪ್ರಥಮ ಮುದ್ರಣ ೧೯೫೬ ಪುಟ ಸಂಖ್ಯೆ ೮೫+೧೩

ದ್ವಿತೀಯ ಮುದ್ರಣ ೧೯೬೮

ಜನಸಾಮಾನ್ಯರ ಜೀವನಕ್ಕೆ ಒಂದು ಬಗೆಯಾದ ಉದಾತ್ತ ಸಂಸ್ಕಾರವನ್ನು ಕೊಡುವದೇ ಇಂಚಲರ ಕಾವ್ಯದ ಬಹುಮುಖ್ಯ ಉದ್ದೇಶವಾಗಿದೆ. ಆಧುನಿಕ ಜೀವನದ ವಾಸ್ತವತೆಯನ್ನು ಸಮರ್ಥವಾಗಿ ಪ್ರತಿಬಿಂಬಿಸಿ ಇಂದಿನ ಬಾಳಿನ ಕೊಳಕು ಹುಳುಕುಗಳನ್ನು ನಯ ನಾಜೂಕತೆಗಳನ್ನು ಅವರ ಕಾವ್ಯವು ಹೊರಹೊಮ್ಮಿಸಿದೆ. ಆಧುನಿಕ ಭಾವಗೀತೆಗಳಲ್ಲಿ ಅವರು ಬೆಳೆಸಿಕೊಂಡು ಬಂದ ಅಭಿರುಚಿಯಿಂದಾಗಿ ಅವರು ಭಾವಗೀತೆಗಳನ್ನು ಸಲೀಲವಾಗಿ ರಚನೆ ಮಾಡಿದರು. ಛಂದಸ್ಸಿನ ಹಿಡಿತವು ಅವರಿಗೆ ಚೆನ್ನಾಗಿ ಸಾಧಿಸಿದ್ದರಿಂದ ಅವರ ಭಾವಗೀತೆಗಳು ಪ್ರಾಣವನ್ನೊಳಗೊಂಡು ಹೊರಹೊಮ್ಮಿ ಬಂದವು.

‘ ಸ್ನೇಹ ಸೌರಭ ’ ವು ಕವಿಯ ಸ್ನೇಹ ಜೀವನದಲ್ಲಿ ಹೊರಹೊಮ್ಮಿದ ಕಾವ್ಯಸೌರಭವಾಗಿದೆ. ಸ್ನೇಹದಿಂದ ಜೀವನವು ಶ್ರೀಮಂತವಾಗುವದೆಂದು ನಂಬಿ ನಡೆದವರು ಇಂಚಲರು. ಸ್ನೇಹ–ಸೌಂದರ್ಯಗಳ ವಿವಿಧ ಮುಖಗಳ ಸೂಕ್ಷ್ಮ ಪರಿಚಯವನ್ನು ಈ ಸಂಕಲನವು ಮಾಡಿಕೊಡುತ್ತದೆ.

ಇಂಚಲರ ಕಾವ್ಯದ ವಿಷಯವಾಗಿ ಬರೆದಿರುವವರು ಅವರ ಕಾವ್ಯದ ಹಲ ಕೆಲವು ವೈಶಿಷ್ಟ್ಯಗಳನ್ನು ಗಮನಿಸಿದ್ದಾರೆಂದು ಹೇಳಬಹುದಾಗಿದೆ.

‘ .. ....ಇಲ್ಲಿನ ಕವನಗಳಲ್ಲಿ ಕುಸುಮ ಕೋಮಲವಾದ ಕವಿ ಹೃದಯವೊಂದು ಪ್ರಸನ್ನ ಲಲಿತಪದ ವಿನ್ಯಾಸಗಳಿಂದ ಅನುದ್ವಿಗ್ನ ಜೀವನ

ದೃಷ್ಟಿಯಿಂದ, ಸೌಂದರ್ಯ ಸೌಕುಮಾರ್ಯಗಳ ಒಲವಿನಿಂದ ಮನಸ್ಸನ್ನು ಮೆಚ್ಚಿಸುತ್ತದೆ....'[1]

'....ಸ್ನೇಹ ಸೌರಭವು ಕವಿಕಂಡ ಅನುಭವದ ಸಂಗೀತವಾಗಿದೆ. ಅದರ ಕಂಪು ಸುತ್ತಲೂ ಹರಡುವದೆಂಬುದರಲ್ಲಿ ಆಸೆಯಿದೆ...'[2]

' ಕವಿ ಇಂಚಲ ಅವರ ಕವಿತೆಗಳಲ್ಲಿ ಅಳವಡುವ ಪ್ರಾಸ ನಿಜವಾಗಿಯೂ ಭಾವಾಭಿವ್ಯಕ್ತಿಗೆ ಪೋಷಕವಾದುದು.'[3]

ಈ ಮಾತುಗಳು ಇಂಚಲರ ಕಾವ್ಯದ ಜನಪ್ರಿಯತೆಯ ಅಂಶವನ್ನು ಎತ್ತಿ ತೋರಿಸುತ್ತದೆ.

ಸ್ನೇಹ ಜೀವನದಲ್ಲಿ ಹೊರಸೂಸಿದ ' ಸ್ನೇಹ ಸೌರಭ ' ವು ಮೂವತ್ನಾಲ್ಕು ಗೀತೆಗಳ ಸುಂದರ ಸಂಕಲನ.

" ಅರೆ ಮರೆಹಿನ ದಾರಿಯೊಳಾನಲೆಯುತಲಿರೆ ಬಂದು
ಯಾವುದೊ ಋಣ ಧಾರುಣಿಯೊಳು ಧಾವಿಸಿತದೊ ಸಂದು

ಸಂಪ್ರೀತಿಯು ಸಾಕಾರವೋ ನಿಜ ನೇಹದ ಸಿಂಧು
ಸದುವಿನಯದ ಮೃದು ಹೃದಯದ ಮಾಧುರ್ಯ ತಂಬು"

ಎಂದು ಪ್ರಾರಂಭವಾಗುತ್ತದೆ. ಸ್ನೇಹ – ಸೌರಭ ಕವಿತೆ. ಸಂಪ್ರೀತಿಯು ಸಾಕಾರ ರೂಪದಲ್ಲಿ ಸ್ನೇಹ ಜೀವನವು ಕವಿಗೆ ಗೋಚರಿಸಿ ಕವಿಯ ಜೀವನವನ್ನು ಪಾವನಗೊಳಿಸುತ್ತದೆ.

" ಜೀವನದಲಿ ಸಾವಿನ ಬಲೆ ಹೆಣೆದಿಹುದಲ್ಲಲ್ಲಿ
ಜೀವವು ಸಲೆ ಸಾಗಿದೆ ಚಿರ ಸ್ನೇಹದ ಮಡಿಲಲ್ಲಿ "

---

೧. ಶ್ರೀ. ಜಿ. ಎಸ್ ಶಿವರುದ್ರಪ್ಪ ' ಪುಸ್ತಕ ಪ್ರಪಂಚ '
೨. ಪ್ರಬುದ್ಧ ಕರ್ನಾಟಕ, ಮೈಸೂರ
೩. ಡಾ. ಡಿ. ಎಸ್. ಕರ್ಕಿ ' ಸ್ನೇಹ ಸೌರಭ ' ನೇಹವನುಡಿ !

ಎಂದು ಜೀವನದ ವಾಸ್ತವಿಕ ಸತ್ಯವನ್ನು ತೋರಿ, ಜೀವ ಸ್ನೇಹಗಳ ಮಧುರ ಬಾಂಧವ್ಯವನ್ನು ಕವಿತೆಯಲ್ಲಿ ಬೆಸೆಯುತ್ತಾರೆ. ಸ್ನೇಹದೃಷ್ಟಿ ಹಾಗೂ ಸೌಂದರ್ಯದೃಷ್ಟಿಗಳು ಕವಿಯ ಬಾಳಿನಲ್ಲಿ ಸಲೀಸಾಗಿ ಬೆರೆದು ಬಂದುದನ್ನು 'ಸ್ನೇಹ ಸೌರಭ' ದಲ್ಲಿ ಕಾಣಬಹುದು. ಅದನ್ನೇ ತಮ್ಮ ಪ್ರಾರಂಭದ ಕವನ ದಲ್ಲಿ ಹೀಗೆ ತೋರಿಸಿದ್ದಾರೆ.

" ನಾನರಿಯದ ಸೌಂದರ್ಯದ ಸಾನಂದದ ನೆಲೆಯು
ಬಾನಂಚಿಗೆ ಬೆಳಗುತಲಿಹ ಹೂದಿಂಗಳ ಕಳೆಯು
ನನ್ನೆದೆಯಲಿ ತುಂಬಿತು ತುಳುತುಳುಕುತಲಿಹ ಕೆಳೆಯು
ತನ್ನನೆ ತಾ ತೆರೆಯಿತೊ ಆಹಾ, ಎಂಥದೊ ಬಾಳ್ಸವಿಯು !"

(ಸ್ನೇಹ ಸೌರಭ)

'ಅನವರತವಾದ ಈ ಚಿರಸ್ನೇಹದ ಗರುಡ ರಕ್ಷೆಯಲ್ಲಿ ಮಾನವನ ಬದುಕು ನಿರಾತಂಕವಾಗಿ ಸಾಗಿದೆ.'[4] ಇಂಚಲರದು ಪ್ರಕೃತಿಯ ಕಣಕಣದಲ್ಲಿ ಯೂ ಘನತೆ ಗಾಂಭೀರ್ಯಗಳನ್ನು ಕಾಣುವ ದೃಷ್ಟಿ.

" ಹಸಿರು ಹುಲ್ಲಿನ ಮೇಲೆ
ಎಸೆವ ಬಿಸಿಲಿನ ಲೀಲೆ
ಹೊಸತೊಂದು ಸೋಜಿಗವ ತೋರುವನಿತು
ಹಸಿರು ಆ ಹಾಸಿಗೆಯು
ಹಸೆಯ ಮೇಲೊರಗಿಹವು
ಸೂಸಿ ಮಂಜಿನ ಹನಿಗಳೆನಿತು ಎನಿತೋ.
ಒಂದೊಂದು ಹನಿಯುತಾ
ನೊಂದೊಂದು ತೆರನಾಗಿ
ಒಂದೆ ವಿಶ್ವದರೂಪ ಬಿಂಬವಾಗಿ
ಹನಿಯ ಕನ್ನಡಿಯಲ್ಲಿ
ಮಿನುಕುತಿದೆ ಸೌಂದರ್ಯ
ಎಣೆಯಿಲ್ಲದಾ ರೂಪಧಾರಿಯಾಗಿ

(ಮಂಜುಹನಿ)

ಎಂದು ಅನ್ನುತ್ತಾನೆ. ಹೀಗೆ 'ಮಂಜುಹನಿ' ಯಲ್ಲಿ ಕಂಡ ಕವಿಯ ಸೌಂದರ್ಯದ ಅನುಭವವು ಜೀವಂತವಾಗಿದೆ. 'ಬಗೆ ಬಗೆಯ ರೂಪರಸ ರಾಗದಲಿ ಯೋಗದಲಿ ಚೈತನ್ಯ ಜಗದಂದವಾಗಿ' ನೆಗೆಯುತ್ತಿರುವದನ್ನು ಕವಿ ಕಂಡುಂಡು ನಲಿದಿದ್ದಾನೆ.

ಬಿಸಿಲು ಮಳೆಯನ್ನು ವರ್ಣಿಸುವ ರೀತಿ ಮನಮೋಹಕವಾಗಿದೆ.

"ತುಂಬಿಮಾಗಸದಿಂದ
ಮುಗಿಲ ಹಿಂಡಿದ ತೆರದಿ
ಭೋರೆಂದು ಬಿಸಿಲು ಮಳೆ ಸುರಿಯುತ್ತಿತ್ತು
ಬಿಸಿಲಿದ್ದು ಮಳೆ ಬಂದು
ಹೊಸತೊಂದು ಸೊಗತಂದು
ಎಸೆವ ಭೂಮಿ ಬಾನುಗಳ ಬೆಳಗುತ್ತಿತ್ತು.
...........................
ಆಲಿಕಲ್ಲರಳಾಗಿ
ಇಳೆಗಿಳಿಯುತಿರೆ ಕರಗಿ
ಹೂಮಳೆಯು ಅಂಗಳದಿ ಸುರಿಯುತ್ತಿತ್ತು"

(ಬಿಸಿಲು ಮಳೆ !)

ಇಂಥ ಹರುಷದ ವಾತಾವರಣದಲ್ಲಿ ಚಿಕ್ಕಮಕ್ಕಳು ನಲಿದಾಡುತ್ತಾರೆ. ಇದನ್ನು ಕಂಡು ಕವಿ ಆಲಿಕಲ್ಲರಳಾಗಿ ಶಿವನ ಸಕ್ಕರೆಯ ರೂಪದಲ್ಲಿ ಸೂರೆಗೊಳ್ಳುತ್ತಿತ್ತೆಂದು ಹೇಳುತ್ತಾನೆ. ಈ ಹೇಳಿಕೆ ತುಂಬ ಔಚಿತ್ಯಪೂರ್ಣವಾಗಿದೆ. ಮಳೆಯಲ್ಲಿ ಸುರಿಯುವ ಬಿಳಿಯ ಆಲಿಕಲ್ಲುಗಳು ಕವಿಯ ಕಣ್ಣಿಗೆ ಶಿವನ ಸಕ್ಕರೆಯಾಗಿ ಸೂರೆಯಾಗುತ್ತಿರುವಂತೆ ಕಾಣುತ್ತದೆ. ಇಲ್ಲಿಯ ಉಪಮೆಗಳು ಸುಂದರವಾಗಿವೆ. ಇಂಥ ಸುಂದರ ದೃಶ್ಯವನ್ನು ಕಂಡು ಮೈಮರೆತ ಕವಿ ಮನವು ಬಾಲ್ಯದ ದಿನಗಳನ್ನು ನೆನೆನೆನೆದು ಮರಳಿ ಮಾತೆಯ ತೊಡೆಯನೇರಿ ನಲಿಯ ಬಯಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ.

೪. ಶ್ರೀ. ಎಸ್. ಡಿ, ಇಂಚಲ, ಸ್ನೇಹಸೌರಭ ; ನಿವೇದನೆ, vi

ಜನತೆಯ ಕಲ್ಯಾಣವನ್ನು ಸದಾವಕಾಲ ಬಯಸುವ ಕವಿಯ ಮನಸ್ಸು ಸ್ನೇಹ ಸೌರಭವು ಸುತ್ತಲೂ ಸೂಸಿ ಬದುಕನ್ನು ಶ್ರೀಮಂತಗೊಳಿಸಲೆಂದು ಹಾರೈಸುತ್ತದೆ.

" ವಿರಸವೆಂಬುದ ತಾಳಿ
ಸರಸದಿಂದಲಿ ಬಾಳಿ
ಸಮರಸವಾಗಿ ಸಾಗೋಣ " (ಬಾಳ ಜೋಕಾಲಿ)

" ಬಾಳಿನ ಬೇವೂ ಬೆಲ್ಲವ ಮೆಲ್ಲುತ
ಜೀವನ ನೌಕೆಯ ನೂಕೋಣ
ತ್ಯಾಗವೆ ಜೀವನ ಸೇವೆಯೆ ಸಾಧನ
ವೆನ್ನುತ ಹುಟ್ಟನು ಹಾಕೋಣ !" (ಯುಗಾದಿ)

" ವೊಳಿಕೆ ನೀ ಮರವಾದಿ
ಮಳೆಬಿಸಿಲುಗಳ ನೀಗಿ
ಇಳೆಗೆ ನೆರಳಾಗು ನೀ ತ್ಯಾಗಿಯಾಗಿ
ತ್ಯಾಗವೇ ಬಿಡುಗಡೆಯು
ಭೋಗವೇ ಬಂಧನವು
ಯೋಗವೇ ಜೀವನವು ಬಗೆಯಲಾಗಿ !"

(ತಬ್ಬಲಿ ವೊಳಕೆ)

ಕವಿಗೆ ಕನ್ನಡ ನಾಡನ್ನು ಕುರಿತು ತುಂಬಾ ಪ್ರೇಮ. ಹಲವಾರು ರೀತಿಗಳಲ್ಲಿ ಈ ಸಾತ್ವಿಕ ಪ್ರೇಮವು ಅಲ್ಲಲ್ಲಿ ಮಿಡಿಯುತ್ತದೆ. 'ಕಟ್ಟೋಣ ಕನ್ನಡದ ಗುಡಿಯ' 'ಕನ್ನಡಂ ಬಾಳ್ಗೆ' 'ಕರುನಾಡ ಕಂದನಿಗೆ' ಕವನಗಳಲ್ಲಿ ಇದು ಸುವ್ಯಕ್ತಗೊಂಡುದನ್ನು ಸಹೃದಯರು ಕಾಣಬಹುದು.

" ಬೆವರನ್ನೆ ಭೂಮಿಗೆ ಸುರಿಸಿ, ಕರುಳನ್ನೆ ಕೂಡಿಸಿ ಬೆರಸಿ

ಮೈ ಮಾನಗಳನ್ನು ಸುಖವನ್ನು ಧನಕನಕವನ್ನು ಸಿರಿಯನ್ನು
ತಾಯಿಯ ನುಡಿಯ ಸೇವೆಗೆ ಸಲಿಸಿ ಜನ್ಮವನೆ ಸಾರ್ಥಕಗೊಳಿಸಿ "

ಕನ್ನಡದ ಗುಡಿಯು ಕಟ್ಟಲು ಕವಿ ಕರೆಯುತ್ತಾನೆ.

ಜಾತಿ ಮಸ್ತರದುರಿಯು ಜಗದ ಸಾತ್ವಿಕ ಬಾಳನ್ನು ದಹಿಸುತ್ತಿರುವುದನ್ನು ಕಂಡ ಕವಿ --

" ಯಾರೆಲ್ಲ ಬನ್ನಿ ಶುಭವೆನ್ನಿ, ತಾಯಡಿಗೆ ಕಾಣಿಕೆಯು ತನ್ನಿ
ಎದೆಯೊಲವೆ ತಾಯಿಯ ನಿಲಯು
ಅದ ನೀಡದವನೆ ತಾ ಹೊಲೆಯು " ಎನ್ನುತ್ತಾನೆ.
" ಪಂಥಗಳ ತೊರೆದು ಪಕ್ಷಗಳ ಮರೆದು
ಎಂಥವರೂ ಎಲ್ಲರೂ ನೆರೆದು"

(ಕಟ್ಟೋಣ ಕನ್ನಡದ ಗುಡಿಯು)

' ನನ್ನಿಯೂ ' ಸುಂದರ ನಾಡನ್ನು ಕಟ್ಟಲು ನಾಡವರಿಗೆ ಕರೆ ನೀಡುತ್ತಾನೆ.

" ಓ ! ಏನಿದನ್ಯಾಯ ತಿಮಿ ತಿಮಿಂಗಿಲ ನ್ಯಾಯ ।
ಅನ್ಯಾಯಕಿತಿಯುಂಟು ಸ್ವೈರಣೆಗೂ ಮಿತಿಯುಂಟು
ನಾಡಿನೊಳ್ಳೆಯ ಕಿಚ್ಚು ನಭಕೆದ್ದು ಕೆರಳುತಿದೆ
ತಪ್ತಲಾವಾರಸಕೆ ತಾಯೊಡಲು ಕುದಿಯುತಿದೆ "

ಕವಿಯು ಕರುನಾಡಕಂದನು ಜಾತಿಮತ ಭಾಷೆಗಳ ವಿಷಗಾಳಿಗೆ ಸಿಲುಕದೆ ತಾಯುಡಿಗೆ ಆತ್ಮದಾರತಿಯನೆತ್ತುವ ನಾಡೋಜನಾಗಿ ಮೆರೆದಿದ್ದಾನೆ. ಅತನು ಭಾರತಾಂಬೆಯ ತನುಜನಾಗಿದ್ದಾನೆ.

" ಕರುನಾಡ ಕಂದ ನೀ ಭಾರತದ ಅರುಣ ನೀ
ನವ್ಯತೆಯ ನವಿರು ನೀನು !
ಹಿರಿಯರಂತ:ಕರಣ ನಿನಗೆ ವಜ್ರಾಭರಣ
ಸ್ವಾತಂತ್ರ್ಯಕಿರಣ ನೀನು !"

(ಕರುನಾಡ ಕಂದನಿಗೆ)

ಇದೇ ಬಗೆಯ ರಾಷ್ಟ್ರೀಯ ಪ್ರಜ್ಞೆ ಅನೇಕ ವಿಧವಾಗಿ ವ್ಯಕ್ತವಾದುದನ್ನು ಇಲ್ಲಿ ಕಾಣಬಹುದು. ' ಹಳ್ಳಿಯ ಹಿರಿಮೆ ' ' ಭಾರತ ಭಾಗ್ಯೇಶ್ವರಿ ' ' ನವ್ಯ

ಜ್ಯೋತಿ ' ' ನವಯುಗದ ಕಾರಣಿಕ ' ಮೊದಲಾದ ಪದ್ಯಗಳೇ ಇದಕ್ಕೆ ಸಾಕ್ಷಿ. "ಯುಗ ಯುಗ ತೊಳಗಿದ ಮಾನವ ಪ್ರೀತಿಯ ನೀತಿಯ ಭಾರತ ಸಂಸ್ಕೃತಿಯು" ಎಂದು ಕವಿ " ಸಮತೆಯ ನೀತಿಯು, ಸೇವೆಯ ಧರ್ಮವು ಬೆಳಗಿದ ಯುಗ" ವನ್ನು ತೆರೆಯಲು ಮುಂದಾಗುತ್ತಾನೆ. ಭಾರತ ಮಾತೆಯ ಆತ್ಮಶಕ್ತಿಯಲ್ಲಿ ಅಮಿತ ಬಲ ಹುದುಗಿದೆಯೆಂದು ಹೇಳುವ ಕವಿ—" ಭಾರತದ ಆದೇಶ ನವ ಯುಗಕೆ ಸಂದೇಶ ದೊರೆಯಲಿದೆಯುದರಿಂದ ವಿಶ್ವಶಾಂತಿ ! ಓ ಚಕ್ರಪಾಣಿ ! ನವಭಾರತದ ಕಲ್ಯಾಣ, ನಡೆಮುಂದೆ ಜಗಕಿನ್ನು ನೀನೆ ಕಾಂತಿ " ಎಂದು ಹೇಳುತ್ತಾರೆ. ಇಂಚಲರ ಜೀವನದರ್ಶನವು ಅವರ ಅನೇಕ ಕವನಗಳಲ್ಲಿ ಕಂಡು ಬರುತ್ತದೆ, ನ್ಯಾಯ, ನೀತಿ, ಸತ್ಯ, ಪ್ರೇಮಗಳು ನಮ್ಮ ಜೀವನವನ್ನು ಬೆಳಗುವವೆಂದು ಅವರು ನಂಬುತ್ತಾರೆ.

" ನ್ಯಾಯ ನಿಷ್ಠುರ, ಸತ್ಯ ಸನ್ಮತಿ
ನಾಡಿನುಸಿರಲಿ ಸೂಸಲಿ

ಪ್ರೇಮ ಮಂದಿರ ನೀತಿ ಚಂದಿರ
ನಾಡಿನಂಚಿಗೆ ಉದಿಸಲಿ "

(ನವ್ಯಜ್ಯೋತಿ)

ಎಂದು ಹಾಡಿದ್ದಾರೆ. ನಮ್ಮ ಭಾರತವು ವಿಶ್ವಶಾಂತಿಗೆ ಕಾಂತಿಯಾಗಿ ಬೆಳಗಬೇಕೆಂದು ಕವಿ ಬಯಸುತ್ತಾನೆ. "ಸ್ವಾರ್ಥವನು ತುಳಿತುಳಿದು ಕೊಳೆಯನ್ನು ತೊಳೆತೊಳೆದು ಭಾರತದ ಭಾಗ್ಯವನ್ನು ಬೆಳಗಲು ಭಾರತೀಯರನ್ನು ಹೀಗೆ ಹುರುದುಂಬಿಸುತ್ತಾನೆ:

" ನಮ್ಮ ಭಾರತವನ್ನು ದಿವ್ಯತರವಾಗಿಸಲು
ಎದೆಯ ಸೋಪಾನಗಳ ನಿರ್ಮಿಸೋಣ ''

( ಭಾರತ ಭಾಗ್ಯೇಶ್ವರಿ)

" ನಾವಲ್ಪರೆನಲೇಕೆ ? ಬಿಂದು ಬಿಂದುಗಳಲ್ಲಿ
ಭೂಮ ಸಾಹಸ ಶಕ್ತಿ ಸುಪ್ತವಿಹುದು

ನಿರ್ವಿಕಾಸವೆ ಹವಳಹುಳು ಖಂಡ ಬ್ರಹ್ಮಾಂಡಗಳ
ಅಲ್ಪರೊಳದ್ಭುತದ ಕೃತುಶಕ್ತಿಯಿಹುದು "

(ಭಾರತ ಭಾಗ್ಯೇಶ್ವರಿ)

" ಸಹನೆಯೆ ತಾನಾಗಿ ಸತ್ಯಚೇತನವಾಗಿ ಕೃತಿಗೈವ'' ಧೀರನ ಹೃದಯಾಂತರಾಳದಲ್ಲಿ '' ಕಲ್ಯಾಣ ರಾಜ್ಯದ ಅರುಣ ಗೀತವು '' ಚಿಮ್ಮುವದೆಂದು ಕವಿ ಹೇಳುತ್ತಾನೆ.

" ನಿನ್ನಾತ್ಮ ಶಕ್ತಿಯಲಿ ಹುದುಗಿಹುದು ಅಮಿತಬಲ '
ಎದ್ದೇಳು ಸಿದ್ಧಿಗೈ ಲೋಕಹಿತಕೆ "

( ಭಾರತ ಭಾಗ್ಯೇಶ್ವರಿ)

ಇದು ಕವಿಯ ಸಂದೇಶ.

ಅಷ್ಟಷಟ್ಪದಿಯ ಕಾವ್ಯ ಪ್ರಕಾರವನ್ನು ವ್ಯಕ್ತಿಚಿತ್ರಣಕ್ಕಾಗಿ ಇಂಚಲರೂ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. '' ಆ ಅಷ್ಟಷಟ್ಪದಿಗಳ ಬಂಧ ಬಂಧುರವಾಗಿರುವದಲ್ಲದೆ ಶೈಲಿ ಸಲೀಲವಾಗಿ ಪ್ರವಹಿಸುತ್ತದೆ. ಅವುಗಳಲ್ಲಿ ಕಳೆಗೊಂಡು ನಿಂತ ವ್ಯಕ್ತಿಗಳಿಗೂ ಕವಿಗೂ ಇರುವ ಪ್ರೇಮಾದರಗಳ ಸಂಬಂಧ ಅವುಗಳಲ್ಲಿ ಎದ್ದು ಮೂಡಿದೆ. ಮಾತು ರಾಗರಸದಲ್ಲಿ ತೇಲಿ ಬಂದಿದೆ."[5]

' ಸಾಹಸಜೀವಿ ಸಾಖರೆಯವರಿಗೆ ' ' ದಿವಂಗತ ಪ್ರೊ. ಬಾಗಿಯವರಿಗೆ ' ' ವಿದ್ಯಾದಾನಿ ಶ್ರೀ ಹಂಚಿನಾಳರಿಗೆ ' ' ಮಮತಾಪೂರ್ಣ ಶ್ರೀ. ಮಮದಾಪೂರರು' ಕಾಯಕವೀರ ಶ್ರೀ. ಕಟ್ಟೀಮನಿಯವರು' 'ಕನ್ನಡ ರಕ್ಷಾಮಣಿ ಡೆಪ್ಯುಟಿ ಚೆನ್ನಬಸವಪ್ಪನವರು ' ಇವೇ ಮೊದಲಾದ ಅಷ್ಟಷಟ್ಪದಿಗಳು ಪರಿಣಾಮಕಾರಿಯಾಗಿ ಮೂಡಿಬಂದಿವೆ. ಮಹಾವ್ಯಕ್ತಿಗಳ ಜೀವನದ ಆದರ್ಶಗಳನ್ನು ಕವಿ ಸುಂದರವಾಗಿ ಇಲ್ಲಿ ಚಿತ್ರಿಸಿದ್ದಾನೆ.

---

೫. ಡಾ. ಡಿ. ಎಸ್. ಕರ್ಕಿ, ಸ್ನೇಹಸೌರಭ ನೇಹದನುಡಿ iv

“ ಸತ್ಕಾರ್ಯದಾಸಕ್ತಿ ಮೂರ್ತಿಮಂತಾದಂತೆ
ಸತ್ಯಸಾಹಸ ನೀತಿ, ಲೋಕಸೇವಾ ಪ್ರೀತಿ
‘ ಸಾಖರೆ ’ಯ ಪೆಸರಿನೊಳು ಸಿದ್ಧಿ ವಡೆದಾಯ್ತು
ಸಕ್ಕರೆಯ ಸವಿಯಂತೆ ನಿಮ್ಮೆದೆಯ ಸವಿಯು ”

(ಸಾಹಸಜೀವಿ ಸಾಖರೆಯವರಿಗೆ)

“ ಬಾಳ ಬಾಳಿದಿರಿ ತ್ಯಾಗದಿಂ, ಮೌನಯೋಗಿಯಾಗಿ
ಸತ್ಯ ಸೌಂದರ್ಯ ಸಂಪ್ರೀತಿ ಸಮರಸವಾಗಿ ”

( ದಿವಂಗತ ಪ್ರೊ. ಬಾಗಿಯವರಿಗೆ)

“ ಶಿಶುಸಹಜ ಮಧುರ ಸುಂದರ ಮುಗ್ಧ ಜೀವನಂ
ಮರಳಿ ಪಡೆದಿಹ ನೀವೆ ಧನ್ಯಂ ಚಿರಂ ಪಾವನಂ ”

(ವಿದ್ಯಾದಾನಿ ಶ್ರೀ. ಹಂಚಿನಾಳರಿಗೆ)

“ ನಾಡ ತಬ್ಬಲಿಗಳಂ ತಬ್ಬಿ ಸಂತಯಿಸಿ
ತಾಯಾಗಿ ಎತ್ತಿದಿರಿ ತೇಜವಂ ತುಂಬಿದಿರಿ

..................

ಅಧಿಕಾರ ಐಶ್ವರ್ಯ ಕೀರ್ತಿಗಳ್ಗೆಳಸದೆಯೆ
ಲೋಕಕಲ್ಯಾಣ ಸಾಧನೆಯ ಯೋಗಿ !”

(ಮಮತಾಪೂರ್ಣ ಶ್ರೀ. ಮಮದಾಪೂರರು)

ಎಂದು ಹೇಳಿದ ಮಾತುಗಳು ವಾಸ್ತವಿಕವೆನಿಸಿವೆ. ಕೆಲವು ಅಷ್ಟಪಟ್ಪದಿಗಳ ಕೊನೆಯ ಚರಣಗಳಲ್ಲಿ ಜೀವನದ ಸಾರವನ್ನು ಕಾಣಬಹುದು.

“ ತಿರಿದರೂ ತೀರ್ಥವದು ಲೋಕಶಿಕ್ಷಣಕಾಗಿ
ಜೀವನದ ಮರ್ಮವಿದೋ ಕರ್ಮಯೋಗಿ !”
“ ಚಿತ್ರಕಲೆ ಚಿರ ತಪಸ್ಸಾಧನೆಯ ದೃಷ್ಟಿಯಲಿ
ಸೃಷ್ಟಿಯೇ ಸುಂದರಂ, ಶಾಶ್ವತಂ, ಶಿವಮಯಂ !”

ಹಾಗೆಯೇ—

" ಧನ್ಯ ತವ ಜೀವನಂ ಸಂಯಮವೆ ಸಾಧನಂ
ಪುಣ್ಯ ಜೀವನ ಫಲಂ ಶಿವಗರ್ಪಿತಂ ವಲಂ !"

ಹೀಗೆ ಕರ್ಮಯೋಗದ ಸಂದೇಶವನ್ನು ಸಾರಿದ್ದಾರೆ.

ಸಮಾಜದಲ್ಲಿಯ ಅನ್ಯಾಯ, ಮೋಸ, ಹೊಗಳಿಕೆ, ತೆಗಳಿಕೆ, ಕಳ್ಳತನ ಕಂಡು ಕವಿಯ ಮನಸ್ಸು ಕೆರಳುತ್ತದೆ. ಈ ಸಮಯದಲ್ಲಿ–

ಬದಲಾಗುತಿದೆಕಾಲ,
ಮೊದಲಾಗುತಿದೆ ಶೂಲ,
ಅಗ್ನಿ ಪರೀಕ್ಷೆಯಿದೊ ನಿತ್ಯ ನಿನಗೆ
ತತ್ವದಾನಿಷ್ಠೆಯಿಂದಾತ್ಮವನು ಪಣಕಿಟ್ಟು
ಮುನ್ನಡೆವುದೆ ಸತ್ಯ ಮಾರ್ಗ ತನಗೆ "

(ಸೇವೆಯೇ ಪೂಜೆ)

" ತ್ಯಾಗವೇ ಬಿಡುಗಡೆಯು, ಭೋಗವೇ ಬಂಧನವು
ಯೋಗವೇ ಜೀವನವು ಬಗೆಯಲಾಗಿ "

(ತಬ್ಬಲಿ ಮೊಳಕೆ)

ಎಂದು ನುಡಿದು ಆತ್ಮಾನುಸಂಧಾನಕ್ಕೆಳಸಲು ಕವಿಯು ದೇವರನ್ನು ಪ್ರಾರ್ಥಿಸುತ್ತಾನೆ.

" ನಾಡು ನಂದನವಾಗಿ ಕಾಡು ಚಂದನವಾಗಿ
ಲೋಕ ಬಾಳಲಿ ಬದುಕು ಬಂಗಾರವಾಗಿ !"

ಎಂದು ಹಾರೈಸುತ್ತಾನೆ. ಹೀಗೆ ಕವಿಯ ಜೀವನದಲ್ಲಿ ಕಂಡುಂಡ ಸಿಹಿಕಹಿ ಅನುಭವಗಳು ಮಾಗಿ ಕಾವ್ಯರೂಪದಲ್ಲಿ ವ್ಯಕ್ತವಾದುದನ್ನು ಈ ಕವನ ಸಂಗ್ರಹದಲ್ಲಿ ಕಾಣಬಹುದು.

# ಡಿಂಡಿಮ

ಗೋಕಾಕ, ಉದಯ ಪ್ರಕಾಶನ, ೧೯೬೫ ಪುಟಗಳು ೧೦೧+೨೨

ಕವಿ ಇಂಚಲರು 'ಡಿಂಡಿಮ' ದಲ್ಲಿ ತಮ್ಮ ರಾಷ್ಟ್ರಪೋಷಕ ದೃಷ್ಟಿಯನ್ನು ವ್ಯಕ್ತಗೊಳಿಸಿದ್ದಾರೆ. 'ನಮ್ಮ ಪವಿತ್ರ ಭಾರತ ಭೂಮಿಯ ಮೇಲೆ ದುರಾಕ್ರಮಣ ಮಾಡಿದ ವೈರಿಗಳನ್ನು ಹೊಡೆದಟ್ಟಿ, ರಾಷ್ಟ್ರೀಯ ಜೀವನದಲ್ಲೊಮ್ಮೆ ಸೀಮೋಲ್ಲಂಘನೆ ಮಾಡಿ ವೀರೋಚಿತವಾದ ತ್ಯಾಗ ಬಲಿದಾನಗಳಿಂದ..... ರಾಷ್ಟ್ರದ ವೀರಶ್ರೀಯನ್ನು ಬೆಳಗಿದ ಪಾವನ ಪ್ರಸಂಗದಲ್ಲಿ'[1] ರಾಷ್ಟ್ರೀಯ ಕವಿಗಳಾದ ಶ್ರೀ ಇಂಚಲರವರ ಪ್ರತಿಕ್ರಿಯೆಯ ಪರಿಣಾಮವಾಗಿ ಮೂಡಿಬಂದ ಕೆಲವು ವೀರಗೀತೆಗಳ ಸಂಕಲನವು 'ಡಿಂಡಿಮ' ವು. ಈ ಮಾತನ್ನು ಕವನ ಸಂಗ್ರಹದ ನಿವೇದನೆಯಲ್ಲಿ ಇಂಚಲರು ಸ್ಪಷ್ಟಮಾಡಿದ್ದಾರೆ "ಸಾಮಾಜಿಕ ಪ್ರಜ್ಞೆ, ರಾಷ್ಟ್ರಾಭಿಮಾನ, ಸ್ವಾತಂತ್ರ್ಯಪ್ರಿಯತೆ ಮೊದಲಾದ ನಾಗರಿಕ ಗುಣಗಳು ಕಾವ್ಯಪ್ರಜ್ಞೆಯಲ್ಲಿ ಮಿಂದು ಪರಿವರ್ತನಗೊಂಡು ಕಾವ್ಯವಾಗಿ ಶ್ರೀ. ಎಸ್. ಡಿ. ಇಂಚಲರ 'ಡಿಂಡಿಮ' ದಲ್ಲಿ ರೂಪಗೊಂಡಿವೆ. ಅವರ ಬುದ್ಧಿಭಾವಗಳ ಸಮನ್ವಯ ಇಲ್ಲಿಯೂ ಹಾಸುಹೊಕ್ಕಾಗಿ ಬಂದಿದೆ. ಕನ್ನಡ ಪ್ರಜ್ಞೆಯುಳ್ಳ ಕವಿಜೀವ ರಾಷ್ಟ್ರದ ಹಾಗೂ ಜಗತ್ತಿನ ಮಹಾಜೀವನದೊಡನೆ ಒಂದಾಗಲು ಇಲ್ಲಿ ಹವಣಿಸಿದೆ. 'ಡಿಂಡಿಮ' ಕನ್ನಡಿಗರೆಲ್ಲರೂ ಈಗ ಕೇಳಬೇಕಾದ ವಾದ್ಯ. ಶ್ರೀಮಾನ್ ಇಂಚಲರ ಕೈಯ್ಯಲ್ಲಿ ಡಿಂಡಿಮವು ತನ್ನದೇ ಆದ 'ಡಿಮ್‌ಡಿಮ್' ತಾಳಲಯವನ್ನು ಪಡೆದಿದೆ"[2] ಎಂದು ವಿನಾಯಕರು ನುಡಿದಿದ್ದಾರೆ. ಇಡೀ ಕೃತಿಯನ್ನು ಅವಲೋಕನ ಮಾಡಿ ನೋಡಿದರೆ ಇದರ ಅರಿವಾಗದೆ ಇರದು.

'ನವಯುಗ' ವನ್ನು ತಮ್ಮ ಪ್ರಾರಂಭದ ಕವನದಲ್ಲಿ ಇಂಚಲರು ಹೀಗೆ ಸ್ವಾಗತಿಸುತ್ತಾರೆ :

---

1. ಶ್ರೀ. ಬಾಳೇಶ ಲಕ್ಷೆಟ್ಟಿ—'ಡಿಂಡಿಮ'
2. ಶ್ರೀ. ವಿ. ಕೃ. ಗೋಕಾಕ (ವಿನಾಯಕ)—'ಡಿಂಡಿಮ'

" ಧಾವಿಸುತಿದೆ ನವಯುಗ ಹೊಸಚರಣಂಗಳ ಚೆಲ್ಲಿ
ತೀವುತೆ ತಂಗಿರಣಂಗಳ ಮನದಂಗಣದಲ್ಲಿ !
ಬರುತಿದೆ ನವಮನ್ವಂತರದಾಂತರ್ಯವ ತೋರಿ
ತರುತಿದೆ ಹೊಸ ಹೊಂಬಯಕೆಯ ಹೂದಿಂಗಳ ತೂರಿ !"
ಹೀಗೆಯೇ, " ಏರುತಲಿದೆ ಇಳಿಯುತಲಿದೆ ದಾರಿಯು ಬಲುದೂರ

ಬಿರುಗಾಳಿಯು ನೆರೆದಾಳಿಯು ಅನುಭವಿಸುತ ನೂರ
ಸಾಗಿದೆ ಬಾಳ್ ಸಾವಿನ ತೋಳ ತೊಟ್ಟಿಲದಲಿ ತೂಗಿ
ತಂಗಿದೆ ಮನ ಸ್ನೇಹದ ಘನತಾನಕೆ ತಲೆವಾಗಿ !"

ಎಂದು ಅನ್ನುವಲ್ಲಿ, ಸಮಗ್ರ ಜೀವನ ದರ್ಶನದ ತಿರುಳನ್ನೇ ಕವಿಯು ಬಿಡಿಸಿಡುತ್ತಾನೆ.

ಪ್ರಪಂಚದೊಳಗಿನ ವಿಷಮ ವಾತಾವರಣವನ್ನು ನಿರ್ದೇಶಿಸುತ್ತ ಕವಿ—

" ಜಗವನಾವರಿಸುತಿದೆ ಕತ್ತಲೆಯ ಕಾರ್ಮೋಡ
ಮುಂಗಾಣದಿದೆ ಮನುಜ ಕುಲಕೋಟಿ ಬಾ ನೋಡ

ಎತ್ತೆತ್ತಲೂ ಮೌಢ್ಯ ಮೆರೆಯುತಿಹುದು,
ಹೊತ್ತಿ ಮಾನವ ಲೋಕ ಉರಿಯುತಿಹುದು !

ಅಧಿಕಾರದಾಮಿಷವು ಅತ್ಯಾಶೆಯಾ ವಿಷವು
ಏಕಾಧಿಪತಿಯಾಗಿ ಲೋಕವಾಳುವ ಹಸಿವು

ಕಾತರದಿ ಕುದಿಯುತಿಹುದು,
ಭೂತಬಲೆ ಬೀಸುತಿಹುದು !"

( ತುಂಬಿ ಬಾ ಹೊಂಬೆಳಕೆ )

' ಎಂದಿರುವುದನ್ನು ನೋಡಿದರೆ, ಅವರ ಅಂತರಂಗದ ಆಳವನ್ನು ಕದಡಿರುವ ತೀವ್ರತಮ ವೇದನೆಯು ಅರ್ಥವಾಗುವದು.'[3]

---

3. ಡಾ. ಸದಾನಂದ ನಾಯಕ ' ಡಿಂಡಿಮ ' ಮುನ್ನುಡಿ

“ ಆತ್ಮತೇಜೋನ್ನತಿಗೆ ಸಲುವಂಥ
ಸೌಭಾಗ್ಯವಂತ
ಒಡವಬಲ್ಲಿದ ಭೇದವಿರದಂಥ
ತ್ಯಾಗಸೇವಾ ನೀತಿ ನಿರ್ಮಲ
ಭೋಗ ಭಾಗ್ಯವನೆತ್ತಿ ತರುವ
ದಿವ್ಯಜೀವನವರಳುವಂತೆ
ನವ್ಯ ಚೇತನ ಹೊಮ್ಮುವಂತೆ !”
(ಭಾರತ ಜನತಾ)

ಭಾರತದ ಜನತೆಯು ಜಾಗೃತಗೊಂಡು ಎದ್ದುನಿಲ್ಲಬೇಕೆಂದು ಕವಿ ಕರೆ ಕೊಡುತ್ತಾನೆ.

“ ಸಮತೆ ಸ್ವಾತಂತ್ರ್ಯಗಳ ಬಲದಲ್ಲಿ
ಸಹಯೋಗದಲ್ಲಿ
ವಿಶ್ವಸೋದರ ಸ್ನೇಹಭಾವದಲ್ಲಿ
ಧರೆಯು ಶೋಷಣೆ ನಿಲ್ಲುವಂತೆ
ಗುಣಕೆ ಪೋಷಣೆ ಸಲ್ಲುವಂತೆ,
ಕೀಳುಮೇಲುಗಳಳಿಯುವಂತೆ
ಬಾಳು ಬಂಧುರವಾಗುವಂತೆ ”
(ಮುಂದೆ ಸಾಗಲಿ ನಾಡು)

ಸ್ವಪ್ನಸುಂದರ ಭವ್ಯ ಭಾರತವನ್ನು ಕಟ್ಟುವಲ್ಲಿ ನವ್ಯಜೀವನ ರೂಪಗೊಳಿಸಿ ಮುನ್ನಡೆಯಬೇಕೆಂದು ಭಾರತೀಯರಿಗೆ ಕರೆ ನೀಡುತ್ತಾನೆ.

“ ನಾಡು ಬದುಕಿದರೆ ನಾವು ಬದುಕುವದು
ಸ್ವಾತಂತ್ರ್ಯವೆ ನಾಡಿನ ಪ್ರಾಣ !
ಪೌರುಷಚೇತನ ಭಾರತಕೇತನ
ಹಾರಾಡಲಿ ಅದು ಚಿರಂತನ
ಅಭಿಮಾನಧನ !’”

ಎಂಬ ರಾಷ್ಟ್ರಾಭಿಮಾನದ ದಿವ್ಯ ಸಂದೇಶವು ಕವಿಯದು. ಅಂತೆಯೇ—

" ನಾವು ಭಾರತಪುತ್ರರು ನಾವು ಕ್ರಾಂತಿಯ ನೇತ್ರರು !
ನಮ್ಮ ನರನರಗಳಲಿ ಹರಿವುದು ಭಾರತಾಂಬೆಯ ನೆತ್ತರು "

ಭಾರತೀಯರು ಒಂದೆಂಬುವ ಭಾವವು ಹೃದಯದಲ್ಲಿ ಮೂಡಿಬಂದು 'ಭಾರತೋತ್ತಮ ಸುಂದರೋಜ್ವಲ ಆತ್ಮತೇಜವು" ಬೆಳಗಲೆಂದು ಕವಿಯ ಆಶೆಯಾಗಿದೆ. ಹೀಗೆಯೇ, 'ಕನ್ನಡ ತುತ್ತೂರಿ' 'ಅಗಸ್ಟ ಕ್ರಾಂತಿ' 'ಗಣ ರಾಜ್ಯ ದಿನ' . ಸಂಕ್ರಾಂತಿ' 'ಸಮರಭೇರಿ' 'ಸಂಗ್ರಾಮ' , ಆಹ್ವಾನ' . ವೀರದೀಕ್ಷೆ' ಮೊದಲಾದ ಗೀತೆಗಳಲ್ಲಿ ವೀರಶ್ರೀಯ ವಿದ್ಯುತ್ ಸಂಚಾರ ವನ್ನು ಕಾಣಬಹುದು.

" ಬಡವರು ಬಲ್ಲಿದರೆಲ್ಲರು ಏಳಿ
ರಣಡಿಂಡಿಮ ತಾ ಮೊಳಗುತಿದೆ "

" ಕ್ರಾಂತಿ ಓ ಕ್ರಾಂತಿ ! ಶಾಂತಿಗಾಗಿಯೆ ಕ್ರಾಂತಿ !
ಇನ್ನೆಲ್ಲಿ ಶಾಂತಿ ಹೊ ಇನ್ನೆಲ್ಲಿ ಶಾಂತಿ
ಮಾನವನ ಸ್ವಾತಂತ್ರ್ಯ ರಕ್ಷಣೆಗೆ ಕ್ರಾಂತಿ
ಮುನ್ನಡಿಯನಿತು ತೊರೆದು ಎಲ್ಲ ಭ್ರಾಂತಿ
ಮೊಳಗುತಿದೆ ಕೇಳು ಆ ಗಗನ ಭೇರಿ
ಜನಮನದ ಮೌಢ್ಯತೆಯ ಹೃದಯ ಸೀಳಿ !"
(ಅಗಸ್ಟ ಕ್ರಾಂತಿ)

" ಇದೋ ಕೇಳು ಭಾರತದ ಐಕ್ಯಗಾನ
ಮೀಸಲಾಗಿಡು ನಿನ್ನ ಸರ್ವಸ್ವವನ್ನ
'ನೂರು ದೇವರನ್ನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ಪೂಜಿಸುವ ಭಾರ !'
ಇದುವೆ ನಮಗಾಗಲಿ ನಿತ್ಯ ಮನನ
ಇದರಿಂದಲೇ ನವ್ಯ ಭಾರತದ ಜನನ !"
(ಗಣರಾಜ್ಯ ದಿನ)

"ಸ್ವಾರ್ಥವನು ಕಳಚಿ ಬರೆ ತೀರ್ಥವಪ್ಪುದು ಎದೆಯು
ಆದರಿಂದ ಭಾವೈಕ್ಯ ಸಾಧ್ಯವೆಂದೆ
ಭಾರತದ ಭದ್ರತೆಗೆ ಅದೆ ಮೂಲಮಂತ್ರ
ಅದರಿಂದಲೇ ನಾಡು ಬದುಕೀತು ಮುಂದೆ !"
(ಕನ್ನಡದ ತುತ್ತೂರಿ)

"ನನ್ನದು ನಿನ್ನದು ಎನ್ನುವ ಸೊಲ್ಲದು
ಸಲ್ಲದು ಇಂದಿನ ಸಮಯದಲಿ
ತನ್ನದೆಲ್ಲವನು ತಾಯಿಗೆ ನೀಡಿ
ಸಿಡಿದೇಳಲಿ ರಾಷ್ಟ್ರದ ಪುರುಷ
ನಾಡಿಗೆ ಹರುಷ !"
(ಸಮರಭೇರಿ)

"ಭಾರತ ರಕ್ಷಣೆ ಅದು ನಮ್ಮೆಯ ಹೊಣೆ
ಸಾಗಿರಿ ರಣರಂಗದ ಕಡೆಗೆ
ಜನ್ಮಭೂಮಿ ಭಾರತದ ಭದ್ರತೆಗೆ
ಸಲ್ಲಲಿ ಬಿಸಿನೆತ್ತರ ಕೊಡುಗೆ !"
(ಡಿಂಡಿಮ)

"ರಾಷ್ಟ್ರನೆಮ್ಮದಿಗೆ ಗಂಡಾಂತರವಿರೆ
ಉಂಡಾಡುವುದು ಹೇಡಿತನ
ಸರ್ವಶಕ್ತಿಯಲಿ ವೈರಿಯನೆದುರಿಸಿ
ಗಡಿಯಲಿ ಮಡಿವುದೆ ಧೀರತನ !"
(ಆಹ್ವಾನ)

ಎಂಬ

ರಾಷ್ಟ್ರಾಭಿಮಾನದ ಸಂದೇಶವನ್ನು ಕವಿ ಜನತೆಗೆ ನೀಡುತ್ತಾನೆ. ಹೀಗೆ ರಾಷ್ಟ್ರದ ಭಾವೈಕ್ಯ ಸಾಧನೆಗೆ ಪೋಷಕವಾಗುವಂಥ ಅನೇಕ ಭಾವಗಳನ್ನು, 'ಡಿಂಡಿಮ' ದಲ್ಲಿ ಕಾಣಬಹುದಾಗಿದೆ. ಯುವಜನಾಂಗದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವದರ ಮುಖಾಂತರ ಇಂಚಲರು ರಾಷ್ಟ್ರೀಯ ಕವಿಯ ಪಾತ್ರವನ್ನು ಬಹಳ ಸಮರ್ಥವಾಗಿ ವಹಿಸಿದ್ದಾರೆ.

“‘ಡಿಂಡಿಮ’ ದಲ್ಲಿ ಸಮರೋತ್ಸಾಹದ ವೀರದನಿ ಮೊಳಗುವಂತೆ ನಾಡನ್ನು ಕಟ್ಟುವ ರಾಷ್ಟ್ರಪೋಷಕ ಚಟುವಟಿಕೆಗಳ ಸೂಚನಾತರಂಗಗಳೂ ಎದ್ದಿವೆ. ಇದೇ ಈ ಕವನ ಸಂಕಲನದ ವೈಶಿಷ್ಟ್ಯ”[4]

ಸಾಧು ಸತ್ಪುರುಷರ, ರಾಷ್ಟ್ರನಾಯಕರ, ಕರ್ಮಯೋಗಿಗಳ ದಿವ್ಯ ಚರಿತ್ರೆಗಳು ಇಂದಿನ ತರುಣ ಜನಾಂಗಕ್ಕೆ ಮಾರ್ಗದರ್ಶನ ನೀಡುವವು. ಅಂಥ ಮಹಾ ವ್ಯಕ್ತಿಗಳ ಜೀವನ ಹಾಗೂ ಆದರ್ಶಕ್ಕೆ ಸಂಬಂಧಿಸಿದ ಹಲವಾರು ಕವನಗಳು ಇಲ್ಲಿವೆ.

ಕವಿಯ ದೃಷ್ಟಿಯಲ್ಲಿ ಬಾಹುಬಲಿಯು ‘ಜಿನಧರ್ಮ ಸಾರಮಂಥನದ ಮಂಗಲಮೂರ್ತಿಯಾಗಿದ್ದಾನೆ. ಲಿಂ. ಮೃತ್ಯುಂಜಯ ಶಿವಯೋಗಿಗಳು ‘ಸದ್ಧರ್ಮ ಸಂಸ್ಕೃತಿಯ ಸತ್ಕಾರಗಳನೆಸರಿ ಬೆಳಗಿದ ಅಭಿನವ ಅಲ್ಲಮಪ್ರಭು’ ವಾಗಿ ಕಂಡಿದ್ದಾರೆ. ನಾಗನೂರ ಶ್ರೀ ಶಿವಬಸವಸ್ವಾಮಿಗಳ ಎದೆಯು ‘ತ್ಯಾಗದ ತೀರ್ಥ’ ಬಗೆಯು ‘ನೇಹದ ನಿಧಿ’; ವಿಶ್ವೇಶ್ವರಯ್ಯನವರು ‘ಕರ್ಮಯೋಗಾಸಕ್ತ ಸಿಂಧು ಸಾಹಸ ಧೀರ, ಕಾರಣಿಕ ಶಿಲ್ಪಿವರ, ನಾಡಿನೇಳ್ಗೆಯ ದೃಷ್ಟಿಯುಳ್ಳ ನೂತನ ಬ್ರಹ್ಮ’ರಾಗಿದ್ದಾರೆ. ದಿ. ಕುಂದಣಗಾರರು ‘ಕನ್ನಡದ ಹೊಂಗುಡಿಯು ಬಡಗಣದ ಬಾಗಿಲಲಿ, ಸತ್ಯ ಸೌಂದರ್ಯ ಸಾಹಿತ್ಯ ಸಂಶೋಧನೆಯ ನಿತ್ಯ ನಂದಾದೀಪ ಹೊತ್ತಿಸಿದ ಗುರುವರ’ರಾಗಿದ್ದಾರೆ.

ನೆಹರೂರನ್ನು ಕುರಿತು—

‘ಸ್ವಪ್ನ ಸುಂದರ ಭವ್ಯ ಭಾರತದ ಶಿಲ್ಪಿವರ
....ಜನಶಂಕರಿಯ ತಾನೆಚ್ಚರಿಸಿ ಹುರಿಗೊಳಿಸಿ
ಬಾಂದಳದಿ ಭಾರತದ ಕೀರ್ತಿಯನು ಬಿತ್ತರಿಸಿ
ಹಣ್ಣಾದೆ, ಸಣ್ಣಾದೆ ಜಗದ ಕಣ್ಣಾದೆ ಚಿನ್ನ !”

“ನಡೆದ ನೆಲ ಹಸುರಾಯ್ತು ನುಡಿದ ನುಡಿ ಮುತ್ತಾಯ್ತು
ಹಿಡಿದ ಮಣ್ಣಿನ ಹುಡಿಯು ಚಿನ್ನವಾಯ್ತು !”

---

4. ಶ್ರೀ. ಕೃಷ್ಣಮೂರ್ತಿ ಪುರಾಣಿಕ ಡಿಂಡಿಮ—ಸ್ನೇಹದ ಮಾತುಗಳು.

ಹೀಗೆ ನೆಹರೂರವರನ್ನು ಅದೆಷ್ಟು ರೀತಿಯಲ್ಲಿ ಬಣ್ಣಿಸಿ ಹಾಡಿದರೂ ಕವಿಗೆ ತೃಪ್ತಿಯಿಲ್ಲ.

" 'ಡಿಂಡಿಮು'ದ ಮುಖ್ಯ ಪ್ರೇರಣೆಯು ನವೋದಯವು ... ಈ ನವೋದಯದ ಪ್ರೇರಣೆಯು ಹತ್ತೆಂಟು ಮುಖಗಳಿಂದ ಈ ಕಾವ್ಯಸಂಕಲನದಲ್ಲಿ ಪ್ರಕಟವಾಗಲು ಹವಣಿಸಿದೆ. ಭೂತಕಾಲದ ಸದಾಚರಣೆಗಳು ಅರ್ಥಪೂರ್ಣವಾದಾಗ ವರ್ತಮಾನವು ಶಕ್ತಿಯುಕ್ತವಾಗುವದು, ಭವಿಷ್ಯತ್ತಿಗೂ ಅದು ದಾರಿದೀಪವಾಗುವದು. ಭಾರತೀಯ ಸಂಸ್ಕೃತಿಯಲ್ಲಿ ಅಂಥ ವೈಶಿಷ್ಟ್ಯವಿದೆ. ಹಬ್ಬಗಳ ( 'ದೀಪಾವಳಿ' 'ಸಂಕ್ರಾಂತಿ' 'ವಿಶ್ವಾವಸುವಿಗೆ' ) ಸಂದೇಶ ಅಂಥ ಒಂದು ಹೊಸ ಅರ್ಥಕ್ಕೆ ನಾಂದಿಯಾಗುತ್ತಿದ್ದರೆ, ಮಾನವ ಜೀವನವು ಪುನೀತವಾಗುವ ಪುಣ್ಯಸ್ಮರಣೆಯು ಭಾವಗೀತಗಳ ಅಂತರಂಗದಲ್ಲಿ ಅಡಗಿರುವದೆಂಬುದನ್ನು 'ಜೊತೆಗಾರ್ತಿ' ಯೆಂಬ ಉತ್ಕೃಷ್ಟ ಕವನದಲ್ಲಿ ಕಾಣಬಹುದಾಗಿದೆ. . . . . ಇದೇ ಮಾಲಿಕೆಯಲ್ಲಿ 'ವಂದನೆ' 'ದಾರಿಯಾವುದೋ' 'ಓ ಮಾನಿನಿ' ಎಂಬ ಬೇರೆ ಬೇರೆ ಬೆಡಗಿನಲೆಗಳ ಭಾವಗೀತೆಗಳನ್ನು ಸೇರಿಸಿ ಮೇಲಕ್ಕು ಹಾಕಿ ನೋಡಬೇಕು."[5]

" 'ಬರುತಿದೆ ನವಮನ್ವಂತರ . . . . ತರುತಿದೆ ಹೊಸ ಸ್ಥಿತ್ಯಂತರ' ಎಂಬ ಪಲ್ಲವಿಯಿಂದ ಪ್ರಾರಂಭವಾಗುವ 'ಕಾಲಮಹಿಮೆ' ಎಂಬ ಕವನದಲ್ಲಿ ಇಂದಿನ ವಿಜ್ಞಾನ ಶೋಧಗಳಿಂದ ಪರಿಪೋಷಿತಗೊಂಡಿರುವ ಬೌದ್ಧಿಕ ಜೀವನದ ನೆಲೆಬೆಲೆಗಳನ್ನು ಖಂಡಿಸಿ, ಜೀವನದ ಸತ್ಯವನ್ನೂ ಸೃಷ್ಟಿಯ ಸ್ವರ್ಗೀಯ ಸೌಂದರ್ಯವನ್ನೂ ಆತ್ಮದ ಅನುಸಂಧಾನವನ್ನೂ ನಿದರ್ಶಿಸುತ್ತ ಕವಿಯು—

" ನಿಲ್ಲು ! ಓ ನವಯುಗದ ತರುಣ !<br>
ಇನ್ನೆಲ್ಲಿಗೆ ನಿನ್ನೀ ಹೊಸ ಉಡ್ಡಾಣ ?<br>
ಎಂದು ಬೆಸಗೊಳ್ಳುತ್ತ ಮರ್ಮಭೇದಕವಾಗಿ;<br>
" ಬಾಳಿನ ಗುರಿಯೇನು ?<br>
ನೀ ನರಿತಿಹೆಯೇನು ?

---

5. ಡಾ. ಸದಾನಂದ ನಾಯಕ 'ಡಿಂಡಿಮ' ಮುನ್ನುಡಿ.

ಎಂಬ ಪ್ರಶ್ನೆಯನ್ನು ಇಂದಿನ ವಿಚಾರವಂತ ತರುಣಪೀಳಿಗೆಯ ಮುಂದಿಟ್ಟು, ಅವರಿಗೆ ಎಚ್ಚರಿಕೆಯುಂಟಾಗುವಂತೆ ತಮ್ಮ ಸಿದ್ಧಾಂತಗಳನ್ನು ಮುಂದೆಮಾಡುತ್ತದೆ.

" ಸುಂದರವಿದೆ ಸೃಷ್ಟಿ, ತನುಮನಕೂ ಸಂತುಷ್ಟಿ !"

ಇಂಥ ಸಂತುಷ್ಟಿಯನ್ನು ಪಡೆಯಬೇಕಾದರೆ ಸಂಹಾರಕ್ಕೆ ಎಡೆಯಿಲ್ಲ ಅಂಥ ಬುದ್ಧಿಯ ಬೆಳವಣಿಗೆಗೂ ಯಾವ ಶಿಕ್ಷಣ ಕ್ರಮದಲ್ಲಿಯೂ ಸುತರಾಂ ಸ್ಥಾನವಿಲ್ಲ, ಆತ್ಮ– ಪ್ರಗತಿಯಿಂದಲೇ ಅದು ಸಾಧ್ಯ; ಅಂತೆಯೇ :

" ದೇಹ ಮನಸುಗಳು ಅಭೇದ್ಯ ನೋಡ
ಆತ್ಮವನು ಕಡೆಗಣಿಸಿ ತೆಗಳಬೇಡ !
ಅದರ ಸುಗತಿಗೆ ನಿನ್ನ ಗಮನವಿರಲಿ
ಅದರ ಪ್ರಗತಿಗೆ ಕಾಲ ಒದಗಿ ಬರಲಿ !"

ನಮ್ಮ ಪೂರ್ವದ ಋಷಿಗಳು ಇಂಥ ಕನಸನ್ನು ಕಂಡಿದ್ದರು. ಶ್ರೀ ರಾಮಕೃಷ್ಣ ಪರಮಹಂಸರೂ, ಸ್ವಾಮಿ ವಿವೇಕಾನಂದರೂ, ಶ್ರೀ ಮಹರ್ಷಿ ಅರವಿಂದರೂ ಅದರ ಚಿಂತನೆಯಲ್ಲಿಯೇ ಚಿರಂತನವಾಗಿ ತೊಡಗಿದ್ದರು. ಭಾರತೀಯ ಆಧ್ಯಾತ್ಮ ಜ್ಞಾನದ ಆದರ್ಶವೇ ಅದಾಗಿದ್ದಿತು. ಕಾಲಮಹಿಮೆಯಿಂದ ಅದು ನಮ್ಮ ಆತ್ಮಗತವಾಗುವಂತೆ ಆಯಿತೆಂದರೆ ಆಗ :

' ಇಂದ್ರಾದಿಗಳ ನೀನು ಗೆಲ್ಲಬಹುದು !
ಚಂದ್ರಾದಿಗಳ ತುಡುಕಿ ಹಿಡಿಯಬಹುದು !'

ಎಂಬ ಭವಿಷ್ಯ ವಾಣಿಯನ್ನು ಹೇಳಿ ಅದನ್ನು ಸಾಧಿಸಬೇಕಾದರೆ ಆವಶ್ಯಕವಾಗಿ ಬೇಕಾಗಿರುವ 'ಆಚಾರಸೂಕ್ತ'ವನ್ನು ಹೀಗೆ ಸಾರುತ್ತ—

' ಇಂದ್ರಿಯಂಗಳ ಗೆಲುವ ಧೀರನಾಗು
ಸಂಯಮದ ಬಾಂದಳಕೆ ಭಾನುವಾಗು
ಮಂಗಳ ಶುಭೋದಯದ ಕಿರಣವಾಗು '

ಇದೇ ಸ್ವಕೀಯ ತಾತ್ವಿಕ ದೃಷ್ಟಿಯೆಂಬುದನ್ನು ಕೆಳಗಿನ ಸಾಲುಗಳಲ್ಲಿ ಸ್ಪಷ್ಟಪಡಿಸಿರುವರು :

‘ ಇದೆ ಜಗದ ಕನಸು
ಇಂದೆಮ್ಮ ಮನಸು
ಆಗದೇ ನೆನಸು’[6]

“ ಛಂದೋ ಮಾರ್ಗದಲ್ಲಿ ಈ ಕವಿ ಸಾಂಪ್ರದಾಯವಾದಿಗಳು. ಹೊಸಬರಾಗಿದ್ದರೂ ಹುಚ್ಚು ಪ್ರಾಯೋಗಿಕತೆ ಅವರಲ್ಲಿ ಕಂಡುಬರುವದಿಲ್ಲ. ಸಂಪ್ರದಾಯವಂತರಾಗಿದ್ದರೂ ಹೊಸ ವಿಚಾರಗಳ ಸಂವೇದನೆ ಅವರ ತೀವ್ರಗತಿಗೆ ಸಂವಾದಿಯಾಗಿದೆ. ಪದಲಾಲಿತ್ಯ, ಬಂಧಗೌರವ, ಭಾವಸೌಷ್ಟವಗಳಿಗೆ ಹಲವಾರು ನುಡಿಗಳು ಮೀಸಲಾಗಿವೆ. ಕಾವ್ಯರಚನೆ ಸುಂದರವಾಗಿದೆ, ಸುಮನೋಹರವಾಗಿದೆ. ಸುವಿಚಾರ' ರಸೋತ್ಕರ್ಷ ಹಾಗೂ ಸದಾಚಾರಗಳ ಆದರ್ಶಗಳಿಂದ ಅದರ ಅಂತರಂಗವು ಶಿವಮಯವಾಗಿದೆ. ರಾಷ್ಟ್ರೀಯಂ ಭಾವೈಕ್ಯ–ಭಕ್ತಿ–ಪ್ರೇಮಗಳಿಂದ ಅದು ಪುನೀತವಾಗಿದೆ.”[7]

ಈ ಮಾತುಗಳು ಕವಿಯ ಜೀವನ ತತ್ವ ಹಾಗೂ ಕಾವ್ಯಶೈಲಿ ಇವುಗಳಿಗೆ ಹಿಡಿದ ಕೈಗನ್ನಡಿಯಾಗಿವೆ.

6 ಮತ್ತು 7. ಡಾ. ಸದಾನಂದ ನಾಯಕ ‘ಡಿಂಡಿಮ’ ಮುನ್ನುಡಿ.

# ಕಿತ್ತೂರ ಕ್ರಾಂತಿ (ಲಾವಣಿ)

ಬೆಳಗಾವಿ, ಚೆನ್ನಮ್ಮರಾಣಿ ಸ್ಮಾರಕೋತ್ಸವ ಸಮಿತಿ ಕಿತ್ತೂರ, ೧೯೫೭

ಪುಟಗಳು ೧೬+೬

ಜನಪದ ಸಾಹಿತ್ಯದ ಬಗೆಗೆ ಇಂಚಲರಿಗೆ ಮೊದಲಿನಿಂದಲೂ ಆಸಕ್ತಿ. ಜನಪದ ಕಾವ್ಯದ ಅಭ್ಯಾಸ ಬಲದಿಂದ ಕಾವ್ಯ ಬರೆಯುವ ಕಡೆಗೆ ಅವರ ಹೃದಯ ಹದಗೊಂಡು ನಿಂತಿತು. ಅವರು ತಮ್ಮ ಮೊದಲನೆಯ ಕವನ 'ಕಳೆದ ಕಿತ್ತೂರ'ನ್ನು ಜನಪದದ ನಡಿಗೆಯಲ್ಲಿಯೇ ಬರೆದಿರುವದು ಗಮನಾರ್ಹ ಅಂಶವಾಗಿದೆ. ಜನಪದ ಗೀತೆಗಳು, ಗರತಿಯ ಹಾಡುಗಳು, ಲಾವಣಿಗಳು ಅವರಿಗೆ ಒಂದು ಬಗೆಯಾದ ಜೀವನದ ರಹಸ್ಯವನ್ನು ರಸವಂತಿಕೆಯನ್ನು ಬೋಧಿಸಿವೆ. 'ಕಿತ್ತೂರ ಕ್ರಾಂತಿ' ಯೆಂಬ ಲಾವಣಿಯಲ್ಲಿ ವೀರರಾಣಿ ಕಿತ್ತೂರ ಚೆನ್ನಮ್ಮಾಜಿಯ ಸಾಹಸದ ಕಥೆಯನ್ನು ಹೃದಯಂಗಮವಾಗಿ ಮೈನವಿರೇಳುವಂತೆ ಬಣ್ಣಿಸಿದ್ದಾರೆ. ಚೆನ್ನಮ್ಮಾಜಿಯ ಸಾಹಸದ ಕಥೆಯು ನಮ್ಮ ನಾಡಿನ ಜನಸಾಮಾನ್ಯರ ಕಿವಿಗಳ ವರೆಗೆ ಹೋಗಿ ಮುಟ್ಟಿ ಅದರಿಂದ ಪ್ರಚೋದನೆಗೊಂಡು ಆ ಆದರ್ಶದ ಹಿನ್ನೆಲೆಯಲ್ಲಿ ರಾಷ್ಟ್ರಕಟ್ಟುವ ಕಾರ್ಯದಲ್ಲಿ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಲೆಂಬ ಉದ್ದೇಶದಿಂದ ಅವರು ಈ ಚಿಕ್ಕ ಲಾವಣಿಯನ್ನು ಬರೆದು ಹಾಡಿದ್ದಾರೆ.

'ನಿನ್ನ ಮುಂದ ಕಥೆಯೊಂದ
ಚಂದಮಾಡಿ ಹೇಳತೇನ
ಗಂಡನಾಡ ಕಿತ್ತೂರಿನ ಕ್ರಾಂತಿಯನ

ಮನಸಗೊಟ್ಟ ಕೇಳಿದವರ
ಮೈನವಿರೇಳುವಂಥ
ವೀರರಾಣಿ ಚೆನ್ನಮ್ಮ ಚರಿತೆಯನ !'

ಎಂದು ಲಾವಣಿ ಪ್ರಾರಂಭವಾಗುತ್ತದೆ. ಬ್ರಿಟಿಶರೆದುರು ಕಿತ್ತೂರು ಜನ ಕತ್ತಿ ಹಿರಿದು ರಕ್ತ ಸುರಿಸಿದ ಹೋರಾಟದ ಕಥೆಯನ್ನು ಕವಿ ಹೃದಯಂಗಮವಾಗಿ ಇಲ್ಲಿ ಚಿತ್ರಿಸಿದ್ದಾನೆ. ಕಿತ್ತೂರಿನ ಇತಿಹಾಸಕ್ಕೆ ವ್ಯತ್ಯಯ ಬರದ ರೀತಿಯಲ್ಲಿ ಮನಂಬೊಗುವಂತೆ ಕಿತ್ತೂರಿನ ವೀರಶ್ರೀಯ ಚರಿತ್ರೆಯನ್ನು ಹೆಣೆದಂದೊಂದು ಈ ಲಾವಣಿಯು ವೈಶಿಷ್ಟ್ಯವಾಗಿದೆ. ಇದನ್ನು ಸುಂದರವಾಗಿ ರಾಗಬದ್ಧವಾಗಿ ಹಾಡಿದಾಗಲೆಲ್ಲ ಮೈ ನವಿರೇಳುತ್ತದೆ.

# ಮಹಾಂತ ಮಹಿಮೆ

**ಬೆಳಗಾವಿ, ಕಲ್ಯಾಣ ಮಂದಿರ ಶಹಾಪೂರ, ೧೯೬೦**

**ಪುಟಗಳು ೮+೨=೧೦**

ಇದೊಂದು ಜಾನಪದ ಗೀತೆಗಳ ಸಂಕಲನ. ಮುರಗೋಡ ಮಠದ ಶ್ರೀ. ಮಹಾಂತ ಶಿವಯೋಗಿಗಳನ್ನು ಕುರಿತು ಬರೆದುದು. ಇಲ್ಲಿಯ ಗೀತೆಗಳು ಅಧ್ಯಾತ್ಮ ಸಂಬಂಧವಾದ ಅನುಭಾವವನ್ನು ಕುರಿತುಹಾಡಿದ ಭಾವಗೀತೆಗಳಂತಿವೆ. ಇಂಚಲರು ತಮ್ಮ ರಸವತ್ತಾದ ಶೈಲಿಯಿಂದ ಶಿವಯೋಗಿಯ ಮಹಿಮೆಯನ್ನು ಸುಂದರವಾಗಿ ನಿರೂಪಿಸಿದ್ದಾರೆ.

“ ಬಾಳಿಗೆ ನೆಮ್ಮದಿ ದೊರೆಯುವದೆಂತು ?
ಎಂಬುವ ಚಿಂತೆಯೆ ಹರಡಿಹುದು
ನಾಳಿಗೆ ಎಂಥದೊ ಸಾವೋ ನೋವೋ
ಕಾದಿದೆಯೆಂಬುವ ಕೊರಗಿಹುದು ”

ಎಂದು ಬಾಳಿನ ನೈರಾಶ್ಯದ ಚಿತ್ರವನ್ನು ಇಟ್ಟ ಕವಿ, ಅದಕ್ಕೆ ಪರಿಹಾರವನ್ನೂ ಸೂಚಿಸಿ ಸಾರ್ಥಕನಾಗುತ್ತಾನೆ. ಪರಿಹಾರ ಏನು ಗೊತ್ತೇ ?

“ ಶಿವಯೋಗಿಯ ಸುಖ ಸಾನಿಧ್ಯದಲಿ
ಬಾಳಿನ ಬವಣೆಯು ನೀಗುವದು
ಭವರೋಗದ ಹುಸಿ ಬಾಳಿನ ನಂಜಿಗೆ
ಸಂಯಮವೇ ಸಂಜೀವಿನಿಯು !”

ಮಹಾಂತೇಶನನ್ನು ಅದೆಷ್ಟು ಹಾಡಿಹೊಗಳಿದರೂ ಕವಿಗೆ ತೃಪ್ತಿಯಿಲ್ಲ. ಮಹಾಂತೇಶನನ್ನು ಹಾಡಿ ತಣಿಯುದ ಕವಿಯೇ ಜಗತ್ತಿನಲ್ಲಿ ಇಲ್ಲವೆಂಬುದನ್ನು ಹೀಗೆ ಹೇಳುತ್ತಾನೆ.

“ ಹಾಡೀಗೆ ಕೊನೆಯಿಲ್ಲ ಒಲವೀಗೆ ನೆಲೆಯಿಲ್ಲ
ನಡೆದು ನುಡಿದರ ಭಯವಿಲ್ಲ ! ಮಾಂತೇಶ್ನ
ಹಾಡಿ ತಣಿಯುದ ಕವಿಯಿಲ್ಲ !”

ಅಂಥ ಮಹಿಮಾಪುರುಷರು ಅವರು.

ಹೀಗೆ ಶ್ರೀ. ಮಹಾಂತ ಶಿವಯೋಗಿಗಳ ಬಗೆಗಿರುವ ಕವಿಯ ಅಪಾರ ಭಕ್ತಿಯು ಈ ಚಿಕ್ಕ ಪುಸ್ತಕದಲ್ಲಿ ಪ್ರಕಟಗೊಂಡಿದೆ.

# ಬಣ್ಣದ ಚೆಂಡು

## ( ಶಿಶುಗೀತೆಗಳ ಸಂಕಲನ )

ಬೆಳಗಾವಿ, ಚೇತನ ಪ್ರಕಾಶನ, ೧೯೬೮ ಪುಟಗಳು ೪೧+೫

'ಬಣ್ಣದ ಚೆಂಡು' ಸಂಕಲನದಲ್ಲಿ ಚಿಕ್ಕಮಕ್ಕಳನ್ನು ಕುರಿತು ಬರೆದ ಕವಿತೆಗಳಿವೆ. ಡಾ. ಡಿ. ಎಸ್ ಕರ್ಕಿ ಮತ್ತು ಶ್ರೀ. ಎಸ್. ಡಿ. ಇಂಚಲರು ಕೂಡಿ ಕೊಂಡು ಈ ಸಂಕಲನವನ್ನು ಪ್ರಕಟಿಸಿದ್ದಾರೆ. ಪುಟಗೆ ಒಂದರಲ್ಲಿ, ಕರ್ಕಿಯವರ ೧೧ ಕವನಗಳೂ, ಇಂಚಲರ ೯ ಕವನಗಳೂ ಸೇರಿವೆ. ಮಕ್ಕಳ ಭಾವ ವಿಕಾಸವನ್ನು ಮುಖ್ಯ ವಾಗಿ ಗಮನದಲ್ಲಿಟ್ಟುಕೊಂಡು ಈ ಸಂಕಲನವನ್ನು ಅವರು ಹೊರತಂದಿದ್ದಾರೆ. 'ತಾಯಿ ಮುದ್ದು' 'ಪುಟ್ಟತಂಗಿ' 'ಆಟದ ಬಯಲು'—ಉತ್ಕೃಷ್ಟ ಕವನ ಗಳೆನಿಸಿವೆ ಇಂಚಲರು ಮಕ್ಕಳಬಗ್ಗೆ ಬರೆಯುವಾಗಲೆಲ್ಲ ಮಕ್ಕಳೊಡನೆ ತಲ್ಲೀ ನರಾಗಿ ತಮ್ಮನ್ನು ತಾವೇ ಮರೆಯುತ್ತಿದ್ದರು. ಮಕ್ಕಳಿಗೆ ಏನು ಬೇಕು, ಏನು ಬೇಡ ಎಂಬುದನ್ನು ಸ್ವತಃ ಅನುಭವಿಸಿ ಅರಿತವರು. ತಾಯಿಯ ಹಾಲಿನ ಸವಿಗೆ ಯಾವ ವಸ್ತುವೂ ಸರಿದೂಗುವದಿಲ್ಲ. " ಅವ್ವಾ ! ನಿನ್ನದೆ ಹಾಲಿನ ಸವಿಗೆ ಇನ್ನೇನಿದೆ ಸರಿ ಹೇಳಮ್ಮ ! ಅಮೃತವೆಂಬುದು ಇರುತಿರೆ ಜಗದಲಿ ಇದುವೇ ತಾನೇ ಹೌದಮ್ಮ " ಎನ್ನುತ್ತಾನೆ. ತಾಯಿಯ ಹಾಲಿನ ಸವಿಯನ್ನು ಕವಿ ಅಮೃತಕ್ಕೆ ಹೋಲಿಸಿದುದು ತುಂಬಾ ಔಚಿತ್ಯಪೂರ್ಣವಾಗಿದೆ.

ನಾಡಪ್ರೀತಿಯು ಇಂಚಲರ ಕವನಗಳಲ್ಲಿ ತುಂಬಿ ತುಳುಕುತ್ತದೆ. ಮಕ್ಕಳ ಹೃದಯಗಳಲ್ಲಿ ನಾಡಿನ ನೀತಿಯು ಪ್ರೀತಿಯು ಅರಳುವದೆಂದು ಕವಿ ಹೇಳು ವದರಲ್ಲಿ ಔಚಿತ್ಯವಿದೆ.

" ನಮ್ಮಾಟಗಳಲಿ
ಬಲವಿದೆ ಛಲವಿದೆ
ಒಂದೇ ಮನಸಿಹುದು

ನಮ್ಮೆದೆಗಳಲಿ
ನಾಡಿನ ನೀತಿಯು
ಪ್ರೀತಿಯು ಅರಳುವದು ”
“ ಆಡುಂಬೊಲದಲಿ
ನಾಡಿನ ಕೆಚ್ಚು
ಎಚ್ಚರಗೊಳ್ಳುವದು
ಬಾಲರ ನಡೆನುಡಿ
ಕುಲಶೀಲಗಳು
ಉಜ್ವಲಗೊಳ್ಳುವವು ”

(ಆಟದ ಬಯಲು)

ನಗುನಗುತ ಜೀವನವನ್ನು ನೂಕಿ ಸಫಲಸೇವೆಯಲ್ಲಿ ಮಾಗುವ ಹಿರಿಯ ಹಂಬಲ ‘ ಪಂಜರ ಗಿಳಿ ’ ‘ ಆಟದ ಬಯಲು ’ ಕವನಗಳಲ್ಲಿ ಪುನ: ಪುನ: ವ್ಯಕ್ತವಾಗುತ್ತದೆ. ‘ ಎಳೆಯರ ಹಾಡು ’ ‘ ಆಟದ ಬಯಲು ’ ಕವನಗಳಲ್ಲಿ ಕವಿಯ ರಾಷ್ಟ್ರೀಯ ಪ್ರಜ್ಞೆ ಮಿಡಿದಿದೆ. ಹೀಗೆ ಮಗುವಿನ ಆಟನೋಟ ಮುಗ್ಧ ಸ್ವಭಾವ, ಕಲ್ಪನಾ ವೈಖರಿಯನ್ನು ಕುರಿತು ಸುಂದರವಾದ ಕವನಗಳನ್ನು ಇಂಚಲರು ‘ ಬಣ್ಣದ ಚೆಂಡು ’ ಸಂಕಲನದಲ್ಲಿ ನೀಡಿದ್ದಾರೆ, ಬಣ್ಣದ ಚೆಂಡನ್ನು ಜೀವನಕ್ಕೆ ಹೋಲಿಸಿದ ರೀತಿ ತುಂಬಾ ಅರ್ಥವತ್ತಾಗಿದೆ, ಈ ಕವನಗಳು ಮಾದರಿಯ ಶಿಶುಗೀತೆಗಳೆಂದು ಹೇಳಬಹುದಾಗಿದೆ. ಅವರು ಹಲವೇ ಮಕ್ಕಳ ಕವನಗಳನ್ನು ಬರೆದು ಪ್ರಕಟಿಸಿದ್ದರೂ ಅವು ಶಿಶುಸಾಹಿತ್ಯಕ್ಕೆ ನೀಡಿದ ವಿಶಿಷ್ಟವಾದ ಕೊಡುಗೆಯೆನಿಸಿವೆ.

# ಬಹುಮುಖ ವ್ಯಕ್ತಿತ್ವದ ಕವಿ

ಶ್ರೀ. ಎಸ್. ಡಿ. ಇಂಚಲ ಅವರು 'ಸ್ನೇಹವೇ ಜೀವನದ ಸಂಜೀವಿನಿ' ಎಂಬ ರಹಸ್ಯವನ್ನು ಜಗತ್ತಿಗೆ ಸುರಿದ ಪ್ರಮುಖ ಕವಿ, ಉತ್ಕೃಷ್ಟ ವೀರಗೀತೆಗಳನ್ನು ರಚಿಸಿ ಕನ್ನಡಿಗರ ಹೃದಯದಲ್ಲಿ ವೀರಶ್ರೀ ಮೊಳಗಿಸಿದ ವೀರ ಕವಿ. ನಡೆನುಡಿಗಳ ಸಾಮರಸ್ಯವೇ ಜೀವಾಳವಾಗಿಯುಳ್ಳ ಅಮರ ಕವಿ;

'ಹುಟ್ಟುಕವಿಗಳು, ಶ್ರೇಷ್ಠ ಶಿಕ್ಷಣ ತಜ್ಞರು, ಸಹೃದಯ ಸ್ನೇಹಿತರು, ವಿಖ್ಯಾತ ವಾಗ್ಮಿಗಳು, ಕನ್ನಡದ ಕಟ್ಟಾಳುಗಳು, ಸಂಸ್ಕೃತಿಯ ಪ್ರತೀಕರು.'[1]

'ಸಂಸ್ಕೃತಿಯ ಕಾರ್ಯದಲಿ ಸಕಲರೊಳು ಬೆರೆದು ಜೀವನದಿ ಸಾರ್ಥಕತೆ ಪಡೆದ'[2] ಮಾನವೀಯ ಪ್ರೇಮದ ಸಾಕಾರಮೂರ್ತಿ.

'ತಮ್ಮ ನಯ ನಮ್ರತೆ, ಅಂತಃಕರಣ, ಜನರನ್ನು ಹಚ್ಚಿಕೊಳ್ಳುವ ಕಕ್ಕುಲಾತಿಯಿಂದ ಶ್ರೀ. ಇಂಚಲರು ಎಲ್ಲರಿಗೂ ಬೇಕಾಗುವ ಬೆಲ್ಲದಚ್ಚಿನ ಗೊಂಬೆ.[3]'

'ಬೆಳಗಾವಿಯ ವೀರಕನ್ನಡಿಗರಾಗಿ ಪಾಂಚಜನ್ಯ ಮೊಳಗಿಸಿದರು. ಕನ್ನಡದ ಪ್ರಜ್ಞೆ ಕುದುರಿಸಿದರು. ಸಾಹಿತ್ಯ ಕಣಜ ತುಂಬಿದರು. ಶಿಕ್ಷಕ ವೃತ್ತಿಯನ್ನು ಕಾಯಕವನ್ನಾಗಿಸಿ, ಸಾವಿರಾರು ಮಕ್ಕಳಿಗೆ ಶಿಕ್ಷಣದ ಬೆಳಕು ನೀಡಿದರು.'[4]

'ಶ್ರೀ. ಇಂಚಲರ ಮೂರು ಕೃತಿಗಳೇ ಹೊರಬಂದಿದ್ದರೂ ಮುತ್ತಿನಂಥವುಗಳಾಗಿವೆ. ಕವಿಯ ಹೃದಯವಿದೆ. ವೀರನ ಕೆಚ್ಚು ಇದೆ. ಮಾನವೀಯತೆಯ ಮೆರಗೂ ಇದೆ.'[5]

---

1. ಶ್ರೀ. ಸಿದ್ದಯ್ಯ ಪುರಾಣಿಕ, 2. ಡಾ. ಡಿ. ಎಸ್. ಕರ್ಕಿ, 3. ಶ್ರೀ. ಪಾಟೀಲ ಪುಟ್ಟಪ್ಪ 4. ಪ್ರೊ. ವೃಷಭೇಂದ್ರಸ್ವಾಮಿ, 5. ಡಾ. ಜ. ಚ. ನಿ.

ಇಂಥ ಮೆಚ್ಚುಗೆಯ ನುಡಿಗಳು ಒಂದೇ ಎರಡೇ ! ಇಂಚಲರು ಕನ್ನಡ ನಾಡು ನುಡಿಗಾಗಿ ತಮ್ಮ ಜೀವನವನ್ನೇ ಧಾರೆಯೆರೆದ ಕರ್ನಾಟಕದ ಹಿರಿಯರ ಸಾಲಿಗೆ ಸೇರುವ ಅಪೂರ್ವ ವ್ಯಕ್ತಿಯಲ್ಲವೆ ?

ರಾಜ್ಯ ಮಾಧ್ಯಮಿಕ ಶಿಕ್ಷಣ ಸಲಹಾ ಮಂಡಲಿ, ರಾಜ್ಯ ಎಸ್. ಎಸ್. ಎಲ್. ಸಿ, ಪರೀಕ್ಷಾ ಮಂಡಲಿ, ರಾಜ್ಯದ ವಾಚನಾಲಯ ಸಲಹಾ ಮಂಡಲಿ, ರಾಜ್ಯ ಮಟ್ಟದ ಎನ್. ಸಿ. ಸಿ. ಶಿಕ್ಷಣ ಸಮಿತಿ, ಅ. ಭಾ. ಆಕಾಶವಾಣಿಯ ಶಾಲಾ ವಿಭಾಗದ ಪ್ರಸಾರ ಸಲಹಾ ಮಂಡಲಿ, ರಾಜ್ಯದ ವಿದ್ಯಾರ್ಥಿ ಶಿಕ್ಷಕರ ಸಹಾಯಕ ಸಲಹಾ ಮಂಡಲಿ, ಕರ್ನಾಟಕ ವಿಶ್ವವಿದ್ಯಾಲಯದ ಸಿನೇಟ, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದ ಅನೇಕ ಸಂಘಸಂಸ್ಥೆಗಳ ಸದಸ್ಯರಾಗಿ ಬಹುಮುಖ ಸೇವೆಯನ್ನು ಸಲ್ಲಿಸಿದ ಶ್ರೇಯಸ್ಸು ಅವರ ಪಾಲಿಗಿದೆ.

ಇಂಚಲರು ಎಂತಹ ಆದರ್ಶ ವ್ಯಕ್ತಿ ಎಂಬುದಕ್ಕೆ ಅವರ ಜೀವನದಲ್ಲಿ ನಡೆದ ಕೆಲವು ಘಟನೆಗಳನ್ನು ಇಲ್ಲಿ ನೋಡಬಹುದು,

ಶ್ರೀ. ಇಂಚಲರು ತಮ್ಮ ಮಿತ್ರರೊಡನೆ ಪ್ರಕೃತಿ ಸುಂದರ ಸ್ಥಳಗಳನ್ನು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುವಲ್ಲಿ ಆಸಕ್ತಿ ತಳೆಯುತ್ತಿದ್ದರು. ಆಗ ಅವರ ನಯವಾದ ನಡೆನುಡಿಗಳು, ತಿಳಿಯಾದ ಅಭಿರುಚಿಗಳು ನೆಲೆಕಲೆಗಳು ತೋರುತ್ತಿದ್ದವು. ಒಂದೊಂದು ಸಂದರ್ಭದಲ್ಲಿ ಯಾವವೋ ಉತ್ತಮವಾದ ಗೀತಗಳ ಚರಣಗಳು ಅವರ ನೆನಪಿನ ಪಟ್ಟಿಯಿಂದ ಹೊರಸೂಸುತ್ತಿದ್ದವು. ಅಲ್ಲಿಯೇ ಸಮುಚಿತವಾದ ಸ್ವತಂತ್ರ ಕವಿತಾಲಹರಿ ಸುಡಿ ಪಡೆಯುತ್ತಿದ್ದಿತು. ಶ್ರೀ. ಇಂಚಲರು ನಿಜಕ್ಕೂ ಸಹಜ ಕವಿಯಾಗಿದ್ದಂತೆ ಸಹಜ ಕವಿಮಿತ್ರರೂ ಆಗಿ ಇಂಥ ಸಂದರ್ಭಗಳಲ್ಲಿ ವಾತಾವರಣಕ್ಕೆ ಹೆಚ್ಚಿನ ಕಳೆ ಕಟ್ಟುತ್ತಿದ್ದರು. ಬೆಂಗಳೂರು, ಮೈಸೂರು, ಕೃಷ್ಣರಾಜಸಾಗರ, ಶ್ರವಣಬೆಳ್ಗೊಳ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿಗೆ ಹೋದಾಗ ಪಯಣದುದ್ದಕ್ಕೂ ಸರಸ ಮಾತುಗಳ ಮಾಲೆ, ತಿಳಿಯಾದ ರಸಾನುಭವ; ಅವರೊಡನೆ ಪ್ರವಾಸ ಮಾಡಿದ ಮಿತ್ರರಿಗೆ ಅಪಾರ ಆನಂದ !

“೧೯೪೪ನೆಯ ಇಸ್ವಿಯ ಮೇ ತಿಂಗಳಿನ ಒಂದು ದಿನ ಸಾಯಂಕಾಲದ ಹೊಂಗಿರಣದ ಹೊಂಬೆಳಕಿನಲ್ಲಿ ಅಡ್ಡಾಡುತ್ತ ಹೊರಟಾಗ ಹಸನ್ಮುಖದ

ವ್ಯಕ್ತಿಯು 'ಏನು ನಿಮಗೂ ಟ್ರೇನಿಂಗ ಕಾಲೇಜಿಗೆ ವರ್ಗವಾಯಿತಂತೆ ನಿಜವೇ ?' ಎಂದರು. 'ಎಂದರೆ ನಿಮಗೂ ಅಲ್ಲಿಗೇ ವರ್ಗವಾಗಿದೆಯೋ ?' ಎಂದೆ ನಾನು 'ಹೌದು ಅಂತೆಯೇ ಕೇಳಿದೆ' ಎಂದರು. 'ಓಹೋ ಇದೊಂದು ಅಪೂರ್ವ ಸಂಯೋಗ, ಕೈಕೊಡಿ ಇಲ್ಲಿ' ಎಂದು ಕೈಮುಂದೆ ಮಾಡಿದ ಇಬ್ಬರೂ ಕೈ ಕೈ ಕುಲುಕಿದೆವು. ಇಪ್ಪತ್ತೆಂಟು ವರ್ಷಗಳ ಹಿಂದೆ ಕುಲುಕಿದ ಕೈಗಳು ಇನ್ನೂ ಅಬಾಧಿತವಾಗಿ ಹೃದಯ ಮನಸ್ಸುಗಳಿಂ ಒಂದಾಗಿ ಒಟ್ಟಾಗಿ ಒಂದೇ ಸಂಸ್ಥೆಯಲ್ಲಿ ಕಾರ್ಯ ಮಾಡಿದ ಅಭಿಮಾನ ನನ್ನದು. ಈ ಅಭಿನಂದನೀಯ ವ್ಯಕ್ತಿ ಇನ್ನಾರೂ ಅಲ್ಲ—ಶ್ರೀ. ಇಂಚಲರು'

(ಎಪ್ರೀಲ, ೧೯೭೩)

ಎಂದು ಅಭಿಮಾನದಿಂದ ನುಡಿದಿದ್ದಾರೆ ಶಿಕ್ಷಕರಾದ ಶ್ರೀ. ವ್ಹಿ. ಸಿ. ಮಾಲಗತ್ತಿಯವರು. ಗಿಲಗಿಂಚಿ ಅರಟಾಳ ಹಾಯಸ್ಕೂಲಿನ ಶಿಕ್ಷಕ ವೃಂದವನ್ನು ಆತ್ಮೀಯತೆಯ ಬಹುದೊಡ್ಡ ಕುಟುಂಬವನ್ನಾಗಿ ಶ್ರೀ. ಇಂಚಲರು ರೂಪಿಸಿದರು. ಶಿಪಾಯಿಗಳನ್ನು ಮೊದಲುಮಾಡಿಕೊಂಡು ವಿದ್ಯಾರ್ಥಿಗಳೊಂದಿಗೆ ಶಿಕ್ಷಕರೊಂದಿಗೆ ಅವರು ಇಟ್ಟುಕೊಂಡ ಸೋದರ ಭಾವನೆಯು ಅವರ ಹಿರಿಯ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ. ಇಂಥ ಅನುಪಮ ವ್ಯಕ್ತಿತ್ವವನ್ನು ಹೊಂದಿದ ಶ್ರೀ. ಇಂಚಲರ ನೇತೃತ್ವದಲ್ಲಿ ಕಾರ್ಯ ಮಾಡುವದೂ ಒಂದು ಸುಯೋಗವೆಂದು ಶಿಕ್ಷಕರು ಭಾವಿಸಿದ್ದರು.

ಶ್ರೀ. ಇಂಚಲರಲ್ಲಿ ನಾವು ಮುಖ್ಯವಾಗಿ ಕಾಣುವದು ನಿತ್ಯನೂತನವಾದ ಮಾನವೀಯ ಪ್ರೇಮವನ್ನು. ನಾನು ಸ್ವತಃ ಕಾಯಿಲೆಯಿಂದೊಮ್ಮೆ ಹಾಸಿಗೆ ಹಿಡಿದಾಗ, ನಮ್ಮ ಮನೆಯವರೆಗೂ ಬಂದು, ನನ್ನ ಮಗ್ಗುಲಲ್ಲಿಯೆ ಹತ್ತು ನಿಮಿಷ ಕುಳಿತುಕೊಂಡು, ಅಡಚಣೆ ಏನಾದರೂ ಇದೆಯೇ ಎಂದು ಕೇಳಿದಾಗ, ನನ್ನ ಹೃದಯ ಕೃತಜ್ಞತೆಯಿಂದ ತುಂಬಿಬಂದಿತ್ತು. ನಾನು ಕೆಲಸಕ್ಕೆ ಹಾಜರ ಆದಮೇಲೆಯೂ "ಇನ್ನೂ ನಾಲ್ಕು ದಿನ ನೀವು ಹೆಚ್ಚು ಶ್ರಮವಹಿಸಬೇಡಿರಿ, ವರ್ಗದಲ್ಲಿ ಕುಳಿತರೆ ಸಾಕು" ಎಂದು ನಾನು ಕುಳಿತಲ್ಲಿಯೇ ಬಂದು ಹೇಳಿದ್ದನ್ನು ನಾನು ಮರೆತಿಲ್ಲ.' ಎಂದು ಜೀವನದ ಅನುಭವವನ್ನು ಹೃದಯ ತುಂಬಿ ವರ್ಣಿಸಿದ್ದಾರೆ ಜಿ. ಎ. ಹಾಯಸ್ಕೂಲಿನ ಹಿರಿಯ ಶಿಕ್ಷಕರಾದ ಶ್ರೀ. ಎಚ್. ಎಸ್. ಕುಲಕರ್ಣಿಯವರು (೧೯೭೫).

ಶ್ರೀ. ಇಂಚಲರ ವ್ಯಕ್ತಿತ್ವವು ಲೋಹಚುಂಬಕದಂತೆ ಅನೇಕರನ್ನು ತನ್ನತ್ತ ಸೆಳೆದುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಅದೇ ಆಗ ಹಾಯಸ್ಕೂಲು ಸೇರಿದ ಹೊಸ ಶಿಕ್ಷಕರೊಬ್ಬರು ಪಾಠಗಳನ್ನು ಮುಗಿಸಿಕೊಂಡು ಅನೇಕ ವಿಸ್ಮಯಕಾರಿ ವಿಚಾರಗಳೊಂದಿಗೆ ತೂಗುಯ್ಯಾಲೆಯಾಡುತ್ತ ದಾರಿಯಲ್ಲಿ ನಡೆವಾಗ ಹಿಂದಿನಿಂದ ಸಾಯಕಲ್ ಗಂಟೆಯು ಧ್ವನಿ ಕೇಳಿಬಂತು. ಹಿಂದೆ ಮುಖ ಹೊರಳಿಸಿ ನೋಡುತ್ತಾರೆ, ಶ್ರೀ ಇಂಚಲರು ಸಾಯಕಲ್ಲನ್ನೇರಿ ಬರುತ್ತಿದ್ದಾರೆ. ಆ ಶಿಕ್ಷಕರು ನಮಸ್ಕರಿಸಿ ದೂರ ಸರಿದು ತಲೆತಗ್ಗಿಸಿಕೊಂಡು ಹೊರಟರು. ಇಂಚಲರು ಸಾಯಕಲ್ಲಿನಿಂದ ಇಳಿದು ಶಿಕ್ಷಕರ ಸಮೀಪ ಬಂದು, ' ಯಾಕ್ರಿ, ಒಬ್ಬರೇ ಹೊರಟಿರಿ, ನಿಮ್ಮ ಆರೋಗ್ಯ ಹೇಗಿದೆ ? ಕೋಣೆ ಎಲ್ಲಿ ಹಿಡಿದಿರಿ ? ಊಟದ ವ್ಯವಸ್ಥೆ ಹೇಗೆ ?......" ಇತ್ಯಾದಿ ಪ್ರಶ್ನೆಗಳ ಸುರಿಮಳೆಯನ್ನೇ ಕರೆದರು. ಆಗ ಆ ಶಿಕ್ಷಕರಿಗೆ ಹಿರಿಯ ವ್ಯಕ್ತಿಗಳ ಸಾಮೀಪ್ಯ ಅವರ್ಣನೀಯವಾದ ಆತ್ಮೀಯ ಆನಂದ ನೀಡಿತು. ' ಜೀವಿಸುವ ಕಲೆ, ಪ್ರೀತಿಸುವ ಕಲೆಯ ಅರ್ಥವಾಗಬೇಕಾದರೆ ವ್ಯಕ್ತಿಯ ಅಂತರಂಗ ಸಾಮೀಪ್ಯ ಮುಖ್ಯ' ವಲ್ಲವೆ ? ......... ಪ್ರಶ್ನೆಗಳಿಗೆ ಉತ್ತರಿಸುತ್ತ ನಡೆದಾಗ ಇಂಚಲರು "ನಿಮ್ಮ ಆರೋಗ್ಯ ಇನ್ನೂ ಸುಧಾರಿಸಿದಂತಿಲ್ಲ. ನಮ್ಮ ಮನೆಗೆ ನಡೆಯಿರಿ. ಅಲ್ಲಿಯೇ ಊಟ ಮಾಡಿ ವಿಶ್ರಾಂತಿ ಪಡೆಯುವಿರಂತೆ ! ನೀವೇನೂ ಸಂಕೋಚಪಟ್ಟುಕೊಳ್ಳಬೇಡಿರಿ. ನಾವೆಲ್ಲರು ಒಬ್ಬ ದೇವರ ಸೇವಕರು !" ಎಂದು ನುಡಿದರು. ಇಬ್ಬರೂ ಕೂಡಿಕೊಂಡು ಮನೆಗೆ ಬಂದರು. ಮನೆ ಮನದಷ್ಟೇ ಸುಂದರ, ವಿಶಾಲ, ಅಲ್ಲಿ ಕಾಲಿಟ್ಟಾಗ ಎಲ್ಲಿಲ್ಲದ ಒಂದು ವಿಧದ ತಂಪು ! ಆತ್ಮೀಯತೆ !!

ಶ್ರೀ. ದೇವಪ್ಪನವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಹಿರೇಬಾಗೇವಾಡಿಯಲ್ಲಿ ಸೇವೆಸಲ್ಲಿಸುತ್ತಿದ್ದಾಗ ಏಕಾ ಏಕಿ ಅಸ್ವಾಸ್ಥ್ಯವುಂಟಾಗಿ ಬದುಕುವದು ಅಸಾಧ್ಯವಾಯಿತು. ಶಸ್ತ್ರಕ್ರಿಯೆ ಮಾಡಿಸುವದೊಂದೇ ಉಪಾಯವೆಂದು ವೈದ್ಯರು ಸಲಹೆ ನೀಡಿದರು. ಆಗ ಇಂಚಲರು ಶಿಕ್ಷಣ ಖಾತೆಯಲ್ಲಿ ಉಪಶಿಕ್ಷಣಾಧಿಕಾರಿ ( A. E. O ) ಯಾಗಿ ಸೇವೆಸಲ್ಲಿಸುತ್ತಿದ್ದರು. ಶಸ್ತ್ರಕ್ರಿಯೆಯ ಸಮಯದಲ್ಲಿ ತಂದೆಯ ಬಳಿಯಲ್ಲಿದ್ದು ಯೋಗಕ್ಷೇಮ ನೋಡಿಕೊಳ್ಳುವದು ತಮ್ಮ ಆದ್ಯಕರ್ತವ್ಯವೆಂದು ಭಾವಿಸಿ ಅವರು ರಜೆಗಾಗಿ ಅರ್ಜಿ ಸಲ್ಲಿಸಿದರು. ಆಫೀಸಿನಲ್ಲಿಯ ಕಾರ್ಯ ಬಾಹುಲ್ಯದ ಮೂಲಕ ಅವರಿಗೆ ರಜೆಯನ್ನು ನಿರಾ

ಕರಿಸಲಾಯಿತು. ರಜೆಯ ಆವಶ್ಯಕತೆಯ ವಿಷಯವಾಗಿ ಮೇಲಾಧಿಕಾರಿಗಳಿಗೆ ಮನವರಿಕೆ ಮಾಡಿಕೊಡಲು ಅವರು ಅದೆಷ್ಟು ಹೆಣಗಿದರೂ ಕೂಡ ಪ್ರಯತ್ನ ಫಲಿಸಲಿಲ್ಲ. ಮನಸ್ಸಿಗೆ ನೋವೆನಿಸಿ ಆ ದಿನ ಆಫೀಸ ಅವಧಿ ಮುಗಿದ ಕೂಡಲೇ ತಮ್ಮ ರಾಜೀನಾಮೆ ಪತ್ರವನ್ನು ಬರೆದಿಟ್ಟು ಆಫೀಸದಿಂದ ಹೊರಬಿದ್ದರು. ಮರಣಶಯ್ಯೆಯಲ್ಲಿದ್ದ ತಂದೆಯ ಸೇವೆಗೆ ಅಡ್ಡ ಬಂದ ಈ ನೌಕರಿ ಅವರಿಗೆ ಬೇಡಾಯಿತು. ಅನಂತರ ಅವರು ಸರಕಾರಿ ನೌಕರಿ ಸೇರಲು ಎಂದಿಗೂ ಪ್ರಯತ್ನ ಮಾಡಲಿಲ್ಲ. ಅಂಥ ದಿಟ್ಟ ಹಾಗೂ ತತ್ವನಿಷ್ಠ ನಿರ್ಭೀತ ವ್ಯಕ್ತಿತ್ವ ಅವರದು.

ಬಿರುಸಾದ ಬಂಡೆಗಲ್ಲಿನಲ್ಲಿ ಗುಪ್ತಗಾಮಿನಿಯಾಗಿರುವ ಝರಿಯಂತೆ ಅವರ ಸ್ವಭಾವ, ಮೇಲ್ನೋಟಕ್ಕೆ ಬಲು ಬಿರುಸಾಗಿ ಕಂಡರೂ ಮೃದು ಸ್ವಭಾವದ ಮೆಲ್ಲಿತಾದ ಹೃದಯ. ದೈನಂದಿನ ಎಡೆಬಿಡದ ಕೆಲಸಗಳ ಮೂಲಕ ಬೇಸರವೆನಿಸಿ ಹೃದಯವು ಭಾರವಾದಾಗ ಅವರ ಪ್ರೀತಿಯ ಮೊಮ್ಮಗಳು ವಿನತಾ ಅವರ ಮುಂದೆ ಬಂದು ನಿಂತರೆ ಬಾಹ್ಯ ಪ್ರಪಂಚವನ್ನೇ ಮರೆತು ಬಿಡುವರು. ಆಗ ಅವರ ಮನಸ್ಸಿಗೆ ಹಗುರೆನಿಸಿ ತಮ್ಮ ಮೊಮ್ಮಗಳ ಮೇಲೆ ಪ್ರೀತಿಯ ಮಳೆಗರೆ ವರು. ಮುಂಜಾವಿನ ವರ್ತಮಾನ ಪತ್ರಿಕೆಯನ್ನು ಚಿಕ್ಕಮಕ್ಕಳು ತಂದುಕೊಟ್ಟಾಗ ಅವರಿಗೆ ತುಂಬಾ ಹರುಷ ಉಕ್ಕಿ ಬಂದು ಮುದ್ದಿಸುತ್ತಿದ್ದರು. ತಮ್ಮ ಮಗಳನ್ನು ಗಂಡನ ಮನೆಗೆ ಕಳಿಸುವಾಗಲಂತೂ ಹೃದಯ ತುಂಬಿ ಅಂತಃಕರಣ ಸೂಸಿ ಚಿಕ್ಕಬಾಲಕರಂತೆ ಗಳಗಳನೆ ಅತ್ತು ಬಿಡುತ್ತಿದ್ದರು, ಕಣ್ಣೀರು ಹೊನಲಾಗಿ ಹರಿಯುತ್ತಿತ್ತು. ಇಂಥ ಪ್ರೀತಿಯ ಹೃದಯವನ್ನು ಹೊತ್ತುಕೊಂಡು ಶಾಲೆಯ ಕೆಲಸದಲ್ಲಿ ತೊಡಗಿದಾಗ ಶಾಲೆಯ ಮಕ್ಕಳೆಂದರೆ ತಮ್ಮ ಮಕ್ಕಳೆಂದು ಅವರಿಗೆ ತಾನೇ ತಾನಾಗಿ ಅನಿಸುತ್ತಿತ್ತು. ಮನೆಯಲ್ಲಿ ಮಕ್ಕಳದು ಒಂದು ಗುಂಪಾದರೆ, ಶಾಲೆಯಲ್ಲಿಯ ಮಕ್ಕಳದು ಇನ್ನೊಂದು ಗುಂಪು.

ಇಂಚಲರು ನಿಸರ್ಗದತ್ತ ಕವಿತ್ವ ಶಕ್ತಿಯನ್ನು ಪಡೆದ ಹುಟ್ಟು ಕವಿಗಳು, ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿಚಾರಗಳು ಅವರ ಎಷ್ಟೋ ಕವಿತೆಗಳಲ್ಲಿ ಕಂಡುಬರುತ್ತವೆ. ತೀರ ಸಣ್ಣ ಸಂಗತಿಯೂ ಕೂಡ ಅವರ ದೃಷ್ಟಿಯನ್ನು ತಪ್ಪಿ ಸಲು ಸಾಧ್ಯವಿರಲಿಲ್ಲ. ಈ ಮಾತಿಗೆ ಸಬಲವಾದ ಸಾಕ್ಷಿಯೆಂದರೆ ಕೆಳಗೆ ನಮೂದಿಸಿದ ಸಂಗತಿ.

ಅವರ ಮಗಳು ಗಂಡು ಮಗುವಿಗೆ ಜನ್ಮವಿತ್ತಿದ್ದಳು. ಅವಳು ಮಗುವನ್ನು ಕರೆದುಕೊಂಡು ತನ್ನ ಪತಿಗೃಹಕ್ಕೆ ಮರುದಿನ ಹೋಗುವವಳಿದ್ದಳು. ಈ ಸಂಗತಿಯಿಂದ ಅವರಿಗೆ ಆ ದಿನ ಹೃದಯದಲ್ಲಿ ತಳಮಳವೆನಿಸಿ ಬಹಳ ರಾತ್ರಿಯವರೆಗೆ ನಿದ್ರೆಯನ್ನೇ ಮಾಡಲಿಲ್ಲ. ಆ ಹೊತ್ತು ರಾತ್ರಿ ಅವರ ಬೇಗುದಿ ಹೆಚ್ಚಾಗಿ ಕಾವ್ಯಕಿಚ್ಚನ್ನು ಹೊತ್ತಿಸಿ ಅವರ ಲೇಖನಿಯಿಂದ ಸಾದಾ ಸಂಗತಿಯ ಮೇಲೆ ಕಾವ್ಯ ಪ್ರವಾಹವನ್ನೇ ಹರಿಸಿತು. ತಮ್ಮ ಮುದ್ದು ಮೊಮ್ಮಗನ ಮೇಲೆ ಬರೆದ 'ಪ್ರಶಾಂತ' ಎಂಬ ಸುಂದರ ಪದ್ಯ ಅವರ ನೈಜ ಕಾವ್ಯಶಕ್ತಿಗೆ ಸಾಕ್ಷಿಯಾಗಿದೆ. ಅದೊಂದು ಸುಂದರ ಕಾವ್ಯ. ಕೆಲವು ನುಡಿಗಳು ಇಲ್ಲಿವೆ.

## ಪ್ರಶಾಂತನ ನೆನಹು

'ನಿನ್ನ ನಗೆ ಮಲ್ಲಿಗೆಯು ಅಲ್ಲಲ್ಲಿ ಚೆಲ್ಲಿರಲು
ಮನೆತುಂಬಿ ಸೌರಭವು ಸೂಸಿತಂದು
ನಿನ್ನ ಚಿನ್ನಾಟಗಳ ಮುಗ್ಧ ಮೋಡಿಯು ತಾನು
ಮರುಳುಗೊಳಿಸಿದೆ ನಮ್ಮ ನಂದಿಗಿಂದು.
ಕೈಗೆತ್ತಿಕೊಂಡವರ ಉರದೊಡವೆಯಾಗಿ
ಒಗೆಯು ನಗಿಸುವ ಚೊಕ್ಕ ರವಿಚಿನ್ನವಾಗಿ
ಮೈಗೆ ಮಂಗಳವಾಗಿ ಕರುಳ ಕಣ್ಮಣಿಯಾಗಿ
ನಿತ್ಯವೂ ಕುಣಿಕುಣಿವ ಬೊಂಬೆಯಾಗಿ.
ನಮ್ಮ ಕರುಳಿನ ನೆನಹಿನಾಳದಲಿ ಹುದುಗಿರುವ
ಹಲವು ಚಿನ್ನಾಟಗಳ ಹವಳಮುತ್ತು
ಎಣಿಸಲಾರದೆ ಮತ್ತೆ ಗುಣಿಸಲಾರದೆ ನಿತ್ಯ
ಉರುಳುವವೇ ಹಗಲಿರುಳು ನಮ್ಮ ಹೊತ್ತು !
ಹುಣ್ಣಿಮೆಯ ಚಂದಿರನು ಅಮೃತವ ಕರೆಯುತ್ತ
ತಿಂಗಳಿಗೆ ಬರುವಂತೆ ಮತ್ತೆ ಬಾರೊ
ಮನವನಾವರಿಸಿರುವ ಮಾಯದ ಕತ್ತಲೆಯ
ಕಳೆಯುತ್ತ ಬೆಳಗಕ್ಕೆ ಮುದವ ಬೀರೊ !
ತಾಯಿಯ ಮಕ್ಕಳ ಮುಗ್ಧ ಮಧುರ ಆಲಾಪಗಳ
ಸಂಗೀತ ಕನಸಿನಲಿ ಕೇಳುತಿಹುದು

ಏನು ಹೇಳಲಿ ಕಂದ, ಮನೆ ಬರಿದು ಮನ ಬರಿದು
ಯಾವುದೋ ಕೊರಗು ತಾ ತುಂಬಿರುವದು !
ಜೀವನದ ರಂಗದಲಿ ನೆಳಲು ಬೆಳಕುಗಳಂತೆ
ಉದಯಾಸ್ತಗಳು ಸೃಷ್ಟಿ ನಿಯಮದಂತೆ
ತೋರಿಯಾಡಗುವ ತೆರದಿ ಸುಖ ದುಃಖಗಳ ರೀತಿ
ಇದುವೆ ಬಾಳಿನ ತಿರುಳು ಬರಿಯ ಸಂತೆ !'
( ೨೩-೨-೧೯೭೩ )

ಇಂಚಲರಿಗೆ ಚಿಕ್ಕಮಕ್ಕಳೆಂದರೆ ಎಲ್ಲಿಲ್ಲದ ಹರ್ಷ. ಅವರ ಹೆಮ್ಮೆಯ ಮೊಮ್ಮಗ ಪ್ರಶಾಂತ ಅವರಿಗೆ ಸದಾ ಸ್ಫೂರ್ತಿಯನ್ನು ನೀಡುತ್ತಿದ್ದ. ಆತನ ಆಟ ಪಾಟಗಳನ್ನು ನೋಡಬೇಕೆಂದೆನಿಸಿದರೆ ಸರಿ ರಾತ್ರಿಯಲ್ಲಿಯೂ ಎದ್ದು ನೋಡಿ ಸಂತೋಷಪಟ್ಟು ಇತರರನ್ನೂ ಸಂತೋಷ ಪಡಿಸುತ್ತಿದ್ದರು. ಅಜ್ಜನ ಹಾಸಿಗೆಯ ಮೇಲೆ ಸ್ವಚ್ಛಂದವಾಗಿ ಕುಣಿದಾಡಿ ನಲಿಯುವ ಹಕ್ಕು ಮಾತ್ರ ಅವನಿಗೊಬ್ಬನಿಗೇ ಮೀಸಲು. ಅವನು ಹುಟ್ಟಿದ ಸಂದರ್ಭ (೧೯೭೨, ಅಕ್ಟೋಬರ ೩) ದಲ್ಲಿ ಅವನನ್ನು ನೋಡಲು ಆಸ್ಪತ್ರೆಗೆ ಬಂದಾಗ ಮೊದಲು ಅವನ ಕೈಗೆ ಲೆಕ್ಕಣಿಕೆಯನ್ನು ಕೊಟ್ಟು—" ನೀನೂ ಒಬ್ಬ ಕನ್ನಡದ ಕವಿಯಾಗಿ ಬಾಳಿ ಬೆಳಗು " ಎಂದು ಆಶೀರ್ವದಿಸಿದರು. ಆ ಆಶೀರ್ವಚನ ಫಲಿಸುವ ಮೊದಲೇ 'ಕವಿ ವಿಭೂತಿ' ವಿಶ್ವಲೀನವಾಯಿತು !

" ಇನ್ನೇನು ಹಾಡುವುದು ? ನುಡಿಯೆಲ್ಲವೂ ಮೌನ
ನಮ್ಮ ಕಣ್ಮಣಿಯೊಂದು ವಿಶ್ವಚೇತನ ಲೀನ ! "[1]

1 ಶ್ರೀ. ಬಿ. ಎ. ಸನದಿ.